ಗುರುವಾರ, ಮಾರ್ಚ್ 13, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 72 | ಪುಟ16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಪರ್ವತಕ್ಕೂ 'ಮಾನವ ಸ್ಥಾನಮಾನ' ನೀಡಿದ್ದೇಕೆ?



ಆಳ-ಅಗಲ
ಮರ್ಯಾದೆಗೇಡು ಹತ್ಯೆ ಕೊನೆಯಾಗಲಿ ಕ್ರೌರ್ಯ

ಕಾರ್ಖಾನೆಗಳ ದೂಳಿಗೆ ಕಪ್ಪಾದ ಜನರ ಬದುಕು 9

'ಗ್ಯಾರಂಟಿ ಸಮಿತಿ ರದ್ದು ಮಾಡುವುದಿಲ್ಲ' 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,029	22,470	₹90,690 (ಬೆಂಗಳೂರು)	₹1.03 ಲಕ್ಷ (ಬೆಂಗಳೂರು)	87.22

ಪಾಕ್: ಒತ್ತೆಯಾಳುಗಳ ರಕ್ಷಣೆ, 33 ಉಗ್ರರ ಹತ್ಯೆ 13

'ಸುಂಕ ನೀತಿ: ಉಕ್ಕು ವಲಯಕ್ಕೆ ತೊಂದರೆ ಇಲ್ಲ' 12

ನೈರೋಬಿ, ಕೆನ್ಯಾದಿಂದ ದುಬೈ ಮೂಲಕ ಕಳ್ಳಸಾಗಣೆ: ಡಿಆರ್‌ಐ ತನಿಖಾ ವರದಿ

ಆಫ್ರಿಕಾವರೆಗೂ ಚಿನ್ನದ ಜಾಡು

• ಜಯಸಿಂಹ ಆರ್.

ಬೆಂಗಳೂರು: ನಟಿ ರನ್ಯಾ ರಾವ್ ಚಿನ್ನ ಕಳ್ಳಸಾಗಣೆ ಪ್ರಕರಣವು, ಆಫ್ರಿಕಾ ಮತ್ತು ದಕ್ಷಿಣ ಅಮೆರಿಕದ ದೇಶಗಳಿಂದ ಭಾರತಕ್ಕೆ ಚಿನ್ನ ಕಳ್ಳಸಾಗಣೆ ನಡೆಸುವ ಜಾಲದ ಕರಾಮತ್ತನ್ನು ಬಹಿರಂಗಗೊಳಿಸಿದೆ.

ಭಾರತಕ್ಕೆ ಪ್ರತಿ ವರ್ಷ ಬಂದು ಸೇರುವ ಚಿನ್ನದ ಪ್ರಮಾಣದಲ್ಲಿ ಶೇ 25–30ರಷ್ಟು ಕಳ್ಳಸಾಗಣೆ ಮೂಲಕ ದೇಶವನ್ನು ಪ್ರವೇಶಿಸುತ್ತಿದೆ. ಈ ಚಿನ್ನವು ದೂರದ ಕೆರೀಬಿಯನ್ ಹಾಗೂ ಆಫ್ರಿಕಾದ ದೇಶಗಳಿಂದ ಹೊರಟು ದುಬೈ ತಲುಪುತ್ತದೆ. ಅಲ್ಲಿಂದ ವಿಮಾನಗಳ ಮೂಲಕ ಭಾರತವನ್ನು ಪ್ರವೇಶಿಸುತ್ತದೆ ಎನ್ನುತ್ತದೆ ರೆವೆನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ತನಿಖಾ ವರದಿ.

2024 ಮತ್ತು 2025ರಲ್ಲಿ ಮುಂಬೈನಲ್ಲಿ ಪತ್ತೆಯಾದ ಪ್ರಕರಣದ ಜಂಟಿ ತನಿಖೆ ನಡೆಸುತ್ತಿರುವ ಸಿಬಿಐ ಮತ್ತು ಡಿಆರ್‌ಐ ಅಧಿಕಾರಿಗಳು, ಅದರ ಜಾಡು ಹಿಡಿದುಕೊಂಡು ಬೆಂಗಳೂರಿನವರೆಗೂ ಬಂದಿದ್ದಾರೆ. ಅವರ ಶಂಕೆಯಂತೆ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ, ಎರಡೇ ದಿನಗಳ ಅಂತರದಲ್ಲಿ ಕಳ್ಳಸಾಗಣೆ ಮಾಡಿದ್ದ ಒಟ್ಟು 18 ಕೆ.ಜಿ.ಗಿಂತಲೂ ಹೆಚ್ಚು ಚಿನ್ನ ಪತ್ತೆಯಾಗಿದೆ.

8ನೇ ಪುಟ ನೋಡಿ



ಕಲೆ: ಭಾನು ಪತ್ತಾರ್

ರನ್ಯಾ ರಾವ್‌ಗೆ ಸ್ವಾಮೀಜಿ 'ಕೃಪೆ'

ಚಿನ್ನವನ್ನು ಕಳ್ಳ ಸಾಗಣೆ ಮೂಲಕ ಬೆಂಗಳೂರಿಗೆ ತರಲು ರನ್ಯಾ ರಾವ್ ಅವರಿಗೆ ಪ್ರಭಾವಿ ರಾಜಕಾರಣಿಗಳ ಜತೆಗೆ ಸ್ವಾಮೀಜಿಯೊಬ್ಬರ 'ಕೃಪೆ'ಯೂ ಇತ್ತು ಎಂಬ ಸಂಗತಿಯನ್ನು ಡಿಆರ್‌ಐ ಹಾಗೂ ಸಿಬಿಐನ ಅಧಿಕಾರಿಗಳು ಪತ್ತೆಹಚ್ಚಿದ್ದಾರೆ.

8ನೇ ಪುಟ ನೋಡಿ

ಕಳ್ಳಸಾಗಣೆಯ ಪರಿ...

1. ಆಫ್ರಿಕಾದ ನೈರೋಬಿ, ಕೆನ್ಯಾ, ದಕ್ಷಿಣ ಅಮೆರಿಕದ ಬ್ರೆಜಿಲ್, ಕೊಲಂಬಿಯಾ ಮತ್ತು ಕೆರೀಬಿಯನ್ ದ್ವೀಪ ರಾಷ್ಟ್ರಗಳ ಗಣಿಗಳಿಂದ ತೆಗೆಯಲಾದ ಚಿನ್ನ ಕಳ್ಳಸಾಗಣೆ ಯಾಗುತ್ತದೆ. ನೈರೋಬಿ ವಿಮಾನ ನಿಲ್ದಾಣದಿಂದ ದುಬೈ ಮತ್ತು ಅಬುಧಾಬಿ ಮೂಲಕ ಬೇರೆ ದೇಶಗಳಿಗೆ ಹೋಗುವ ಅಂತರರಾಷ್ಟ್ರೀಯ ವಿಮಾನಗಳಲ್ಲಿ ಪ್ರಯಾಣಿಕರ ಸೋಗಿನಲ್ಲಿ ಚಿನ್ನ ಸಾಗಿಸುತ್ತಾರೆ.
2. ದುಬೈ ಅಥವಾ ಅಬುಧಾಬಿ ತಲುಪಿದ ನಂತರ, ನಿಲ್ದಾಣದಿಂದಲೇ ಬೇರೆ ದೇಶಗಳಿಗೆ ಹೋಗುವ ವಿಮಾನಗಳನ್ನು ಹಿಡಿಯುವ (ಟ್ರಾನ್ಸಿಟ್) ಅವಧಿಯಲ್ಲಿ ಈ ಪ್ರಯಾಣಿಕರು ಸರ್ವಿಸ್ ಹೋಟೆಲ್ ಅಥವಾ ವಿಮಾನ ನಿಲ್ದಾಣದ ಮೊಗಸಾಲೆಯಲ್ಲಿ ಉಳಿಯುತ್ತಾರೆ. ಆ ಸಮಯದಲ್ಲೇ ವಿಮಾನ ನಿಲ್ದಾಣ ಅಥವಾ ವಿಮಾನಯಾನ ಸಂಸ್ಥೆ ಅಥವಾ ಭದ್ರತಾ ಸಿಬ್ಬಂದಿಗೆ ಕಳ್ಳಸಾಗಣೆಯ ಚಿನ್ನವನ್ನು ಹಸ್ತಾಂತರಿಸುತ್ತಾರೆ.
3. ಕಳ್ಳಸಾಗಣೆ ಮಾಡುವ ಉದ್ದೇಶದಿಂದಲೇ ದುಬೈ ಅಥವಾ ಅಬುಧಾಬಿಗೆ ಹೋಗುವ ಭಾರತೀಯ ಪ್ರಯಾಣಿಕರು, ವಿಮಾನ ನಿಲ್ದಾಣದಲ್ಲಿ ಇಳಿದು ಹೊರ ಹೋಗುತ್ತಾರೆ. ಕೆಲ ತಾಸು ಅಥವಾ ದಿನ ಹೊರಗೆ ಉಳಿದು ವಿಮಾನ ನಿಲ್ದಾಣಕ್ಕೆ ಮರಳುತ್ತಾರೆ. ಅಲ್ಲಿ ತಪಾಸಣೆ ಮುಗಿದ ಬಳಿಕ ಚಿನ್ನವನ್ನು ಪಡೆಯುತ್ತಾರೆ.
4. ಭಾರತಕ್ಕೆ ಬಂದಿಳಿದ ನಂತರ ರಾಜತಾಂತ್ರಿಕ, ಅತಿಗಣ್ಯರು ಮತ್ತು ಶಿಷ್ಟಾಚಾರ ನಿಯಮಗಳಡಿ ಸಿಗುವ ಸೌಲಭ್ಯ ಮತ್ತು ವಿನಾಯಿತಿ ಮೂಲಕ ಕಸ್ಟಮ್ಸ್ ಅಧಿಕಾರಿಗಳ ತಪಾಸಣೆ ತಪ್ಪಿಸಿಕೊಂಡು ಹೊರಬರುತ್ತಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಕೆಪಿಎಸ್‌ಸಿ: 'ತಪ್ಪಿತಸ್ಥರಿಗೆ ಶಿಕ್ಷೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ ಪ್ರಾಥಮಿಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಭಾಷಾಂತರದಲ್ಲಿ ಲೋಪ ಎಸಗಿರುವವರನ್ನು ಕಪ್ಪುಪಟ್ಟಿಗೆ ಸೇರಿಸಿ, ಕ್ರಿಮಿನಲ್ ಮೊಕದ್ದಮೆ ಹೂಡಲು ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕೆಪಿಎಸ್‌ಸಿ ಪರೀಕ್ಷಾ ಲೋಪ ಮತ್ತು ಭ್ರಷ್ಟಾಚಾರದ ಕುರಿತು ನಡೆದ ಚರ್ಚೆಗೆ ವಿಧಾನಸಭೆಯಲ್ಲಿ ಬುಧವಾರ ಉತ್ತರ ನೀಡಿದ ಅವರು, 'ಎರಡು ಬಾರಿ ನಡೆದ ಪ್ರಾಥಮಿಕ ಪರೀಕ್ಷೆಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಕನ್ನಡಕ್ಕೆ ಭಾಷಾಂತರಿಸುವಾಗ ಲೋಪಗಳಾಗಿವೆ. ಈ ವಿಷಯವನ್ನು ನಮ್ಮ ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ' ಎಂದರು.

'384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ 2024ರ ಆಗಸ್ಟ್ 27ರಂದು ಪ್ರಾಥಮಿಕ ಪರೀಕ್ಷೆ ನಡೆಸಲಾಗಿತ್ತು. ಆಗ ಕನ್ನಡ ಪ್ರಶ್ನೆ ಪತ್ರಿಕೆಗಳಲ್ಲಿ ತಪ್ಪುಗಳಿರುವ ದೂರುಗಳು ಬಂದಿದ್ದವು. ತಕ್ಷಣವೇ ಕೆಪಿಎಸ್‌ಸಿ ಅಧಿಕಾರಿಗಳನ್ನು ಕರೆದು ಚರ್ಚಿಸಿದ್ದೆ. ಹತ್ತು ಪ್ರಶ್ನೆಗಳಲ್ಲಿ ತಪ್ಪುಗಳಾಗಿವೆ ಎಂದು ವರದಿ ನೀಡಿದ್ದರು. ಆ ಬಳಿಕ ಮರು ಪರೀಕ್ಷೆಗೆ ಸೂಚಿಸಲಾಗಿತ್ತು' ಎಂದು ತಿಳಿಸಿದರು.

9ನೇ ಪುಟ ನೋಡಿ

ತಿದ್ದುಪಡಿ ಮಸೂದೆ ಮಂಡನೆ

ಕೆಪಿಎಸ್‌ಸಿಯಲ್ಲಿ ಜಂಟಿ ಪರೀಕ್ಷಾ ನಿಯಂತ್ರಕರ ನೇಮಕಕ್ಕೆ ಅವಕಾಶ ಕಲ್ಪಿಸುವ ಮತ್ತು ಸಂದರ್ಶನ ಪ್ರಕ್ರಿಯೆಯಲ್ಲಿ ಕೆಲವು ಬದಲಾವಣೆಗಳನ್ನು ತರುವ 'ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) (ತಿದ್ದುಪಡಿ) ಮಸೂದೆ- 2025' ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ಬುಧವಾರ ಮಂಡಿಸಿದರು.

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಯಲ್ಲಿ 'ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ ನಿಯಂತ್ರಿಸುವ ನಿಯಮ'ಗಳ ಪ್ರಕಾರ ಸಂದರ್ಶನ ನಡೆಸಬೇಕು ಎಂದು ತಿದ್ದುಪಡಿಯಲ್ಲಿ ಹೇಳಲಾಗಿದೆ.

'ನಾನೇ ಅವಧಿ ಪೂರ್ಣಗೊಳಿಸುವೆ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ನಾನೇ ಮುಖ್ಯಮಂತ್ರಿ ಆಗಿರುತ್ತೇನೆ. ಈ ಅವಧಿಯನ್ನೂ ನಾನೇ ಪೂರ್ಣಗೊಳಿಸುತ್ತೇನೆ. ಮುಂದಿನ ಸರ್ಕಾರವೂ ನಮ್ಮದೇ' ಎಂದು ಸಿದ್ದರಾಮಯ್ಯ ಹೇಳಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ರಚಿಸಿರುವ ಸಮಿತಿಗಳ ಅಧ್ಯಕ್ಷ ಹುದ್ದೆ ರದ್ದು ಮಾಡಬೇಕೆಂಬ ಪ್ರತಿಪಕ್ಷ ಸದಸ್ಯರ ಆಗ್ರಹಕ್ಕೆ ವಿಧಾನಸಭೆಯಲ್ಲಿ ಸಿದ್ದರಾಮಯ್ಯ ಅವರು ಬುಧವಾರ ಉತ್ತರ ನೀಡುತ್ತಿದ್ದರು. ಈ ವೇಳೆ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು, 'ನೀವು ಇಂತಹ ತಪ್ಪುಗಳನ್ನು (ಗ್ಯಾರಂಟಿ ಸಮಿತಿ ರಚನೆ) ಮಾಡಿದರೆ ಮುಂದೆ ಅಧಿಕಾರಕ್ಕೆ ಬರುವ ಸರ್ಕಾರಗಳು ಅದನ್ನೇ ಮುಂದುವರಿಸುತ್ತವೆ' ಎಂದರು.

ಆಗ ಸಿದ್ದರಾಮಯ್ಯ ಅವರು, 'ನಾನು ಈ ಅವಧಿ ಪೂರ್ಣಗೊಳಿಸುತ್ತೇನೆ. ಮುಂದಿನ ಬಾರಿಯೂ ಬಿಜೆಪಿಯವರು ಗೆಲ್ಲುವುದಿಲ್ಲ. ನೂರಕ್ಕೆ ನೂರು ನಾವೇ ಮತ್ತೆ ಗೆದ್ದು ಬರುತ್ತೇವೆ' ಎಂದರು.

'ಅಕ್ಟೋಬರ್‌ಗೆ ನಿಮ್ಮ ಅವಧಿ ಮುಗಿಯುತ್ತೆ ಎನ್ನುತ್ತಾರೆ. ನೀವು ಐದು ವರ್ಷ ಪೂರೈಸಿ ಅಂತಲೇ ನಾವು ಬಯಸುತ್ತೇವೆ. ಐದು ವರ್ಷ ಸರ್ಕಾರ ಇದ್ದರೆ ಅದೇ ಪುಣ್ಯ' ಎಂದು ಅಶೋಕ ಕಾಲೆಳದಾಗ, 'ಮುಂದಿನ ಐದು ವರ್ಷ ಅಲ್ಲ; 25 ವರ್ಷ ನಾವೇ ಬರ್ತೇವೆ' ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು.

6ನೇ ಪುಟ ನೋಡಿ

ಗುರುವಾರದ ಉಷ್ಣಾಂಶ 33° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

ಮುನ್ಸೂಚನೆ: ಶುಕ್ರವಾರ 33° 20° | ಶನಿವಾರ 33° 19° | ಭಾನುವಾರ 33° 19°

ಮತ್ತೆ ಎರಡು ಕೋಳಿ ಸಾವು: ಪ್ರಯೋಗಾಲಯಕ್ಕೆ ಮಾದರಿ

ಚಿಕ್ಕಬಳ್ಳಾಪುರ: ನಗರದಲ್ಲಿ ಬುಧವಾರ ಎರಡು ನಾಟಿಕೋಳಿ ಮೃತಪಟ್ಟಿದ್ದು, ಕೋಳಿಗಳ ಮಾದರಿಯನ್ನು ಪಶುಸಂಗೋಪನಾ ಇಲಾಖೆಯು ಬೆಂಗಳೂರಿನ ಹೆಬ್ಬಾಳ ಪ್ರಯೋಗಾಲಯಕ್ಕೆ ರವಾನಿಸಿದೆ.

ಕೋಳಿಗಳು ಹಕ್ಕಿಜ್ವರದಿಂದ ಮೃತಪಟ್ಟಿವೆಯೇ ಅಥವಾ ಬೇರೆ ಕಾರಣದಿಂದ ಮೃತಪಟ್ಟಿವೆಯೇ ಎಂದು ದೃಢಪಡಿಸಿಕೊಳ್ಳಲು ಮಾದರಿಯನ್ನು ಪರೀಕ್ಷೆಗೆ ಕಳುಹಿಸಿದ್ದೇವೆ ಎಂದು ಇಲಾಖೆ ಉಪನಿರ್ದೇಶಕ ರಂಗಪ್ಪ 'ಪ್ರಜಾವಾಣಿ'ಗೆ ತಿಳಿಸಿದರು. ಬಿಸಿಲಿನ ಧಗೆಯಿಂದ ಮೃತಪಟ್ಟಿರಬಹುದು. ಇಲ್ಲವೇ ಬೇರೆ ಕಾಯಿಲೆಯಿಂದ ಮೃತಪಟ್ಟಿರುವ ಸಾಧ್ಯತೆ ಇದೆ ಎಂದರು.

'ಎಲ್ಲವನ್ನೂ ಬರೆಯಲಾಗದ ಸಂದಿಗ್ಧ ಸ್ಥಿತಿ'

ಗಿರಿಜಾ ಲೋಕೇಶ್, ಎನ್. ಗಾಯತ್ರಿಗೆ 'ರಾಜಲಕ್ಷ್ಮಿ ಬರಗೂರು ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದ್ದು, ಎಲ್ಲವನ್ನೂ ಬರೆಯಲಾಗದ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವಿದ್ದೇವೆ ಎಂದು ಲೇಖಕಿ ಎನ್. ಗಾಯತ್ರಿ ಬೇಸರ ವ್ಯಕ್ತಪಡಿಸಿದರು.

ನಾಡೋಜ ಡಾ. ಬರಗೂರು ಪ್ರತಿಷ್ಠಾನ ಬುಧವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕಲಾವಿದೆ ಗಿರಿಜಾ ಲೋಕೇಶ್ ಅವರ ಜತೆಗೆ 'ರಾಜಲಕ್ಷ್ಮಿ ಬರಗೂರು ಪ್ರಶಸ್ತಿ' ಸ್ವೀಕರಿಸಿ, ಮಾತನಾಡಿದರು. ಈ ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ.

'ಕನ್ನಡ ಸಾಹಿತ್ಯ, ಭಾರತೀಯ ಸಾಹಿತ್ಯಕ್ಕೆ ಬಿಕ್ಕಟ್ಟಿನ ಕ್ಷಣ ಇದಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲದೆ ಯಾವುದೇ ಬರಹಗಾರ ಅಥವಾ ಕಲಾವಿದ ತನ್ನ ಪ್ರತಿಭೆ ತೋರಿಸಲು ಸಾಧ್ಯವಿಲ್ಲ. ವಿವಿಧ ಅಸ್ಮಿತೆ, ಅನುಭವಗಳು ಸೇರಿ ಎಲ್ಲವನ್ನು ಮತಾಂಧ ದೃಷ್ಟಿಕೋನದಿಂದ ನೋಡುವ ವಿಷ ಮನಸ್ಸುಗಳ ನಡುವೆ ಏನನ್ನು ಬರೆಯಬೇಕು? ಏನನ್ನು ಬರೆಯಬಾರದು ಎಂಬುದು ತಿಳಿಯದಾಗಿದೆ. ಜನರ ಬಗ್ಗೆ ಬರೆಯಬೇಕಾದರೆ, ಮಾತನಾಡಬೇಕಾದರೆ ಅಲ್ಲಿ ಪ್ರಭುತ್ವ, ಜಾತಿ ಮತ್ತು ಶಕ್ತಿಗಳು ಅಡ್ಡ ಬಂದು ಅಭಿವ್ಯಕ್ತಿ ಸ್ವಾತಂತ್ರ್ಯ ಹಿಸುಕಿ ಹಾಕುತ್ತಿವೆ' ಎಂದರು.

'ಬಾಲ್ಯದಲ್ಲಿಯೇ ರಾಜ್‌ಕುಮಾರ್ ಅವರ ಜತೆಗೆ ಅಭಿನಯಿಸುವ ಅವಕಾಶ ದೊರೆತಿತ್ತು. ಸಾವಿರಾರು ನಾಟಕ ಪ್ರದರ್ಶನಗಳಲ್ಲಿ ಅಭಿನಯಿಸಿದ್ದೇನೆ. ಆದರೆ, ಎಂದೂ ನಾನು ಉತ್ತಮ ಕಲಾವಿದೆ ಅಂದುಕೊಳ್ಳಲಿಲ್ಲ. ನನಗೆ ಬಂದ ಸಂಭಾವನೆಯನ್ನು ಸಂಕಷ್ಟದಲ್ಲಿರುವ ಹಾಗೂ ಅನಾರೋಗ್ಯ ಸಮಸ್ಯೆ ಇರುವ ಕಲಾವಿದರಿಗೆ ಒದಗಿಸುತ್ತಿದ್ದೇನೆ ಎಂದು ಹೇಳಿದರು.

ಲೇಖಕಿ ಸಬಿಹಾ ಭೂಮಿಗೌಡ ಪ್ರಶಸ್ತಿ ಪ್ರದಾನ ಮಾಡಿದರು. ಸುಂದರ್ ರಾಜ್ ಅಧ್ಯಕ್ಷತೆ ವಹಿಸಿದ್ದರು.



ಸಮಾರಂಭದಲ್ಲಿ ಎನ್. ಗಾಯತ್ರಿ ಮತ್ತು ಗಿರಿಜಾ ಲೋಕೇಶ್ ಅವರಿಗೆ 'ರಾಜಲಕ್ಷ್ಮಿ ಬರಗೂರು ಪ್ರಶಸ್ತಿ' ಪ್ರದಾನ ಮಾಡಲಾಯಿತು. ಸುಂದರರಾಜ್ ಅರಸ್, ಸಬಿಹಾ ಭೂಮಿಗೌಡ, ಬರಗೂರು ರಾಮಚಂದ್ರಪ್ಪ, ಸುಂದರರಾಜ್ ಮತ್ತು ಶ್ರೀನಿವಾಸ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ರೈಲುಗಳ ತಾತ್ಕಾಲಿಕ ನಿಲುಗಡೆ ಮುಂದುವರಿಕೆ

ಬೆಂಗಳೂರು: ಚಿಕ್ಕಬಾಣಾವರ ರೈಲು ನಿಲ್ದಾಣದಲ್ಲಿ ಇಂಟರ್‌ಸಿಟಿ ಎಕ್ಸ್‌ಪ್ರೆಸ್ ರೈಲು ಮತ್ತು ನಾಯಂಡಹಳ್ಳಿ ರೈಲು ನಿಲ್ದಾಣದಲ್ಲಿ ಮೆಮು ರೈಲುಗಳ ತಾತ್ಕಾಲಿಕ ನಿಲುಗಡೆಯನ್ನು ನೈರುತ್ಯ ರೈಲ್ವೆ ಮುಂದುವರಿಸಿದೆ.

ಯಶವಂತಪುರ ಮತ್ತು ಶಿವಮೊಗ್ಗ ನಡುವೆ ನಿತ್ಯ ಸಂಚರಿಸುವ ಇಂಟರ್‌ಸಿಟಿ ಎಕ್ಸ್‌ಪ್ರೆಸ್ ರೈಲುಗಳಿಗೆ ಚಿಕ್ಕಬಾಣಾವರ ನಿಲ್ದಾಣದಲ್ಲಿದ್ದ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆ ಜೂನ್ 15ರ ವರೆಗೆ ಮುಂದುವರಿಸಲಾಗಿದೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮತ್ತು ಅಶೋಕಪುರಂ ನಿಲ್ದಾಣಗಳ ನಡುವೆ ನಿತ್ಯ ಸಂಚರಿಸುವ ಮೆಮು ವಿಶೇಷ ರೈಲುಗಳಿಗೆ ನಾಯಂಡಹಳ್ಳಿ ನಿಲ್ದಾಣದಲ್ಲಿದ್ದ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆ ಮುಂದಿನ ಸೂಚನೆ ವರೆಗೂ ಮುಂದುವರಿಸಲಾಗಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಜನ ಚಳವಳಿಗಳ ಬಜೆಟ್ ಅಧಿವೇಶನ: 'ಕಾರ್ಮಿಕರು ಮತ್ತು ಬಜೆಟ್ ಧೋರಣೆಗಳು': ಜಿ.ಆರ್. ಶಿವಶಂಕರ್, ಪಿ.ಪಿ. ಅಪ್ಪಣ್ಣ, ಶಾಮಣ್ಣ ರೆಡ್ಡಿ, ವರದರಾಜೇಂದ್ರ, ಅಧ್ಯಕ್ಷತೆ: ಕೆ.ವಿ. ಭಟ್, ವಿಷಯ ಮಂಡನೆ: ಮೀನಾಕ್ಷಿ ಸುಂದರಂ, ಸತ್ಯಾನಂದ, ಮೈತ್ರೇಯಿ ಕೃಷ್ಣನ್, 'ಸಾಮಾಜಿಕ ಭದ್ರತೆ, ಮೂಲಭೂತ ಹಕ್ಕುಗಳು ಹಾಗೂ ಬಜೆಟ್ ಧೋರಣೆಗಳು': ಕೆ. ಮಹಾಂತೇಶ್, ಅಧ್ಯಕ್ಷತೆ: ಚಾಮರಸ ಮಾಲೀ ಪಾಟೀಲ, 'ಸಮಾನ ಶಿಕ್ಷಣ ಮತ್ತು ಬಜೆಟ್': ಶ್ರೀಪಾದ ಭಟ್, 'ಜನಾರೋಗ್ಯ ಮತ್ತು ಬಜೆಟ್': ಡಾ. ಅನಿಲ್ ಕುಮಾರ್ ಅವುಲಪ್ಪ, 'ಉದ್ಯೋಗ ಮತ್ತು ಬಜೆಟ್': ಮುನೀರ್ ಕಾಟಿಪಳ್ಳ, 'ವಸತಿ ಮತ್ತು ಬಜೆಟ್': ಕುಮಾರ್ ಸಮತಲ, 'ಸಮಾರೋಪ ಮತ್ತು ಜನಾಗ್ರಹ ಘೋಷಣೆ': ಎಸ್. ವರಲಕ್ಷ್ಮಿ, ಅಧ್ಯಕ್ಷತೆ: ಎಸ್.ಆರ್. ಹಿರೇಮಠ, ಉಪಸ್ಥಿತಿ: ಬಡಗಲಪುರ ನಾಗೇಂದ್ರ, ಎಚ್.ಆರ್. ಬಸವರಾಜಪ್ಪ, ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡು, ನೂರ್ ಶ್ರೀಧರ್, ಆಯೋಜನೆ: ಸಂಯುಕ್ತ ಹೋರಾಟ–ಕರ್ನಾಟಕ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಬೆಳಿಗ್ಗೆ 10.30ರಿಂದ




ಹಿರೇಮಠ

ಡಾ.ಎಚ್.ಕೆ. ಮರಿಯಪ್ಪ ದತ್ತಿ ಪ್ರಶಸ್ತಿ ಪ್ರದಾನ: ಎನ್.ಕೆ. ವೆಂಕಟರಮಣ, ಉದ್ಘಾಟನೆ: ಎನ್.ಕೆ. ಸುಧೀಂದ್ರ ರಾವ್, ಅಧ್ಯಕ್ಷತೆ: ಮಹೇಶ ಜೋಶಿ, ಅತಿಥಿ: ಬಿ.ಟಿ. ಜಯಮುದ್ದಪ್ಪ, ಪ್ರಶಸ್ತಿ ಸ್ವೀಕರಿಸುವವರು: ಡಾ. ಸೀಮಾ ರಾಣ ಎಂ.ವಿ., ಆಯೋಜನೆ ಮತ್ತು ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 11.30

ದಾಸರ ಪದಗಳ ಗಾಯನ: ಅಹಿಕಾ ನಾಗದೀಪ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯರಸ್ತೆ, 5ನೇ ಬಡಾವಣೆ, ಜಯನಗರ, ಸಂಜೆ 5.30

ಕೆ.ಎಚ್. ಪಾಟೀಲ ಜನ್ಮಶತಮಾನೋತ್ಸವ ಆಚರಣೆ, ಕೆ.ಎಚ್. ಪಾಟೀಲ ಸ್ಕೂಲ್ ಆಫ್ ಲಾ ಉದ್ಘಾಟನಾ ಸಮಾರಂಭ: ಎಂ.ಎನ್. ವೆಂಕಟಾಚಲಯ್ಯ, ಉಪಸ್ಥಿತಿ: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ಜಿ. ಪರಮೇಶ್ವರ, ಲಾಂಛನ ಅನಾವರಣ: ಎಂ. ವೀರಪ್ಪ ಮೊಯಿಲಿ, ಆಯೋಜನೆ: ಸಹಕಾರ ಭೀಷ್ಮ ಕೆ.ಎಚ್. ಪಾಟೀಲ ಅಭಿಮಾನಿಗಳ ಬಳಗ, ಬೆಂಗಳೂರು ನಗರದ ವಿವಿಧ ಸಹಕಾರ ಸಂಘಗಳು, ಸಹಕಾರ ಭೀಷ್ಮ ಕೆ.ಎಚ್. ಪಾಟೀಲ ಮೆಮೋರಿಯಲ್ ಟ್ರಸ್ಟ್, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 6



ವೆಂಕಟಾಚಲಯ್ಯ

ರಂಗ ಯುಗಾದಿ: 'ಮಹಿಳೆ ಮತ್ತು ರಂಗಭೂಮಿ' ವಿಚಾರ ಮಂಡನೆ: ಸುಷ್ಮಾ ಎಸ್.ವಿ., ಶ್ವೇತಾ ಶ್ರೀನಿವಾಸ್, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ 'ಅಣ್ಣನ ನೆನಪು' ಸಾಕ್ಷ್ಯ ನಾಟಕ ಪ್ರದರ್ಶನ: ರಂಗರೂಪ: ಕರಣಂ ಪವನ್ ಪ್ರಸಾದ್, ನಿರ್ದೇಶನ: ಹನು ರಾಮಸಂಜೀವ, ತಂಡ: ಪ್ರವರ ಥಿಯೇಟರ್, ಆಯೋಜನೆ: ಅಂತರಂಗ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

15ಕ್ಕೆ ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರದ ವಾರ್ಷಿಕೋತ್ಸವ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿರುವ (ಬಿಸಿಯು) ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರದ 40ನೇ ವಾರ್ಷಿಕೋತ್ಸವ ಸಮಾರಂಭವನ್ನು ಇದೇ 15ರಂದು ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಬಿಸಿಯು ಹಾಗೂ ಜಪಾನ್ ಕಾನ್ಸುಲೇಟ್ ಜನರಲ್ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ 'ಜಪಾನ್‌ನಲ್ಲಿ ಇಂದಿನ ಉದ್ಯೋಗಾವಕಾಶಗಳು' ಕುರಿತು ವಿಚಾರಸಂಕಿರಣ ನಡೆಯಲಿದೆ. ಹಾಗೆಯೇ, 'ಕೊಮ್ಮೆ ಡಿನ್ನರ್' ಹಾಗೂ 'ಟೈಮ್ ಸ್ಕೂಪ್ ಹಂಟರ್' ಎಂಬ ಎರಡು ಜಪಾನಿ ಚಲನಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸಲು ಹಾಗೂ ಚಲನಚಿತ್ರಗಳ ಪ್ರದರ್ಶನವನ್ನು ಉಚಿತವಾಗಿ ವೀಕ್ಷಿಸಲು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹೆಸರು ನೋಂದಾಯಿಸಬಹುದು ಎಂದು ಆಯೋಜಕರು ತಿಳಿಸಿದ್ದಾರೆ.

ನೋಂದಣಿಗಾಗಿ ಸ್ಕ್ಯಾನ್ ಮಾಡಿ

ಕಾಡುಗೋಡಿ ಠಾಣೆಯ ಪೊಲೀಸರ ಕಾರ್ಯಾಚರಣೆ

ಅಕ್ರಮ ವಾಸ: ಬಾಂಗ್ಲಾ ಪ್ರಜೆ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲಸಿದ್ದ ಬಾಂಗ್ಲಾದೇಶದ ಪ್ರಜೆಯನ್ನು ಕಾಡುಗೋಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಹಮ್ಮದ್ ಸಿದ್ದಿಕ್ (55) ಬಂಧಿತ.

'ಕಾಡುಗೋಡಿಯ ದೊಡ್ಡಬನಹಳ್ಳಿ ಬಳಿ ಬಾಡಿಗೆ ಮನೆ ಪಡೆದು, ಪತ್ನಿ ಹಾಗೂ ಮಕ್ಕಳ ಜತೆಗೆ ಮಹಮ್ಮದ್ ಸಿದ್ದಿಕ್ ನೆಲಸಿದ್ದ. ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'2006ರಲ್ಲಿ ಸಿದ್ದಿಕ್ ಭಾರತಕ್ಕೆ ಬಂದಿದ್ದ. ಪಶ್ಚಿಮ ಬಂಗಾಳದ ಶಾಲೆಯೊಂದರಿಂದ ವರ್ಗಾವಣೆ ಪತ್ರ ಪಡೆದಂತೆ ನಕಲಿ ದಾಖಲೆ ತಯಾರಿಸಿ ಕೊಂಡಿದ್ದ. ಅದೇ ದಾಖಲೆಯನ್ನು ಬಳಸಿಕೊಂಡು ಪಾಸ್‌ಪೋರ್ಟ್, ಮತದಾರರ ಗುರುತಿನ ಚೀಟಿ, ಪಾನ್ ಕಾರ್ಡ್ ಸೇರಿದಂತೆ ಅಗತ್ಯ ದಾಖಲೆಗಳನ್ನು ಮಾಡಿಸಿಕೊಂಡಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಇತರರಿಗೂ ದಾಖಲೆ: 'ಆರೋಪಿ ಮಹಮ್ಮದ್ ಸಿದ್ದಿಕ್ ತಾನು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಳ್ಳುವ ಜತೆಗೆ ಹಣ ಪಡೆದುಕೊಂಡು ಇತರರಿಗೂ ನಕಲಿ ದಾಖಲೆಗಳನ್ನು ಮಾಡಿಸಿಕೊಟ್ಟಿದ್ದ. ಇದೇ ರೀತಿ 20 ಮಂದಿಗೆ ನಕಲಿ ದಾಖಲೆಗಳನ್ನು ಮಾಡಿಸಿಕೊಟ್ಟಿರುವ ಮಾಹಿತಿ ಸಿಕ್ಕಿದ್ದು, ತನಿಖೆ ಮುಂದುವರೆಸಲಾಗಿದೆ. ಆರೋಪಿಯ ಮನೆಯಲ್ಲಿ ಶೋಧ ನಡೆಸಿದಾಗ ಎಂಟು ನಕಲಿ ಆಧಾರ್ ಕಾರ್ಡ್‌ಗಳು ಪತ್ತೆಯಾಗಿದ್ದು, ಅವುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಥಣಿಸಂದ್ರದ ಏಜೆಂಟ್ ಒಬ್ಬರು ನಕಲಿ ದಾಖಲೆಗಳನ್ನು ತಯಾರಿಸಿಕೊಟ್ಟಿದ್ದರು ಎಂಬುದಾಗಿ ವಿಚಾರಣೆ ವೇಳೆ ಆರೋಪಿ ಬಾಯ್ಬಿಟ್ಟಿದ್ದಾನೆ. ಆರೋಪಿ ಹೇಳಿಕೆ ಆಧರಿಸಿ ತನಿಖೆ ಮುಂದುವರೆಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ನಕಲಿ ಕೀ ಬಳಸಿ ಬೈಕ್ ಕಳ್ಳತನ: ಆರೋಪಿ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ನಕಲಿ ಕೀ ಬಳಸಿ ರಸ್ತೆಯ ಬದಿ ಹಾಗೂ ಮನೆಗಳ ಎದುರು ನಿಲುಗಡೆ ಮಾಡಿದ್ದ ಬೈಕ್‌ಗಳ ಹ್ಯಾಂಡಲ್ ಲಾಕ್ ತೆಗೆದು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ವೈಟ್‌ಫೀಲ್ಡ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ವೈಟ್‌ಫೀಲ್ಡ್ ನಿವಾಸಿ ಲೋಹಿತ್ (26) ಬಂಧಿತ ಆರೋಪಿ.

ಆರೋಪಿಯಿಂದ ₹7 ಲಕ್ಷ ಮೌಲ್ಯದ 10 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಠಾಣಾ ವ್ಯಾಪ್ತಿಯ ಹಿಮ್ಮಡಿಹಳ್ಳಿಯಲ್ಲಿ ದೂರುದಾರರು ನೆಲಸಿದ್ದರು. ಜನವರಿ 18ರಂದು ಅಪಾರ್ಟ್‌ಮೆಂಟ್‌ನ ಪಾರ್ಕಿಂಗ್ ಸ್ಥಳದಲ್ಲಿ ಬೈಕ್ ಅನ್ನು ನಿಲುಗಡೆ ಮಾಡಿದ್ದರು. ಅಪಾರ್ಟ್‌ಮೆಂಟ್‌ನ ಪಾರ್ಕಿಂಗ್ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ನಕಲಿ ಕೀ ಬಳಸಿ ಬೈಕ್‌ನ ಹ್ಯಾಂಡಲ್ ತೆಗೆದು ಕಳ್ಳತನ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

'ವರ್ತೂರಿನ ಮಧುರಾನಗರದ ಮೂರನೇ ಹಂತದಲ್ಲಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಬೈಕ್ ಕಳ್ಳತನ ಮಾಡುತ್ತಿರುವುದಾಗಿ ಆರೋಪಿ ವಿಚಾರಣೆ ತಪ್ಪೊಪ್ಪಿಕೊಂಡಿದ್ದಾನೆ. ಆರೋಪಿಯನ್ನು ಹೆಚ್ಚಿನ ವಿಚಾರಣೆಗೆ ತಮ್ಮ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಮಾನನಷ್ಟ ಪ್ರಕರಣ: ₹10 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನನಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿಯ ನೌಕರರು ಮತ್ತು ಅಧಿಕಾರಿಗಳ ಕಲ್ಯಾಣ ಸಂಘಕ್ಕೆ ಬಿಬಿಎಂಪಿ ಪ್ರಥಮ ದರ್ಜೆ ಸಹಾಯಕ(ಎಫ್‌ಡಿಎ) ಮಾಯಣ್ಣ ಅವರು ₹10 ಲಕ್ಷ ದಂಡ ಪಾವತಿಸುವಂತೆ ನಗರ ಸಿಟಿ ಸಿವಿಲ್ ಸೆಷನ್ಸ್ ನ್ಯಾಯಾಲಯ ಆದೇಶ ನೀಡಿದೆ.

ಮೂರು ತಿಂಗಳ ಒಳಗಾಗಿ ಸಂಘಕ್ಕೆ ಹಣ ಪಾವತಿಸುವಂತೆ ನ್ಯಾಯಾಧೀಶೆ ರೇಣುಕಾ ಡಿ. ರಾಯ್ಕರ್ ಆದೇಶಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ತಡೆಯಾಜ್ಞೆಯನ್ನೂ ನೀಡಿದೆ.

ಮಾಯಣ್ಣ ಅವರು ಅಪ ಪ್ರಚಾರ ಮಾಡಿ ಸಂಘದ ಅಧ್ಯಕ್ಷ ಹಾಗೂ ಪದಾಧಿಕಾರಿಗಳಿಗೆ ಮಾನಸಿಕ ಹಿಂಸೆ ಮತ್ತು ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಅವರ ವಿರುದ್ಧ ಮಾನನಷ್ಟ ಪ್ರಕರಣ ದಾಖಲಿಸಲಾಗಿತ್ತು.

'ಬಜೆಟ್‌ನಲ್ಲಿ ರೈತರಿಗೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ರೈತರಿಗೆ ಮಹತ್ವದ ಯೋಜನೆಗಳನ್ನು ಪ್ರಕಟಿಸದೇ ದ್ರೋಹ ಎಸಗಿದ್ದಾರೆ ಎಂದು ಆರೋಪಿಸಿ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರೈತರು ಪ್ರತಿಭಟನೆ ನಡೆಸಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಈ ಬಾರಿಯ ಬಜೆಟ್‌ನಲ್ಲಿ ರೈತರನ್ನು ಲೆಕ್ಕಕ್ಕೆ ಇಲ್ಲದಂತೆ ತಿರಸ್ಕಾರ ಮಾಡಲಾಗಿದೆ. ಕೃಷಿ ಕಾಯ್ದೆಯನ್ನು ರದ್ದುಪಡಿಸುತ್ತೇವೆ ಎಂದು ಭರವಸೆ ನೀಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಸರ್ಕಾರವು ಎರಡು ವರ್ಷ ಕಳೆದರೂ ಕೃಷಿ ಕಾಯ್ದೆಯನ್ನು ಮುಂದುವರೆಸಿದೆ. ಹೂಡಿಕೆದಾರರ ಸಮಾವೇಶ ನಡೆಸಿ ಕೋಟ್ಯಂತರ ರೂಪಾಯಿ ಬಂಡವಾಳ ಹರಿದು ಬರಲಿದೆ ಎಂದು ಆಸೆ ತೋರಿಸಿ ರೈತರ ಜಮೀನು ಕಸಿದುಕೊಳ್ಳಲಾಗುತ್ತಿದೆ ಎಂದು ರೈತರು ಆರೋಪಿಸಿದರು.

ರೈತರ ಜಮೀನು ಕಸಿದುಕೊಂಡು ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ನೀಡಲಾಗುತ್ತಿದೆ. ಇದು ರೈತರಿಗೆ ಮಾಡುತ್ತಿರುವ ದ್ರೋಹ ಎಂದು ಪ್ರತಿಭಟನಕಾರರು ಆರೋಪಿಸಿದರು.

ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ರಾಜ್ಯ ಕಾರ್ಯಾಧ್ಯಕ್ಷ ಭಕ್ತರಹಳ್ಳಿ ಬೈರೇಗೌಡ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಪ್ರತಿಭಟನಕಾರರಿಂದ ಮನವಿ ಸ್ವೀಕರಿಸಿದರು.



ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು



ಬುದ್ಧ ಭೂಮಿ ಪ್ರತಿಷ್ಠಾನದ ಪದಾಧಿಕಾರಿಗಳು, ಬೌದ್ಧ ಬಿಕ್ಕುಗಳು ವಿಶೇಷ ತಹಶೀಲ್ದಾರ್ ಮಹೇಶ್ ಅವರಿಗೆ ಮನವಿ ಸಲ್ಲಿಸಿದರು

'ಬೌದ್ಧ ಬಿಕ್ಕುಗಳಿಗೆ ಬೌದ್ಧ ವಿಹಾರ ಆಡಳಿತ ವಹಿಸಲು ಆಗ್ರಹ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಿಹಾರದ ಪವಿತ್ರ ಸ್ಥಳ ಬುದ್ಧಗಯಾದ ಬೌದ್ಧ ವಿಹಾರದ ಆಡಳಿತದ ಜವಾಬ್ದಾರಿಯನ್ನು ಬೌದ್ಧ ಬಿಕ್ಕುಗಳಿಗೆ ನೀಡಬೇಕೆಂದು ಆಗ್ರಹಿಸಿ ದೊಡ್ಡಬನಹಳ್ಳಿಯ ಬುದ್ಧ ಭೂಮಿ ಪ್ರತಿಷ್ಠಾನದ ಪದಾಧಿಕಾರಿಗಳು ಬೌದ್ಧ ಬಿಕ್ಕುಗಳೊಂದಿಗೆ ಕೆ.ಆರ್.ಪುರದ ಬಿಬಿಎಂಪಿ ಕಚೇರಿ ಮುಂಭಾಗದಿಂದ ತಾಲ್ಲೂಕು ಕಚೇರಿವರೆಗೆ ಕಾಲ್ನಡಿಗೆ ಜಾಥಾ ನಡೆಸಿದರು.

ಅಂದಿನ ಬಿಹಾರ ಸರ್ಕಾರ 1949ರಲ್ಲಿ ಬುದ್ಧ ಗಯಾ ಟೆಂಪಲ್ ಆ್ಯಕ್ಟ್ ರಚನೆ ಮಾಡಿ ಅದರಲ್ಲಿ ಐದು ಬ್ರಾಹ್ಮಣರು ಮತ್ತು ನಾಲ್ಕು ಜನ ಬೌದ್ಧ ಬಿಕ್ಕುಗಳು ಒಳಗೊಂಡಂತೆ 9 ಜನರ ಸಮಿತಿಯನ್ನು ರಚಿಸಲಾಗಿದೆ. ಬೌದ್ಧ ಬಿಕ್ಕುಗಳಿಗೆ ಇದರಿಂದ ಅನ್ಯಾಯವಾಗಿದೆ ಎಂದು ಬೀದರ್‌ನ ಬೌದ್ಧ ಬಿಕ್ಕು ವರಜ್ಯೋತಿ ಭಂತೇಜಿ ದೂರಿದರು.

ಕೂಡಲೇ ರಾಷ್ಟ್ರಪತಿ ಹಾಗೂ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಿ ಬುದ್ಧ ಗಯಾ ಟೆಂಪಲ್ ಆ್ಯಕ್ಟ್ 1949 ರದ್ದುಗೊಳಿಸಿ ಬುದ್ಧಗಯಾದಲ್ಲಿ ಬೌದ್ಧ ಧರ್ಮಕ್ಕೆ ಅಲ್ಲದವರನ್ನು ಹೊರಗಿಟ್ಟು ಮಹಾ ಬೋಧಿ ಮಹಾ ವಿಹಾರ ಆಡಳಿತವನ್ನು ಬೌದ್ಧರಿಗೆ ವಹಿಸಿಕೊಡಬೇಕು ಎಂದು ಆಗ್ರಹಿಸಿದರು.

ಬುದ್ಧ ಭೂಮಿ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್.ವೆಂಕಟೇಶ್ ಮಾತನಾಡಿ, 'ಬುದ್ಧಗಯಾ ಟೆಂಪಲ್ ಆ್ಯಕ್ಟ್ 1949 ವಿರೋಧಿಸಿ ಬಿಹಾರದ ಬುದ್ಧಗಯಾದ ವಿಹಾರದ ಮುಂದೆ ಸತ್ಯಾಗ್ರಹನಿರತ ಬೌದ್ಧ ಬಿಕ್ಕುಗಳ ಮೇಲೆ ದೌರ್ಜನ್ಯ ಎಸಗಿರುವ ಪೋಲಿಸರನ್ನು ಸೇವೆಯಿಂದ ವಜಾಗೊಳಿಸಬೇಕು. ದೇಶದ ಎಲ್ಲಾ ಬೌದ್ಧ ಕೇಂದ್ರ ಮತ್ತು ಸ್ಥಳಗಳನ್ನು ಅಭಿವೃದ್ಧಿಪಡಿಸಬೇಕು. ಬುದ್ಧ ಜಯಂತಿ ದಿನದಂದು ರಾಜ್ಯ ಮತ್ತು ಕೇಂದ್ರ ಸರ್ಕಾರ ಸರ್ಕಾರಿ ರಜೆ ಘೋಷಿಸಿಬೇಕು ಎಂದರು.

ಈ ಸಂದರ್ಭದಲ್ಲಿ ಬೌದ್ಧ ಉಪಾಸಕ ಬಿ.ಎಂ.ವೆಂಕಟೇಶ್, ಬುದ್ಧಭೂಮಿ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಪಿ.ಎಂ.ಚಿನ್ನಸ್ವಾಮಿ, ಶ್ರೀನಿವಾಸ್ ಶೀಗೆಹಳ್ಳಿ ಇದ್ದರು.

ಸಿಡಿಆರ್ ಸಂಗ್ರಹಿಸಿ ಮಾರಾಟ: ಹೆಡ್ ಕಾನ್‌ಸ್ಟೆಬಲ್, ಚಾಲಕ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮವಾಗಿ ದೂರವಾಣಿ ಕರೆಗಳ ಮಾಹಿತಿ(ಸಿಡಿಆರ್) ಸಂಗ್ರಹಿಸಿ ಮಾರಾಟ ಮಾಡಿದ್ದ ಆರೋಪದ ಅಡಿ ಹೆಡ್ ಕಾನ್‌ಸ್ಟೆಬಲ್ ಸೇರಿದಂತೆ ಇಬ್ಬರನ್ನು ಪಶ್ಚಿಮ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಚನ್ನಪಟ್ಟಣ ತಾಲ್ಲೂಕು ಅಕ್ಕೂರು ಪೊಲೀಸ್ ಠಾಣೆಯ ಅಪರಾಧ ವಿಭಾಗದ ಹೆಡ್ ಕಾನ್‌ಸ್ಟೆಬಲ್ ಸುನೀಲ್ ಹಾಗೂ ಕಾರು ಚಾಲಕ ಪವನ್ ಬಂಧಿತರು.

ಮಹಿಳೆಯೊಬ್ಬರು ರಾಜಕಾರಣಿಗಳ ಆಪ್ತೆ ಎಂದು ಬಿಂಬಿಸಿಕೊಂಡು ಹಲವರಿಗೆ ಕೋಟ್ಯಂತರ ರೂಪಾಯಿ ವಂಚಿಸಿದ್ದರು. ಮಹಿಳೆಯನ್ನು ಪೊಲೀಸರು ಬಂಧಿಸಿದ್ದರು. ತನಿಖೆ ವೇಳೆ ಕೆಲವು ಪ್ರಭಾವಿಗಳು ಹಾಗೂ ಸಾಲ ಕೊಟ್ಟವರ ಸಿಡಿಆರ್ ಸಂಗ್ರಹಿಸಿ ಮಹಿಳೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ವಿಚಾರ ಪೊಲೀಸರಿಗೆ ಗೊತ್ತಾಗಿತ್ತು. ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ಆರಂಭಿಸಿದ್ದರು. ತನಿಖೆ ವೇಳೆ ಹೆಡ್ ಕಾನ್‌ಸ್ಟೆಬಲ್ ಸುನೀಲ್ ಮೂಲಕ ಮಹಿಳೆ ಸಿಡಿಆರ್ ಅಕ್ರಮವಾಗಿ ಸಂಗ್ರಹಿಸುತ್ತಿರುವುದು ಪತ್ತೆ ಆಗಿತ್ತು ಎಂದು ಮೂಲಗಳು ಹೇಳಿವೆ.

ಮಹಿಳೆಯ ಕಾರು ಚಾಲಕನಾಗಿ ಪವನ್ ಕೆಲಸ ಮಾಡುತ್ತಿದ್ದ. ಪವನ್ ಹಾಗೂ ಸುನೀಲ್ ಸ್ನೇಹಿತರು. ಮಹಿಳೆ ಸೂಚನೆಯಂತೆ ಹಣದಾಸೆಗೆ ಸುನೀಲ್ ದೂರವಾಣಿ ಕರೆಗಳ ವಿವರ ಸಂಗ್ರಹಿಸಿ ನೀಡುತ್ತಿದ್ದ ಎಂದು ಮೂಲಗಳು ತಿಳಿಸಿವೆ.

ಸರಣಿ ಅಪಘಾತ ಮಾಡಿ ಪರಾರಿ ಇಸಾಕ್ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲದಲ್ಲಿ ಸರಣಿ ಅಪಘಾತ ನಡೆಸಿ ಪರಾರಿಯಾಗಿದ್ದ 'ಗರುಡ ಗ್ಯಾಂಗ್' ಸದಸ್ಯ ಇಸಾಕ್ ಕಾಲಿಗೆ ಪೊಲೀಸರು ಗುಂಡು ಹೊಡೆದಿದ್ದಾರೆ.



ಇಸಾಕ್‌ನ ಬಂಧನಕ್ಕಾಗಿ ರಚಿಸಲಾಗಿದ್ದ ವಿಶೇಷ ಪೊಲೀಸ್ ತಂಡ, ಹಾಸನ ಜಿಲ್ಲೆಯ ಚನ್ನರಾಯ ಪಟ್ಟಣ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಆತ ಸೇರಿದಂತೆ ಒಟ್ಟು ನಾಲ್ಕು ಮಂದಿಯನ್ನು ಬುಧವಾರ ಬಂಧಿಸಿದೆ.

ನಾಲ್ವರು ಆರೋಪಿಗಳನ್ನು ಚನ್ನರಾಯಪಟ್ಟಣದಿಂದ ಮಣಿಪಾಲಕ್ಕೆ ಕರೆತರುವಾಗ, ಹಿರಿಯಡಕ ಪೊಲೀಸ್ ಠಾಣಾ ವ್ಯಾಪ್ತಿಯ ಗುಡ್ಡೆ ಅಂಗಡಿ ಬಳಿ ರಾತ್ರಿ 7.15ರ ಸುಮಾರಿಗೆ ಇಸಾಕ್ ಮೂತ್ರ ವಿಸರ್ಜನೆ ಮಾಡಲೇಬೇಕೆಂದು ಹಠ ಮಾಡಿದ್ದು, ಅದಕ್ಕಾಗಿ ವಾಹನವನ್ನು ನಿಲ್ಲಿಸಲಾಗಿತ್ತು. ಮೂತ್ರ ವಿಸರ್ಜನೆ ನಂತರ ಆತ ಏಕಾಏಕಿ ತನ್ನ ಜೊತೆಗಿದ್ದ ಪೊಲೀಸ್ ಸಿಬ್ಬಂದಿಯನ್ನು ತಳ್ಳಿ, ಕೈಗೆ ಅಳವಡಿಸಿದ್ದ ಕೈಕೋಳದಿಂದ ದೂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ನಂತರ ಇಬ್ಬರು ಪೊಲೀಸ್ ಅಧಿಕಾರಿಗಳು ಹಿಡಿಯಲು ಪ್ರಯತ್ನಿಸಿದಾಗ ಅವರಿಗೆ ಬಲವಾಗಿ ಒದ್ದು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದಾನೆ. ಈ ವೇಳೆ ಆತನ ಕೈಗೆ ಹಾಕಿದ್ದ ಚೈನ್ ವಾಹನದ ಎದುರಿನ ಗ್ಲಾಸ್‌ಗೆ ಬಡಿದು, ಗ್ಲಾಸ್ ಒಡೆದ ಪರಿಣಾಮವಾಗಿ ಅಧಿಕಾರಿ ಹಾಗೂ ಸಿಬ್ಬಂದಿಗೆ ಗಾಯವಾಗಿದೆ.

ಬಳಿಕ ಮಣಿಪಾಲ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ದೇವರಾಜ್ ಅವರು ಎಚ್ಚರಿಕೆ ನೀಡಿದರೂ, ಕೇಳದೇ ಹೋದಾಗ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಆದರೂ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಇಸಾಕ್ ಕಾಲಿಗೆ ಗುಂಡು ಹಾರಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಗಾಯಗೊಂಡ ಇಸಾಕ್ ಹಾಗೂ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಮಣಿಪಾಲದ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಸಾಕ್‌ನ ಗೆಳತಿ ಸುಜೈನ್ ಹಾಗೂ ಆಕೆಯ ತಾಯಿಯನ್ನು ಪೊಲೀಸರು ಈ ಹಿಂದೆ ಬಂಧಿಸಿದ್ದರು.

ಕಾರು ಬಿಟ್ಟು ಪರಾರಿಯಾಗಿದ್ದ

ಮಣಿಪಾಲದ ವಿ.ಎಸ್. ಆಚಾರ್ಯ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್ ಒಂದರಲ್ಲಿ ಇಸಾಕ್‌ನ ಗೆಳತಿ ಸುಜೈನ್ ಇದ್ದು, ಆತ ಅಲ್ಲಿಗೆ ಬರುವುದಾಗಿ ಮಾಹಿತಿ ಬಂದ ಮೇರೆಗೆ ಬೆಂಗಳೂರಿನ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯ ಪೊಲೀಸರು ಈಚೆಗೆ ಕಾರ್ಯಾಚರಣೆ ನಡೆಸಿದ್ದರು.

ಪೊಲೀಸರು ಆತನನ್ನು ಅಡ್ಡಗಟ್ಟಲು ಪ್ರಯತ್ನಿಸಿದಾಗ ಇಸಾಕ್, ಪೊಲೀಸ್ ಸಿಬ್ಬಂದಿ ವಿಶ್ವನಾಥ ಅವರಿಗೆ ನಂಬರ್ ಪ್ಲೇಟ್ ಇಲ್ಲದ ಥಾರ್ ಕಾರಿನಿಂದ ಗುದ್ದಿದ ರಭಸಕ್ಕೆ ಅವರು ಗಾಯಗೊಂಡಿದ್ದರು. ಇತರ ನಾಲ್ವರು ಪೊಲೀಸರೂ ಗಾಯಗೊಂಡಿದ್ದರು. ಬಳಿಕ ಸರಣಿ ಅಪಘಾತ ಮಾಡಿ, ಟಯರ್ ಪಂಕ್ಚರ್ ಆಗಿದ್ದ ತನ್ನ ಕಾರನ್ನು ಮಣ್ಣಪಳ್ಳದ ಬಳಿ ಬಿಟ್ಟು ಪರಾರಿಯಾಗಿದ್ದ.

ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ದರೋಡೆ ಪ್ರಕರಣವೊಂದರಲ್ಲಿ ಇಸಾಕ್ ಆರೋಪಿಯಾಗಿದ್ದ ಎಂದು ಮೂಲಗಳು ಹೇಳಿವೆ.

ಅತ್ಯಾಚಾರ: ಬಾಲಕರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಇಳಕಲ್: 'ತಾಲ್ಲೂಕಿನ ಗ್ರಾಮವೊಂದರ ಬಾಲಕಿ ಮೇಲೆ ಅದೇ ಗ್ರಾಮದ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಅತ್ಯಾಚಾರ ಮಾಡಿದ್ದು, ಮೂವರು ಬಾಲಕರು ವಿಡಿಯೊ ಮಾಡಿದ್ದಾರೆ' ಎಂದು ಇಳಕಲ್ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

'ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ನಮ್ಮ ಮಗಳ ಮೇಲೆ ವಿದ್ಯಾರ್ಥಿ ಅತ್ಯಾಚಾರ ಮಾಡಿದ್ದಾನೆ. ಉಳಿದವರು ಪ್ರಚೋದನೆ ನೀಡಿದ್ದು ಅಲ್ಲದೇ, ವಿಡಿಯೊ ಮಾಡಿಕೊಂಡಿದ್ದಾರೆ' ಎಂದು ಬಾಲಕಿಯ ಪೋಷಕರು ದೂರು ನೀಡಿದ್ದಾರೆ. ಪೋಕ್ಸೊ ಅಡಿ ಪ್ರಕರಣ ದಾಖಲಿಸಿಕೊಂಡು, ಬಾಲಕರನ್ನು ಬಾಲಾಪರಾಧ ಗೃಹಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪರ್ವತಕ್ಕೂ 'ಮಾನವ ಸ್ಥಾನಮಾನ'!

ಚನ್ನಬಸಪ್ಪ ರೊಟ್ಟಿ

ಇತ್ತೀಚೆಗೆ, ನ್ಯೂಜಿಲೆಂಡ್‌ನ ಉತ್ತರ ದ್ವೀಪದಲ್ಲಿರುವ ಎರಡನೇ ಅತಿ ಎತ್ತರದ (2,518 ಮೀಟರ್ / 8,261 ಅಡಿ) ಪರ್ವತ ಹಾಗೂ ಎಗ್ಮಾಂಟ್ ರಾಷ್ಟ್ರೀಯ ಉದ್ಯಾನದ ಭಾಗವಾಗಿರುವ 'ತರಾನಕಿ ಮೌಂಗಾ' ಅಥವಾ 'ತಾರಾನಕಿ' ಪರ್ವತಕ್ಕೆ ಅಧಿಕೃತವಾಗಿ 'ಕಾನೂನುಬದ್ಧ ಮಾನವ ಸ್ಥಾನಮಾನ' ಹಾಗೂ 'ಮಾನವ ಹಕ್ಕು' ನೀಡಲಾಗಿದೆ. 'ತರಾನಕಿ ಮೌಂಗಾ' ವಿಶ್ವದ ಅತ್ಯಂತ ಸಮ್ಮಿತೀಯ (ಶಂಕುವಿನಾಕಾರದ), ಹಿಮದಿಂದ ಆವೃತವಾದ ಸುಪ್ತ ಜ್ವಾಲಾಮುಖಿ ಶಿಖರಗಳಲ್ಲಿ ಒಂದಾಗಿದ್ದು, ಪ್ರವಾಸಿಗರು, ಸ್ನೋಬೋರ್ಡರ್‌ಗಳು ಮತ್ತು ಸ್ಕೀಯರ್‌ಗಳಿಗೆ ಜನಪ್ರಿಯ ತಾಣವಾಗಿದೆ. ಇದುವರೆಗೆ ನ್ಯೂಜಿಲೆಂಡ್‌ನಲ್ಲಿ ಅತಿ ಹೆಚ್ಚು ಬಾರಿ ಆರೋಹಣ ಮಾಡಿದ ಪರ್ವತ ಇದಾಗಿದೆ. ಈ ಪರ್ವತ ಬೂದಿ ಮತ್ತು ಲಾವಾ ಹರಿವಿನ ಪರ್ಯಾಯ ಪದರಗಳಿಂದ ರೂಪಗೊಂಡಿದೆ. ಹೀಗಾಗಿ, ಇದು 'ಸ್ಟ್ರಾಟೋವೊಲ್ಕಾನೊ' ಎಂದು ಗುರುತಿಸಲಾಗಿದೆ. ಆಸ್ಟ್ರೇಲಿಯನ್ ಭೂತಟ್ಟೆ ಹಾಗೂ ಪೆಸಿಫಿಕ್ ಭೂತಟ್ಟೆಗಳ ಸಂಯೋಗದ ಸ್ಥಳದಲ್ಲಿ ಈ ಪರ್ವತ ನೆಲೆಗೊಂಡಿದ್ದು, ಜ್ವಾಲಾಮುಖಿ ಹಾಗೂ ಭೂಕುಸಿತಗಳಿಂದ ರೂಪುಗೊಂಡ ಉಂಗುರಾಕಾರದ ಬಯಲುಪ್ರದೇಶ ಈ ಪರ್ವತದ ಮೇಲಿದೆ.

ಈ ಪರ್ವತ ಸ್ಥಳೀಯ ಮಾವೊರಿ ಜನರಿಗೆ ಶತಮಾನಗಳಿಂದ ಪೂಜ್ಯನೀಯ ಸ್ಥಳವಾಗಿದೆ. ಇದು ತನ್ನದೇ ಆದ ಸಾಂಸ್ಕೃತಿಕ ಮಹತ್ವ ಹೊಂದಿದ್ದು, ಮಾವೋರಿಗಳಿಗೆ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪೋಷಣೆಯ ಮೂಲವಾಗಿದೆ. ಮಾವೋರಿಗಳು ಈ ಪರ್ವತವನ್ನು ತಮ್ಮ ಪೂರ್ವಜರು ರಕ್ಷಣೆ ಮತ್ತು ವಿಶ್ರಾಂತಿ ಪಡೆಯುತ್ತಿರುವ ಸ್ಥಳವೆಂದು ಪರಿಗಣಿಸುತ್ತಾರೆ.

ಬ್ರಿಟಿಷ್ ಪರಿಶೋಧಕ ಕ್ಯಾಪ್ಟನ್ ಜೇಮ್ಸ್ ಕುಕ್ 1776ರಲ್ಲಿ ತನ್ನ ಹಡಗಿನಿಂದ ಶಿಖರವನ್ನು ಗಮನಿಸಿ ಅದಕ್ಕೆ 'ಮೌಂಟ್ ಎಗ್ಮಾಂಟ್' ಎಂದು ಹೆಸರಿಸಿದ್ದರು. 18 ಮತ್ತು 19ನೇ ಶತಮಾನಗಳಲ್ಲಿ ಬ್ರಿಟಿಷ್ ವಸಾಹತುಶಾಹಿಗಳು 'ತಾರನಕಿ' ಪರ್ವತದಲ್ಲಿದ್ದ ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಮಾಡಿದರು. 1840ರಲ್ಲಿ ಈ ಪರ್ವತವನ್ನು ಸಂರಕ್ಷಿಸಲು 'ವೈಟಾಂಗಿ ಒಪ್ಪಂದ' ಮಾಡಿಕೊಂಡಿದ್ದರೂ ಆ ಒಪ್ಪಂದದ ಉಲ್ಲಂಘನೆ ಸಾಮಾನ್ಯವಾಗಿತ್ತು. ಬ್ರಿಟಿಷ್ ವಸಾಹತುಶಾಹಿ ಕೊನೆಗೊಂಡ ನಂತರ ಈ ಪರ್ವತವನ್ನು ರಕ್ಷಿಸುವ ಜೊತೆಗೆ ಅದರ ಸಾಂಸ್ಕೃತಿಕ ಹಿರಿಮೆಯನ್ನು ಕಾಪಾಡಿಕೊಳ್ಳಲು ನಿರಂತರ ಹೋರಾಟಗಳು ನಡೆದಿದ್ದು, ಈಗ ಈ ಪರ್ವತಕ್ಕೆ ಕಾನೂನು ಮಾನ್ಯತೆ ಲಭಿಸಿದೆ.

'ಮೌಂಟ್ ಎಗ್ಮಾಂಟ್' ಎಂಬ ಹೆಸರನ್ನು ರದ್ದುಪಡಿಸಿ, 'ತಾರಾನಕಿ' ಪರ್ವತ ಹಾಗೂ ಅದರ ಸುತ್ತಲಿನ ಶಿಖರಗಳನ್ನು ಒಟ್ಟುಗೂಡಿ 'ಟೆ ಪಾಪಾ-ಕುರಾ-ಒ-ತರಾನಕಿ' (ತರಾನಕಿಯ ಅತ್ಯಂತ ಪೂಜ್ಯನೀಯ ಮತ್ತು ಅಮೂಲ್ಯ ಭೂಮಿ) ಎಂದು ಮರುನಾಮಕರಣ ಮಾಡಲಾಗಿದ್ದು, ಇನ್ನು ಮೇಲೆ ಇದನ್ನು 'ಟೆ ಕಹುಯಿ ಟುಪುವಾ' (ಜೀವಂತ ಘಟಕ) ಎಂದು ಪರಿಗಣಿಸಲಾಗುತ್ತದೆ ಎಂದು ತರಾನಕಿ ಮೌಂಗಾದ ಮುಖ್ಯ ಸಮಾಲೋಚಕ ಜೇಮೀ ಟುಟಾ ಹಾಗೂ 'ತೆ ಪತಿ ಮಾವೋರಿ' ರಾಜಕೀಯ ಪಕ್ಷದ ಸಹ ನಾಯಕಿ ಡೆಬ್ಬಿ ನ್ಗರೆವಾ-ಪ್ಯಾಕರ್ ತಿಳಿಸಿದ್ದಾರೆ.

'ತಾರಾನಕಿ ಮೌಂಗಾ'ಕ್ಕೆ ಮಾನವ ಹಕ್ಕುಗಳನ್ನು ನೀಡುವ ಮಸೂದೆಯನ್ನು ನ್ಯೂಜಿಲೆಂಡ್ ಸಂಸತ್ತಿನಲ್ಲಿ ಜನವರಿ 30, 2025ರಂದು ಸರ್ವಾನುಮತದಿಂದ ಅನುಮೋದಿಸಲಾಯಿತು. ಮಸೂದೆ ಮಂಡನೆ ವೀಕ್ಷಿಸಲು ಮಾವೋರಿ ಬುಡಕಟ್ಟಿಗೆ ಸೇರಿದ ನೂರಾರು ಜನರು ರಾಜಧಾನಿ ವೆಲ್ಲಿಂಗ್ಟನ್‌ಗೆ ಬಂದಿದ್ದರು. ಮಸೂದೆ ಅಂಗೀಕಾರದ ನಂತರ 'ಮೌರಿ' ಹಾಡು ಹಾಗೂ 'ಹಾಕಾ' ನೃತ್ಯಗಳೊಂದಿಗೆ ಸ್ವಾಗತಿಸಲಾಯಿತು. ಹೊಸ ಕಾನೂನಿನ ಅನ್ವಯ ತಾರನಕಿ ಮೌಂಗಾ ವ್ಯಾಪ್ತಿಯ ಭೂಮಿಯನ್ನು ಬಲವಂತವಾಗಿ ಮಾರುವಂತಿಲ್ಲ ಹಾಗೂ ಖರೀದಿಸುವಂತಿಲ್ಲ. ಪರ್ವತದ ನಿರ್ವಹಣೆಗೆ ಸಾಂಪ್ರದಾಯಿಕ ಪದ್ಧತಿಗಳನ್ನು ಪುನಃಸ್ಥಾಪಿಸಲು ಮತ್ತು ಸ್ಥಳೀಯ ವನ್ಯಜೀವಿಗಳನ್ನು ರಕ್ಷಿಸಲು ಅನುಮತಿ ಲಭಿಸಿದೆ. 1860ರ ದಶಕದಲ್ಲಿ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದ್ದ 'ಮೌಂಟ್ ತರಾನಕಿ' ವ್ಯಾಪ್ತಿಯ ಒಂದು ಮಿಲಿಯನ್ ಎಕರೆಗೂ ಹೆಚ್ಚು ಭೂಮಿಯನ್ನು ಮಾವೋರಿಗಳ ಕ್ಷಮೆ ಕೋರಿ ಮರಳಿಸಬೇಕಿದೆ.

ನ್ಯೂಜಿಲೆಂಡ್‌ನಲ್ಲಿ ಪರಿಸರದ ಅಂಶಗಳಿಗೆ, ನೈಸರ್ಗಿಕ ಘಟಕಗಳಿಗೆ ಮಾನವ ಸಮಾನ ಸ್ಥಾನಮಾನ ನೀಡುವ ರೂಢಿ ಜಾರಿಯಲ್ಲಿದೆ. 2014ರಲ್ಲಿ, 'ಟೆ ಉರೆವೆರಾ' ಅರಣ್ಯಕ್ಕೆ ಹಾಗೂ 2017ರಲ್ಲಿ 'ವಂಗನುಯಿ' ನದಿಗೆ ಇದೇ ರೀತಿಯ ಮನ್ನಣೆಯನ್ನು ನ್ಯೂಜಿಲೆಂಡ್ ಸರ್ಕಾರ ನೀಡಿದೆ. ಈ ನಿರ್ಧಾರಗಳು ಹಾಗೂ ಕಾನೂನು ಮೂಲಕ ಪ್ರಕೃತಿಯೊಂದಿಗೆ 'ರಕ್ತಸಂಬಂಧ' ಸೃಷ್ಟಿಸಿಕೊಳ್ಳುವ ಭಾವನೆ ನ್ಯೂಜಿಲೆಂಡ್ ಸರ್ಕಾರ ಹಾಗೂ ಅಲ್ಲಿನ ಜನರು ಪರಿಸರ ಸಂರಕ್ಷಣೆಗೆ ನೀಡುವ ಆದ್ಯತೆಯನ್ನು ಪ್ರತಿಬಿಂಬಿಸುತ್ತದೆ. ❖

ಭಾರತದಲ್ಲಿನ ಪರಿಸರ ಕಾನೂನುಗಳು

- **1972** ವನ್ಯಜೀವಿ (ರಕ್ಷಣೆ) ಕಾಯ್ದೆ
- **1974** ನೀರು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ
- **1981** ವಾಯು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ
- **1986** ಪರಿಸರ (ರಕ್ಷಣೆ) ಕಾಯ್ದೆ
- **2010** ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಕಾಯ್ದೆ



ಸ್ವಚ್ಛ ಪರಿಸರ ಸಂಬಂಧಿತ ಪ್ರಕರಣಗಳು

1 ಎಂ.ಸಿ.ಮೆಹ್ತಾ v/s ಭಾರತ ಸರ್ಕಾರ, 1986: ಪರಿಸರ ಅನಕ್ಷರತೆಯನ್ನು ತೊಡೆದುಹಾಕಲು ಈ ಕೆಳಗಿನ ನಿರ್ದೇಶನಗಳನ್ನು ನೀಡಲಾಯಿತು.

- ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಪರಿಸರದ ಕುರಿತು ಸಿದ್ಧಪಡಿಸಿದ ಕನಿಷ್ಠ ಎರಡು ಸ್ಲೈಡ್‌ಗಳನ್ನು ಸಿನಿಮಾ ಮಂದಿರಗಳು / ವಿಡಿಯೊ ಪಾರ್ಲರ್‌ಗಳು ಪ್ರದರ್ಶಿಸಬೇಕು.
- ದೂರದರ್ಶನ ಮತ್ತು ಆಕಾಶವಾಣಿಗಳು ಪರಿಸರದ ಕುರಿತಾದ ಕಾರ್ಯಕ್ರಮಗಳಿಗಾಗಿ ಪ್ರತಿದಿನ 5-7 ನಿಮಿಷಗಳನ್ನು ಮೀಸಲಿಡಬೇಕು.
- ಶಾಲೆಗಳು ಮತ್ತು ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಪರಿಸರವನ್ನು ಶ್ರೇಣೀಕೃತ ರೀತಿಯಲ್ಲಿ ಕಡ್ಡಾಯ ವಿಷಯವನ್ನಾಗಿ ಮಾಡಬೇಕು, ಅದಕ್ಕಾಗಿ ಒಂದು ಕೋರ್ಸ್ ಅನ್ನು ಸೂಚಿಸಬೇಕು.

2 ಎಂ.ಸಿ.ಮೆಹ್ತಾ v/s ಕಮಲ್ ನಾಥ್, 1996: ಜೀವಕ್ಕೆ ಅಗತ್ಯವಾದ ಮೂಲಭೂತ ಪರಿಸರ ಅಂಶಗಳಾದ ಗಾಳಿ, ನೀರು ಮತ್ತು ಮಣ್ಣಿನ ಯಾವುದೇ ಭಾಗವನ್ನು ಜೀವಕ್ಕೆ ಅಪಾಯಕಾರಿಯಾಗುವ ಮಟ್ಟದಲ್ಲಿ ಕಲುಷಿತಗೊಳಿಸಬಾರದು ಎಂದು ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿದೆ.

3 ಗ್ರಾಮೀಣ ಮೊಕದ್ದಮೆ ಮತ್ತು ಹಕ್ಕು ಕೇಂದ್ರ v/s ಉತ್ತರ ಪ್ರದೇಶ ರಾಜ್ಯ, 1985: ಮಸ್ಸೂರಿ ಬೆಟ್ಟಗಳಲ್ಲಿ ಅರಣ್ಯಗಳನ್ನು ನಾಶಮಾಡುವ ಮತ್ತು ಮಣ್ಣಿನ ಸವೆತ ಹೆಚ್ಚಿಸುವ ಸುಣ್ಣದ ಕಲ್ಲು ಗಣಿಗಾರಿಕೆಯನ್ನು ನಿಷೇಧಿಸಲಾಯಿತು.

4 ತರುಣ್ ಭಾರತ್ ಸಂಘ (NGO) v/s ಭಾರತ ಸರ್ಕಾರ, 1993: ಸರಿಸ್ಕಾ ಹುಲಿ ಅಭಯಾರಣ್ಯದ ಸುತ್ತಲಿನ ಎಲ್ಲಾ 400 ಅಮೃತಶಿಲೆ ಗಣಿಗಳ ಮುಚ್ಚಲಾಯಿತು.

5 ಗಂಗಾ ಮತ್ತು ಯಮುನಾ ಮಾಲಿನ್ಯ ತಡೆಗಟ್ಟುವಿಕೆ, 1995: 1986ರ ಪರಿಸರ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಸುಪ್ರೀಂ ಕೋರ್ಟ್ ಕಾನ್ಪುರದ ಗಂಗಾ, ಕೋಲ್ಕತ್ತದ ಹೂಗ್ಲಿ ಮತ್ತು ದೆಹಲಿಯ ಯಮುನಾ ನದಿಯ ದಡದಲ್ಲಿ ನೆಲೆಸಿರುವ ಎಲ್ಲಾ ಮಾಲಿನ್ಯಕಾರಕ ಕೈಗಾರಿಕೆಗಳನ್ನು ತೆರವುಗೊಳಿಸುವಂತೆ ಸ್ವಯಂಪ್ರೇರಿತವಾಗಿ ಸೂಚನೆ ನೀಡಿದೆ.

6 ಉತ್ತರಾಖಂಡ ಹೈಕೋರ್ಟ್ 2017ರಲ್ಲಿ ಗಂಗಾ ಮತ್ತು ಯಮುನಾ ನದಿಗಳಿಗೆ ಹಾಗೂ 2018ರಲ್ಲಿ ಗಂಗೋತ್ರಿ ಮತ್ತು ಯಮುನೋತ್ರಿ ಹಿಮನದಿಗಳಿಗೆ ಕಾನೂನುಬದ್ಧ ವ್ಯಕ್ತಿತ್ವದ ಸ್ಥಾನಮಾನವನ್ನು ನೀಡಿದ್ದು, ನಂತರ ಈ ಪರಿಸರ ವ್ಯಾಪ್ತಿಯ ಎಲ್ಲಾ ಪ್ರಾಣಿಗಳಿಗೂ ಈ ಹಕ್ಕುಗಳನ್ನು ವಿಸ್ತರಿಸಿತ್ತು. ಆದರೆ, ಸುಪ್ರೀಂ ಕೋರ್ಟ್ ಈ ತೀರ್ಪನ್ನು ತಡೆಹಿಡಿದಿದೆ.

7 ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ 2020ರಲ್ಲಿ ಚಂಡೀಗಢದ ಸುಖ್ನಾ ಸರೋವರವನ್ನು 'ಪರಿಸರ ಸಂರಕ್ಷಣೆಯ ಜೀವಂತ ಘಟಕ' ಎಂದು ಘೋಷಿಸಿದೆ.

8 ಪರಿಸರದ ಹಕ್ಕು ಮತ್ತು ಸಂವಿಧಾನ: ಭಾರತೀಯ ಸಂವಿಧಾನದ 21ನೇ ವಿಧಿಯನ್ವಯ, ಕಾನೂನಿನಿಂದ ಸ್ಥಾಪಿಸಲಾದ ಕಾರ್ಯವಿಧಾನಗಳ ಪ್ರಕಾರ ಹೊರತುಪಡಿಸಿ, ಯಾವುದೇ ವ್ಯಕ್ತಿಯ ಜೀವನ ಅಥವಾ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವಂತಿಲ್ಲ. ಘನತೆಯಿಂದ ಜೀವಿಸುವ ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯಗಳು 'ಸ್ವಚ್ಛ ಪರಿಸರ'ದ ಅಗತ್ಯವನ್ನು ಒಳಗೊಂಡಿವೆ ಎಂದು ಸುಪ್ರೀಂ ಕೋರ್ಟ್ ವ್ಯಾಖ್ಯಾನಿಸಿದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಯಾವ ಕಾರಣಗಳಿಂದ ಮುಂಗಾರಿನ ಪ್ರವೃತ್ತಿಯಲ್ಲಿ ಬದಲಾವಣೆ ಕಾಣುವಂತಾಗಿದೆ?

1. ಲಾ ನೀನಾ ಸ್ಥಿತಿ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉಂಟಾಗುತ್ತಿದೆ.
2. ಹಿಂದೂ ಮಹಾಸಾಗರದ ಪೂರ್ವ ಭಾಗದಲ್ಲಿ ತಾಪಮಾನ ಹೆಚ್ಚಳವಾಗುತ್ತಿದೆ.
3. ಬಂಗಾಳಕೊಲ್ಲಿಯ ವಾಯುಭಾರ ಕುಸಿತ ದಕ್ಷಿಣ ಭಾಗಕ್ಕೆ ಹೆಚ್ಚಾಗಿ ಸಂಚರಿಸುತ್ತಿದೆ.

ಕೋಡ್ ಬಳಸಿ ಸರಿ ಉತ್ತರ ಗುರುತಿಸಿ

ಎ. 1 ಮಾತ್ರ ಬಿ. 2 ಮಾತ್ರ

ಸಿ. 3 ಮಾತ್ರ ಡಿ. 1, 2 ಮತ್ತು 3

ಉತ್ತರ: ಡಿ

2. ಕೇಂದ್ರ ಚುನಾವಣಾ ಆಯೋಗ ಕೆಳಗಿನ ಯಾವ ಪ್ರದೇಶದಲ್ಲಿ ವಾಸಿಸುತ್ತಿರುವ ವಲಸಿಗ ಮತದಾರರ ನಿಬಂಧನೆಯಲ್ಲಿ ಬದಲಾವಣೆ ತಂದಿದೆ?

ಎ. ಜಮ್ಮು ಮತ್ತು ಉದಂಪುರ್ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ವಲಸಿಗ ಮತದಾರರು.

ಬಿ. ಜಮ್ಮು ಮತ್ತು ಪುಲ್ವಾಮಾದಲ್ಲಿ ವಾಸಿಸುತ್ತಿರುವ ವಲಸಿಗ ಮತದಾರರು.

ಸಿ. ಉದಂಪೂರ್ ಮತ್ತು ಪುಲ್ವಾಮದಲ್ಲಿ ವಾಸಿಸುತ್ತಿರುವ ವಲಸಿಗ ಮತದಾರರು.

ಡಿ. ಉದಂಪುರ್ ಮತ್ತು ಶ್ರೀನಗರದಲ್ಲಿ ವಾಸಿಸುತ್ತಿರುವ ವಲಸಿಗ ಮತದಾರರು.

ಉತ್ತರ: ಎ

3. ಸಿಯಾಚಿನ್ ಹಿಮನದಿ ವಶಕ್ಕೆ ತೆಗೆದುಕೊಳ್ಳಲು ಭಾರತೀಯ ಸೇನೆ ಕೈಗೊಂಡ ಕಾರ್ಯಾಚರಣೆ?

ಎ. ಮೇಘದೂತ್ ಬಿ. ಮೇಘನಾಥ್

ಸಿ. ಆದಿತ್ಯನಾಥ್ ಡಿ. ಗೋಪಿನಾಥ್

ಉತ್ತರ: ಎ

4. ನ್ಯಾಷನಲ್ ಜುಡಿಶಿಯಲ್ ಅಕಾಡೆಮಿ ಸಂಸ್ಥೆ ಕೆಳಗಿನ ಯಾವ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತದೆ?

ಎ. ಭಾರತದ ಸುಪ್ರೀಂ ಕೋರ್ಟ್

ಬಿ. ಕೇಂದ್ರ ಕಾನೂನು ಸಚಿವಾಲಯ

ಸಿ. ಬಾರ್ ಕೌನ್ಸಿಲ್ ಆಫ್ ಇಂಡಿಯಾ

ಡಿ. ಅಂತರರಾಷ್ಟ್ರೀಯ ನ್ಯಾಯಾಲಯ

ಉತ್ತರ: ಎ

5. ಅಮೆರಿಕ ಮೂಲದ 'ಲೈಮ್ ಲೈಟ್ ನೆಟ್ವರ್ಕ್' ಸಂಸ್ಥೆಯ ಸಮೀಕ್ಷೆಯ ಪ್ರಕಾರ ಯಾವ ರಾಷ್ಟ್ರಗಳಲ್ಲಿ ಅತಿ ಹೆಚ್ಚಿನ ಪ್ರಮಾಣದ ಆನ್‌ಲೈನ್ ಆಟಗಳ ವ್ಯಸನಿಗಳು ಕಂಡುಬರುತ್ತಾರೆ?

ಎ. ದಕ್ಷಿಣ ಕೊರಿಯಾ ಮತ್ತು ಭಾರತ

ಬಿ. ದಕ್ಷಿಣ ಕೊರಿಯಾ ಮತ್ತು ಉತ್ತರ ಕೊರಿಯಾ

ಸಿ. ಭಾರತ ಮತ್ತು ಪಾಕಿಸ್ತಾನ

ಡಿ. ಶ್ರೀಲಂಕಾ ಮತ್ತು ಪಾಕಿಸ್ತಾನ

ಉತ್ತರ: ಎ

6. ಇತ್ತೀಚೆಗೆ ಭಾರತದ ಯಾವ ಸಂಸ್ಥೆ 14 ವರ್ಷದ ವಯೋಮಿತಿಯ ಮಕ್ಕಳ ಆನ್‌ಲೈನ್ ಆಟದ ವ್ಯಸನಕ್ಕೆ ಸಂಬಂಧಪಟ್ಟಂತೆ ಸಮೀಕ್ಷೆಯನ್ನು ನಡೆಸಿದೆ?

ಎ. ನಿಮ್ಹಾನ್ಸ್ ಬಿ. ಅಖಿಲಭಾರತ ವೈದ್ಯಕೀಯ ಸಂಸ್ಥೆ

ಸಿ. ದಕ್ಷಿಣ ಭಾರತ ಮಾನಸಿಕ ವೈದ್ಯಕೀಯ ಸಂಸ್ಥೆ

ಡಿ. ನಾರಾಯಣ ಹೃದಯಾಲಯ

ಉತ್ತರ: ಎ

7. ಆಗ್ನೇಯ ಏಷ್ಯಾ ರಾಷ್ಟ್ರಗಳಿಂದ ಉಂಟಾಗುತ್ತಿರುವ ಸೈಬರ್ ಅಪರಾಧ ತಡೆಗೆ ಸ್ಥಾಪಿಸಿರುವ ಸಮಿತಿಯಲ್ಲಿ ಕೆಳಗಿನ ಯಾವ ಸಂಸ್ಥೆ ಸದಸ್ಯತ್ವ ಹೊಂದಿಲ್ಲ?

1. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರತಿನಿಧಿ
2. ಫೈನಾನ್ಸಿಯಲ್ ಇಂಟೆಲಿಜೆನ್ಸ್ ಯೂನಿಟ್ ಪ್ರತಿನಿಧಿ
3. ಭಾರತೀಯ ಬ್ಯಾಂಕುಗಳ ಪ್ರತಿನಿಧಿ
4. ಕೇಂದ್ರ ಸಮಾಜ ಕಲ್ಯಾಣ ಸಚಿವಾಲಯ ಪ್ರತಿನಿಧಿ

ಕೋಡ್ ಬಳಸಿ ಸರಿ ಉತ್ತರ ಗುರುತಿಸಿ

ಎ. 2 ಮತ್ತು 3 ಬಿ. 1 ಮತ್ತು 2

ಸಿ. 1 ಮತ್ತು 3 ಡಿ. 4 ಮಾತ್ರ

ಉತ್ತರ: ಡಿ

8. ವಿಶ್ವಸಂಸ್ಥೆಯ ಮಿಲಿಟರಿ ಜೆಂಡರ್ ಅಡ್ವೊಕೇಟ್-2023 ಪ್ರಶಸ್ತಿ ಪಡೆದವರು ಯಾರು?

ಎ. ಮೇಜರ್ ರಾಧಿಕಾ ಸೇನ್ ಬಿ. ಮೇಜರ್ ಸನತ್

ಸಿ. ಮೇಜರ್ ಧ್ಯಾನ್ ಚಂದ್

ಡಿ. ಲೆಫ್ಟಿನೆಂಟ್ ಜನರಲ್ ಹಿಮಾನ್ಶೂ ಪಟೇಲ್

ಉತ್ತರ: ಎ

9. ಈ ಹೇಳಿಕೆಗಳನ್ನು ಪರಿಗಣಿಸಿ.

ಎ. ಡಿಜಿಲಾಕರ್ ಕೇಂದ್ರ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ಸಚಿವಾಲಯದಡಿ ಬರುತ್ತದೆ

ಬಿ. ಡಿಜಿಲಾಕರ್ ಸರ್ಕಾರದ ಕಾಗದರಹಿತ ಆಡಳಿತದ ಉದ್ದೇಶವನ್ನು ಸಾಧಿಸಲು ಸಹಾಯಕವಾಗಿದೆ

ಸರಿಯಾದ ಉತ್ತರ ಆರಿಸಿ

ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ

ಸಿ. ಎರಡೂ ತಪ್ಪು ಡಿ. ಎರಡೂ ಸರಿ

ಉತ್ತರ: ಡಿ

ಎಸ್ಸೆಸ್ಸೆಲ್ಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

Write an essay on any one of the following:

a) Population explosion in cities.

Population explosions can have negative impacts on the area's growth and can lead to resource scarcity. They can also harm nature.

The main cause of population explosion of our country is the result of prevailing high birth rate and large decline in the death rate due to the advancement of science and technology especially in medical field.

Now-a-days the cities are main attraction for the employment. Many Industries, Offices, many public sectors, Banks, Hospitals, IT-BT Companies etc., are located in cities.Hence the cities are flooded with people. Day by day the people coming to cities has increased. Once they came and settle here, their families also join them and settle along with them.

In cities the people get all the facilities and resources very easily attracting a lot of peole towards it. This occurs on yearly basis and hence becoming the spur of population explosion.

Some effects of population explosions include:

As populations increase, people need more space to live, which can lead to deforestation. This can leads to the extinction of species and other resources.

Rising populations can lead to unemployment and underemployment. It can also lead to the exploitation of natural resources and excessive wastage of water.It leads to global warming.

Rapid urbanization can lead to urban overcrowding and poor urban planning. This can create problems such as slums, traffic congestion, and the lack of access to basic amenities.

b) Mobile Phones

Often Mobile Phone is also called "cellular phone". It is a device mainly used for a voice call. Presently technological advancements have made our life easy.

In today's era, there are only a hand full of people that do not have a mobile or are not using mobile phones. Nowadays, mobile's have become a priority in everyone's life, and every person uses it in their daily life for communication, business purposes, and for other activities.

In today's world, it is difficult to get going on with your life without using a mobile phone.

Advantages of mobile phones

Mobile phones have changed the way of communication. Before mobiles, landlines or letters were used for communicating with a people who lives far from us.

Mobile phone is not limited to communication, it has various other benefits and limitations too. Mostly people are aware with the advantages of mobile phones.

The benefits of mobile phones are discussed as follows -

Easy Communication

The main benefit of using the mobile phone is that they make the mode of communication easier and cheap. Because of the lower price, mobile is affordable and has been a revolution in the telecom industry where approximately 95% of people use mobile phones for communication.

Mobile made communication easier, as just by pressing some keys on mobile, we can contact our friends, family members or colleagues, and others at any time. It also gives us a facility to contact our fellow person with voice calls, video calls, text messages, recorded calls, and many more.

Education

It is another major advantage of mobile phones. Mobile phones can be used to acquire knowledge or information on various topics. For convenience; nowadays, most colleges, institutions, and schools are offering online education with the proper study material that can be in the form of images, photos, text, pdf, etc. During the corona pandemic, we have seen that the students have taken online classes provided by their respective institutions to ensure the safety and health of students.

Social media:-

In today's era, mobile phones are not only used for calling purposes. Smartphones are said to be a gift for social media lovers. Social media apps like Twitter(X), Instagram, snap chat, Facebook, etc., are at our fingertips at any time. We can edit and share our pictures and posts on social media directly from our mobile phones. Mobile gives us the facility to access social media at all times.

Most people use their mobile phones to scroll through their timeline of social media platforms in their free time.

Promoting business:-

Mobile phones can be used for promoting a business. They are the best tools for entrepreneurs or businessmen to promote their business via online or offline sources. In online sources, one can use social media websites and messaging applications such as telegram, Instagram, WhatsApp

Pinterest, and others. Most of the leading companies arrange their meetings on video messaging applications like skype. In today's era, most companies are still promoting their business via text messages. At the end of every message, they put a link to their product page or business website.

Good for people's safety

In today's world, criminal activities happen on the next level, so keeping a mobile phone with yourself is a good safety option. In day-to-day life, we heard about so many criminal activities such as kidnapping, theft, or others, so mobile helps us in a different types of illegal activities, *(Contd….)*

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PUC -CET BIOLOGY

11) The residue left after methane production from cattle dung is:

a) Burnt b) burried in land fills

c) used as manure

d) used in civil construction.

Ans:- C

12) Activated sludge should have the ability to settle quickly so that it can:

a) be rapidly pumped back from sedimentation tank to aeration tank

b) absorb pathogenic bacteria present in waste water while sinking to the bottom of the settling tank

c) be discarded and anaerobically digested

d) absorb colloidal organic matter.

Ans:-a

13) Which of the following is not a parasitic adaptation?

a) Loss of unnecessary sense organs

b) Absence of adhesive organs or suckers

c) Loss of digestive system

d) High reproductive capacity

Ans. B

14) Which of the given statement is correct in the context of observing DNA separated by agarose gel electrophoresis?

a) DNA can be seen in visible light

b) DNA can be seen without staining in visible light

c) Ethidium bromide stained DNA can be seen in visible light

d) Ethidium bromide stained DNA can be seen under exposure to UV light

Ans:- d

15) The hybridisation between naturally incompatible plants like potato and tomato can be achieved through

a) mutation breeding

b) artificial pollination

c) somatic hybridisation

d) conventional breeding

Ans: (c)

Expln:- Mutation breeding refers to the process by which the seed is exposed to radiation or chemicals in order to develop an improved mutant variant. It can help to improve individual plants' yield and resistance properties.

Conventional breeding is the development of new varieties (cultivars) of plants by using natural processes and traditional methods such as selection and breeding of high yielding varieties. Since potato and tomato belong to two different species and thus cannot be hybridized by conventional breeding methods.

A pollination technique in which the desired pollen grains are used for pollination by artificial means is known as artificial pollination. Since potato and tomato are incompatible, even artificial pollination cannot be used as the pollen grains will not germinate to form the pollen tube on incompatible species.

The fusion of the protoplasm of two different plant cells in order to produce a hybrid variety is called somatic hybridization. The protoplasts of two plants can be made to fuse with a chemical called Polyethylene glycol (PEG). Thus, somatic hybridization would be the best suitable method in developing the hybridized variety between potato and tomato.

16) Making two varieties of a cattle breed like Red Dane which have no common ancestors on either sides of their pedigree up to 4-6 generations is an example for


(a) Inbreeding (b) Cross breeding

(c) Out crossing (d) Inter-specific hybridization

Ans:(c):

Expl:- out crossing is the phenomenon of mating of two animals within the same breed having no common ancestors on either side of their pedigree upto 4-6 generations, while inbreeding is the crossing of closely related animals within the same breed for 4-6 generations, cross breeding is the breeding of unrelated animals either of the same breeds, but not having common ancestor for 4-6 generations. And interspecific hybridization is the mating of animals of two different species. -

17) Identify the hormones, *A*, *B* and *C* that are labeled in the given flow chart



(a) A-GnRH, B-ICSH, C-FSH

(b) A-GH, B-FSH, C-LH

(C) A-GnRH, B-PRL, C-ICSH

(d) A-GnRH, B-FSH, C-LH

Ans:(d)

Expl:- Hypothalamus is located in the basal part of diencephalon. It controls the anterior and posterior lobes of pituitary gland to secrete different hormones. For gonadotropin releasing hormone hypothalamus stimulates the anterior lobe of pituitary to secrete gonadotropins like Follicle Stimulating Hormone (FSH) and luteinizing Hormone (LH) or InterstitialCell stimulating Hormone (ICSH) by the ovary and testes respectively.

(Contd……)

ಮೇಲ್ಮನೆಯಲ್ಲಿ ಮಸೂದೆಗೆ ಒಪ್ಪಿಗೆ

ಬಿಜೆಪಿ ಶಾಸಕರ ಸಭಾತ್ಯಾಗ: ಸದನದಲ್ಲೇ ಉಳಿದ ಜೆಡಿಎಸ್ ಪಕ್ಷದ ಸದಸ್ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸದಸ್ಯರ ವಿರೋಧ, ಸಭಾತ್ಯಾಗದ ಮಧ್ಯೆ 'ಗ್ರೇಟರ್ ಬೆಂಗಳೂರು ಆಡಳಿತ' ಮಸೂದೆ ವಿಧಾನ ಪರಿಷತ್‌ನಲ್ಲಿ ಬುಧವಾರ ಅಂಗೀಕಾರವಾಯಿತು.

ಮಸೂದೆ ಮಂಡಿಸಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಹೊಸ ಮಸೂದೆ ಅಖಂಡ ಬೆಂಗಳೂರನ್ನು ಛಿದ್ರ ಮಾಡುವುದಿಲ್ಲ. ಸುಗಮ ಆಡಳಿತದ ದೃಷ್ಟಿಯಿಂದ ಅಧಿಕಾರ ವಿಕೇಂದ್ರೀಕರಣ ಮಾಡಲಾಗುತ್ತಿದೆ. ಕೆಂಪೇಗೌಡರ ಬೆಂಗಳೂರಿಗೆ ಯಾವುದೇ ಚ್ಯುತಿಯಾಗದು. ಬೆಂಗಳೂರಿನ ಅಭಿವೃದ್ಧಿಗೆ ಎಲ್ಲರೂ ಸಹಕಾರ ನೀಡಬೇಕು ಎಂದು ಕೋರಿದರು.

ಡಿಸಿಎಂ ಭರವಸೆ...

- ಅಖಂಡ ಬೆಂಗಳೂರನ್ನು ಛಿದ್ರ ಮಾಡುವುದಿಲ್ಲ
- ಸುಗಮ ಆಡಳಿತದ ದೃಷ್ಟಿಯಿಂದ ಅಧಿಕಾರ ವಿಕೇಂದ್ರೀಕರಣ
- ಕೆಂಪೇಗೌಡರ ಬೆಂಗಳೂರಿಗೆ ಯಾವುದೇ ಚ್ಯುತಿಯಾಗದು

ವಿಧಾನಸಭೆ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯ ಸಚೇತಕ ಎನ್. ರವಿಕುಮಾರ್, ಬಿಜೆಪಿಯ ಕೆ.ಎಸ್. ಸುನಿಲ್, ಸಿ.ಟಿ. ರವಿ, ಜೆಡಿಎಸ್‌ನ ಎಸ್.ಎಲ್. ಬೋಜೇಗೌಡ, ಟಿ.ಎ. ಶರವಣ ಮತ್ತಿತರರು ಮಾತನಾಡಿ, ಬೆಂಗಳೂರು ವಿಭಜನೆಯಿಂದ ಜನರಿಗೆ ಗೊಂದಲವಾಗುತ್ತದೆ. ದೆಹಲಿಯಲ್ಲಿ ಇದೇ ಮಾದರಿ ಅನುಸರಿಸಿ ಏನಾಗಿದೆ ಎಂಬ ಮಾಹಿತಿಯನ್ನು ಪಡೆದುಕೊಳ್ಳಬೇಕು. ಸಂವಿಧಾನದ 74ನೇ ತಿದ್ದುಪಡಿಗೆ ಚ್ಯುತಿ ತರಬಾರದು ಎಂದು ಒತ್ತಾಯಿಸಿದರು.

ಗ್ರೇಟರ್ ಬೆಂಗಳೂರು ಮಸೂದೆ

ಬಿಬಿಎಂಪಿ ಚುನಾವಣೆ ನಡೆಸುವುದನ್ನು ಮುಂದೂಡಲು ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ ತರಲಾಗುತ್ತಿದೆ. ಮೊದಲು ಬಿಬಿಎಂಪಿ ಚುನಾವಣೆ ನಡೆಸಿ, ನಂತರ ಈ ಕುರಿತು ಚರ್ಚಿಸೋಣ ಎಂದೂ ಪ್ರತಿಪಾದಿಸಿದರು.

'ಮಸೂದೆಗೆ ಒಪ್ಪಿಗೆ ಕೊಡಿ. ನಂತರ ಎಲ್ಲರ ಸಲಹೆಯನ್ನು ಪರಿಗಣಿಸಿ, ಸೂಕ್ತ ನಿಯಮಗಳನ್ನು ಅಳವಡಿಸಿಕೊಳ್ಳೋಣ' ಎಂದು ಡಿ.ಕೆ. ಶಿವಕುಮಾರ್ ಸಲಹೆ ನೀಡಿದರು. ಅವರ ಸಲಹೆ ವಿರೋಧಿಸಿ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು. ಜೆಡಿಎಸ್ ಸದಸ್ಯರು ಅವರ ಜತೆಗೂಡಲಿಲ್ಲ. ಮಸೂದೆ ಅಂಗೀಕಾರವಾಗಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ಪ್ರಕಟಿಸಿದರು.

ಶಿರಾಡಿ ಘಾಟಿ: ರಾಜ್ಯ ಸರ್ಕಾರದ ವಿರುದ್ಧ ಸಂಸದ ಬ್ರಿಜೇಶ್ ಚೌಟ ಆರೋಪ

ಹೆದ್ದಾರಿ ವಿಸ್ತರಣೆಗೆ ರಾಜ್ಯ ಅಸಹಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ದಕ್ಷಿಣ ಕನ್ನಡ ಸಂಸದ ಬ್ರಿಜೇಶ್ ಚೌಟ ಅವರು ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಬುಧವಾರ ಭೇಟಿ ಮಾಡಿ ಶಿರಾಡಿ ಘಾಟಿ ಬೈಪಾಸ್ ಯೋಜನೆ ಅನುಷ್ಠಾನ ಸೇರಿ ಬೆಂಗಳೂರು-ಮಂಗಳೂರು ಹೆದ್ದಾರಿ ಸಂಪರ್ಕ ಸುಧಾರಣೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ಕುರಿತಂತೆ ಚರ್ಚೆ ನಡೆಸಿದರು.

'ಮಂಗಳೂರು- ಬೆಂಗಳೂರು ಹೆದ್ದಾರಿ ಯೋಜನೆಗಳ ಅನುಷ್ಠಾನ ವಿಚಾರದಲ್ಲಿ ರಾಜ್ಯ ಸರ್ಕಾರದ ಹಂತದಲ್ಲಿ ಇಲಾಖಾಧಿಕಾರಿಗಳಿಂದ ವಿಳಂಬ ಆಗುತ್ತಿದೆ. ಸಚಿವರು ತುರ್ತಾಗಿ ಮಧ್ಯಪ್ರವೇಶ ಮಾಡಿ ಎದುರಾಗಿರುವ ಎಲ್ಲ ಅಡೆ-ತಡೆ ನಿವಾರಣೆಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಅದರಲ್ಲಿಯೂ ಶಿರಾಡಿ ಘಾಟಿ ಮಾರ್ಗವನ್ನು ಮೇಲ್ದರ್ಜೆಗೇರಿಸಲು ಸೂಕ್ತ ಪಥಗಳ ನಿಗದಿ ಹಾಗೂ ಯೋಜನೆಗೆ ಅರಣ್ಯ ಇಲಾಖೆಯ ಮಂಜೂರಾತಿ ಪಡೆಯುವ ಪ್ರಕ್ರಿಯೆ ಚುರುಕುಗೊಳಿಸಬೇಕು' ಎಂದು ಅವರು ಮನವಿ ಮಾಡಿದರು.



ಬ್ರಿಜೇಶ್ ಚೌಟ

ಶಿರಾಡಿ ಘಾಟಿಯಲ್ಲಿ ಬಹುಪಥಗಳ ರಸ್ತೆ ನಿರ್ಮಾಣಕ್ಕೆ ಅರಣ್ಯ ಇಲಾಖೆಯ ಅನುಮತಿ ನೀಡುವ ಪ್ರಕ್ರಿಯೆ ನಿಧಾನವಾಗಿರುವ ಕಾರಣ ಯೋಜನೆ ಅನುಷ್ಠಾನಕ್ಕೆ ಹಿನ್ನಡೆಯಾಗಿದೆ. ಪ್ರಮುಖವಾಗಿ ಕರ್ನಾಟಕ ಸರ್ಕಾರದಿಂದ ಅರಣ್ಯ ಇಲಾಖೆಯ ಅನುಮತಿ ಬಾಕಿಯಿರುವ ಕಾರಣ ಈ ಯೋಜನೆ ಕಾರ್ಯರೂಪಕ್ಕೆ ತರುವುದಕ್ಕೆ ವಿಳಂಬವಾಗುತ್ತಿದೆ. ಈ ದಿಸೆಯಲ್ಲಿ ಶಿರಾಡಿ ಘಾಟಿ ರಸ್ತೆ ವಿಸ್ತರಣೆಗೆ ರಾಜ್ಯ ಸರ್ಕಾರದ ಕಡೆಯಿಂದ ಎದುರಾಗಿರುವ ಅಡೆ-ತಡೆ ನಿವಾರಣೆಗೆ ಹೆದ್ದಾರಿ ಸಚಿವಾಲಯದ ಕಡೆಯಿಂದ ಮಧ್ಯಸ್ಥಿಕೆ ವಹಿಸಬೇಕು' ಎಂದು ವಿನಂತಿಸಿದರು.

ಈ ವೇಳೆ ಪ್ರಕ್ರಿಯಿಸಿರುವ ಗಡ್ಕರಿ, 'ಶಿರಾಡಿ ಘಾಟಿ ಹೆದ್ದಾರಿ ಮೇಲ್ದರ್ಜೆಗೇರಿಸುವುದಕ್ಕೆ ರಾಜ್ಯ ಸರ್ಕಾರದಿಂದ ಅಗತ್ಯವಿರುವ ಎಲ್ಲ ರೀತಿಯ ಅನುಮತಿ ಹಾಗೂ ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಮುಂದಿನ ಹಂತದ ಕ್ರಮ ಜರುಗಿಸಲಾಗುವುದು' ಎಂದು ಭರವಸೆ ನೀಡಿದರು.

ಮಂಗಳೂರು-ಸುಬ್ರಹ್ಮಣ್ಯ ಪ್ಯಾಸೆಂಜರ್ ರೈಲಿಗೆ ಹಸಿರು ನಿಶಾನೆ: 'ಮಂಗಳೂರು- ಕಬಕ-ಪುತ್ತೂರು ಪ್ಯಾಸೆಂಜರ್ ರೈಲು ಸೇವೆಯನ್ನು ಸುಬ್ರಹ್ಮಣ್ಯ ಜಂಕ್ಷನ್‌ಗೆ ವಿಸ್ತರಿಸುವುದಕ್ಕೆ ರೈಲ್ವೆ ಮಂಡಳಿ ಈಗಾಗಲೇ ಮಂಜೂರಾತಿ ನೀಡಿದ್ದು, ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರ ದಿನಾಂಕ ನಿಗದಿ ಪಡಿಸಿಕೊಂಡು ಮಾರ್ಚ್ ಅಂತ್ಯದೊಳಗೆ ಈ ರೈಲು ಸೇವೆಗೆ ಚಾಲನೆ ನೀಡಲಾಗುತ್ತದೆ' ಎಂದು ಚೌಟ ತಿಳಿಸಿದರು.

ನವದೆಹಲಿಯಲ್ಲಿ ಸೋಮಣ್ಣ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.



ಹಸಿರ ಸಿರಿಗೆ ನೀಲಿ ಹೊದಿಕೆ

ಬಿಳಿಮೋಡ ಪಸರಿಸಿರುವ ನೀಲಿ ಬಾನು ಹಲಸೂರು ಕೆರೆ ಮತ್ತು ನಡುವಿನ ದ್ವೀಪಕ್ಕೆ ಹೊದಿಕೆ ಹೊದಿಸಿದಂತೆ ಕಂಡಿತು.

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಮೇಕೆದಾಟು: ವಿಧಾನಸೌಧ ಚಲೋ 21ರಂದು

ಮಂಡ್ಯ: 'ಮೇಕೆದಾಟು ಯೋಜನೆಗಾಗಿ ಆಗ್ರಹಿಸಿ ವಿಧಾನಸೌಧ ಚಲೋ ಪ್ರತಿಭಟನೆಯನ್ನು ಮಾ.21ರಂದು ನಡೆಸಲಿದ್ದು ಎಲ್ಲರೂ ಪಕ್ಷಾತೀತವಾಗಿ ಭಾಗವಹಿಸಬೇಕು' ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಪ್ರವೀಣಕುಮಾರ್ ಶೆಟ್ಟಿ ಮನವಿ ಮಾಡಿದರು.

ನಗರದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಕನ್ನಡಪರ ಸಂಘಟನೆಗಳ ಮುಖಂಡರು ಹಾಗೂ ಕರವೇ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

5 ಹೆದ್ದಾರಿಗಳಲ್ಲಿ ಸುಧಾರಿತ ನಿರ್ವಹಣಾ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು–ಮೈಸೂರು ಹೆದ್ದಾರಿ, ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಸೇರಿದಂತೆ ರಾಜ್ಯದ ಐದು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸುಧಾರಿತ ಸಂಚಾರಿತ ನಿರ್ವಹಣಾ ವ್ಯವಸ್ಥೆ (ಎಟಿಎಂಎಸ್) ಅಳವಡಿಸಲಾಗಿದೆ ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದರು.

ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯಾ ಬುಧವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, 'ತುಮಕೂರು–ಹಾವೇರಿ ಹೆದ್ದಾರಿ, ದಾಬಸ್‌ಪೇಟೆ–ಹೊಸಕೋಟೆ ಹೆದ್ದಾರಿ, ತುಮಕೂರು–ಶಿವಮೊಗ್ಗ ಹೆದ್ದಾರಿಗಳಲ್ಲಿ ಈ ವ್ಯವಸ್ಥೆ ಜಾರಿಗೆ ಬಂದಿದೆ. ಸ್ವಯಂ ಚಾಲಿತ ಕೃತಕ ಬುದ್ಧಿಮತ್ತೆ ಕ್ಯಾಮೆರಾ ಹಾಗೂ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಕೆ ಮಾಡಲಾಗಿದೆ' ಎಂದರು.

'ವಾಹನಗಳ ನೋಂದಣಿ ಫಲಕಗಳನ್ನು ಪತ್ತೆಹಚ್ಚಲು ಈ ಕ್ಯಾಮೆರಾಗಳು ನೆರವಾಗುತ್ತವೆ. ಹೆದ್ದಾರಿಗಳಲ್ಲಿ ಅಪಘಾತ ಪ್ರಕರಣ ಕಡಿಮೆ ಮಾಡಲು ಹಾಗೂ ಮಿತಿಮೀರಿ ವೇಗವಾಗಿ ಚಲಿಸುವ ವಾಹನಗಳ ಮೇಲೆ ನಿಗಾ ಇಡಲು ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ. ಹೆದ್ದಾರಿಯಲ್ಲಿ ಸಂಭವಿಸುವ ಘಟನೆಗಳನ್ನು ತ್ವರಿತವಾಗಿ ಪತ್ತೆ ಹಚ್ಚಲು ಹೆದ್ದಾರಿಗಳಲ್ಲಿ ಪರಿಣಾಮಕಾರಿ ಮೇಲ್ವಿಚಾರಣೆಗೆ ಸಹಾಯ ಮಾಡುವ ವಿವಿಧ ಎಲೆಕ್ಟ್ರಾನಿಕ್ ಸಾಧನಗಳನ್ನು ಈ ವ್ಯವಸ್ಥೆಯಡಿ ಅಳವಡಿಸಲಾಗಿದೆ' ಎಂದು ಅವರು ತಿಳಿಸಿದರು.

'ಚೆನ್ನೈ–ಬೆಂಗಳೂರು ಎಕ್ಸ್‌ಪ್ರೆಸ್‌ವೇ (262 ಕಿ.ಮೀ) ಯೋಜನೆಯ 71 ಕಿ.ಮೀ. ಕಾಮಗಾರಿ ಪೂರ್ಣಗೊಂಡಿದೆ. ಉಳಿದ ಕಾಮಗಾರಿ 2026ರ ಜೂನ್ ಒಳಗೆ ಮುಗಿಯಲಿದೆ. ಪ್ರವೇಶ ನಿಯಂತ್ರಿತ ಎಕ್ಸ್‌ಪ್ರೆಸ್‌ವೇ ಗಳಲ್ಲಿ ದ್ವಿಚಕ್ರ ವಾಹನಗಳ ಸಂಚಾರಕ್ಕೆ ಅನುಮತಿ ಇಲ್ಲ. ನಿಯಮ ಉಲ್ಲಂಘನೆ ಹಾಗೂ ಅಪಘಾತಗಳನ್ನು ನಿಯಂತ್ರಿಸಲು ಪ್ಯಾನ್, ಟಿಲ್ಟ್ ಹಾಗೂ ಜೂಮ್ ಕ್ಯಾಮೆರಾಗಳು, ವಿಡಿಯೊ ಇನ್ಸಿಡೆಂಟ್ ಡಿಟೆಕ್ಷನ್ ಸಿಸ್ಟಮ್ ಅಳವಡಿಸಲಾಗುತ್ತದೆ. ಚೆನ್ನೈ–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಕಾಮಗಾರಿ ಪೂರ್ಣಗೊಂಡ ಬಳಿಕ ರಾಜ್ಯ ಸರ್ಕಾರಗಳ ಸಹಕಾರದಲ್ಲಿ ಸುರಕ್ಷತಾ ಕ್ರಮಗಳನ್ನು ಜಾರಿಗೆ ತರಲಾಗುತ್ತದೆ' ಎಂದು ಅವರು ಹೇಳಿದರು.

ಐದು ವರ್ಷಗಳಲ್ಲಿ 3017 ಕಿ.ಮೀ. ಉದ್ದದ 144 ಹೆದ್ದಾರಿ ಕಾಮಗಾರಿಗಳನ್ನು ಕರ್ನಾಟಕಕ್ಕೆ ಮಂಜೂರು ಮಾಡಲಾಗಿದೆ. 2022ರ ರಸ್ತೆ ಅಪಘಾತ ವರದಿ ಪ್ರಕಾರ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳಲ್ಲಿ 24846 ಅಪಘಾತಗಳು ಸಂಭವಿಸಿವೆ ಎಂದು ವಿವರಿಸಿದರು.

ಟಾಯ್ಸ್ ಪಾರ್ಕ್ ನಿರ್ಮಾಣಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಚನ್ನಪಟ್ಟಣ ಬೊಂಬೆಗಳನ್ನು ಉತ್ತೇಜಿಸಲು ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಕಾರಿಡಾರ್‌ನಲ್ಲಿ ಟಾಯ್ಸ್ ಪಾರ್ಕ್ ನಿರ್ಮಿಸಿ ಸ್ಥಳೀಯ ಬೊಂಬೆ ತಯಾರಿಕರಿಗೆ ಉತ್ತೇಜನ ನೀಡಬೇಕು ಎಂದು ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್. ಮಂಜುನಾಥ್ ಮನವಿ ಮಾಡಿದರು.

ಬುಧವಾರ ಇಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಅವರು, 'ಸಾವಿರಾರು ಕುಟುಂಬಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬೊಂಬೆ ಉದ್ಯಮದ ಮೇಲೆ ಅವಲಂಬಿತವಾಗಿವೆ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಕಾರಿಡಾರ್ ನಿರ್ಮಾಣದ ನಂತರ ಚನ್ನಪಟ್ಟಣಕ್ಕೆ ಬರುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಇದರಿಂದಾಗಿ ಈ ಉದ್ಯಮದ ಮೇಲೆ ಅವಲಂಬಿತರಾಗಿರುವವರ ಸ್ಥಿತಿ ಶೋಚನೀಯವಾಗಿದೆ. ಟಾಯ್ಸ್ ಪಾರ್ಕ್ ನಿರ್ಮಿಸಿದರೆ ಬೊಂಬೆ ತಯಾರಕರಿಗೆ ಅನುಕೂಲವಾಗಲಿದೆ' ಎಂದರು. ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದರು.



ನಿತಿನ್ ಗಡ್ಕರಿ ಅವರಿಗೆ ಡಾ.ಸಿ.ಎನ್. ಮಂಜುನಾಥ್ ಮನವಿ ಸಲ್ಲಿಸಿದರು

ರಾಜ್ಯಸಭೆಯಲ್ಲಿ ಎಚ್.ಡಿ.ದೇವೇಗೌಡ ಒತ್ತಾಯ

'ಬಾಕಿ ರೈಲ್ವೆ ಯೋಜನೆಗಳ ಪೂರ್ಣಗೊಳಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಚಾಲ್ತಿಯಲ್ಲಿರುವ ಹಾಗೂ ನನೆಗುದಿಗೆ ಬಿದ್ದಿರುವ ರೈಲ್ವೆ ಯೋಜನೆಗಳನ್ನು ಆದ್ಯತೆಯ ಮೇರೆಗೆ ಕ್ಷಿಪ್ರಗತಿಯಲ್ಲಿ ಕಾರ್ಯಗತಗೊಳಿಸಬೇಕು ಎಂದು ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಆಗ್ರಹಿಸಿದರು.

ರಾಜ್ಯಸಭೆಯಲ್ಲಿ ರೈಲ್ವೆ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಬುಧವಾರ ಮಾತನಾಡಿದ ಅವರು, ಕರ್ನಾಟಕದ ರೈಲ್ವೆ ಯೋಜನೆಗಳ ಅಗತ್ಯವನ್ನು ಒತ್ತಿ ಹೇಳಿದರು.

'ಹಿಂದಿನ ಸರ್ಕಾರಗಳು ಕರ್ನಾಟಕದ ಹಲವಾರು ನಿರ್ಣಾಯಕ ರೈಲ್ವೆ ಯೋಜನೆಗಳನ್ನು ನಿರ್ಲಕ್ಷಿಸಿದ್ದವು. ಆದಾಗ್ಯೂ, ಪ್ರಸ್ತುತ ಸರ್ಕಾರದ ಅಡಿಯಲ್ಲಿ ರಾಜ್ಯಕ್ಕೆ ರೈಲ್ವೆ ಅನುದಾನ ಹಂಚಿಕೆಯಲ್ಲಿ ಭಾರಿ ಏರಿಕೆ ಆಗಿದೆ. ಈ ಹಂಚಿಕೆಯು ₹800 ಕೋಟಿಯಿಂದ ₹7,000 ಕೋಟಿಗೆ ಏರಿದೆ' ಎಂದರು.

'ನರೇಂದ್ರ ಮೋದಿ ಅವರ ಆಡಳಿತದ ಅಡಿಯಲ್ಲಿ ರಾಜ್ಯದ ಅನೇಕ ರೈಲ್ವೆ ಯೋಜನೆಗಳಿಗೆ ಮರು ಚಾಲನೆ ಸಿಕ್ಕಿದೆ. ಆದಾಗ್ಯೂ ಚಿಕ್ಕಮಗಳೂರಿನಿಂದ ಶಿವಮೊಗ್ಗಕ್ಕೆ ಮತ್ತು ಶೃಂಗೇರಿಗೆ ರೈಲು ಮಾರ್ಗ ಮತ್ತು ಬೆಂಗಳೂರಿನಿಂದ ಭಾರತದ ಇತರೆ ಭಾಗಗಳಿಗೆ ಸಂಪರ್ಕ ಸೇರಿದಂತೆ ಹಲವಾರು ಯೋಜನೆಗಳು ಕಾರ್ಯರೂಪಕ್ಕೆ ಬಾರದೆ ಇನ್ನೂ ಬಾಕಿ ಉಳಿದಿವೆ. ಇವುಗಳ ಕಡೆ ರೈಲ್ವೆ ಸಚಿವರು ತಕ್ಷಣ ಗಮನ ಹರಿಸಬೇಕಾಗಿದೆ' ಎಂದು ಅವರು ಹೇಳಿದರು.

'ಹಾಸನದಿಂದ ಮೈಸೂರಿಗೆ ರೈಲಿನಲ್ಲಿ ಪ್ರಯಾಣ ಮಾಡಿದರೆ ಟಿಕೆಟ್ ವೆಚ್ಚ ₹30 ಆಗುತ್ತದೆ. ಆದರೆ, ಬಸ್ ದರಗಳು ಬಹುತೇಕ ಎರಡು–ಮೂರು ಪಟ್ಟು ಹೆಚ್ಚಾಗಿರುತ್ತವೆ. ಇದಕ್ಕಾಗಿಯೇ ರೈಲ್ವೆ ಯೋಜನೆಗಳ ವಿಸ್ತರಣೆ ಪೂರ್ಣ ವೇಗದಲ್ಲಿ ಮುಂದುವರಿಯಬೇಕು' ಎಂದು ಅವರು ಪ್ರತಿಪಾದಿಸಿದರು.

ಹಿಂದೆ ಅನುಮೋದನೆ ಪಡೆಯಲು ವರ್ಷಗಳೇ ಹಿಡಿಯುತ್ತಿದ್ದ ರೈಲ್ವೆ ಯೋಜನೆಗಳು ಈಗ ಅಭೂತಪೂರ್ವ ವೇಗದಲ್ಲಿ ಕಾರ್ಯಗತಗೊಳ್ಳುತ್ತಿವೆ ಎಂದ ಅವರು; ತಮ್ಮ ಅಧಿಕಾರಾವಧಿಯಲ್ಲಿ ರೈಲ್ವೆ ಅನುದಾನ ಹಂಚಿಕೆ, ಯೋಜನೆಗಳ ಜಾರಿ ಇತ್ಯಾದಿ ಅಂಶಗಳನ್ನು ನೆನಪು ಮಾಡಿಕೊಂಡರು. ಅಲ್ಲದೆ, ಆಗ ನಿರ್ಧಾರ ತೆಗೆದುಕೊಳ್ಳುವಲ್ಲಿ ವಿಳಂಬ ಮತ್ತು ನಿಧಾನಗತಿಯ ಯೋಜನಾ ಅನುಷ್ಠಾನ ಪರಿಸ್ಥಿತಿಯನ್ನು ನೆನಪಿಸಿಕೊಂಡರು.

ತಮ್ಮ ಸಲಹೆಗಳು ಟೀಕಿಸುವ ಉದ್ದೇಶವನ್ನು ಹೊಂದಿಲ್ಲ, ಬದಲಾಗಿ ಎಲ್ಲಾ ಪ್ರದೇಶಗಳಲ್ಲಿ ಸಮತೋಲಿತ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವ ಆಶಯವನ್ನು ಹೊಂದಿವೆ ಎಂದು ಅವರು ಪುನರುಚ್ಚರಿಸಿದರು.

ಹೆದ್ದಾರಿ ಯೋಜನೆಗಳಿಗೆ ಶೀಘ್ರ ಅನುಮೋದನೆ ನೀಡಿ: ಕಾರಜೋಳ

ನವದೆಹಲಿ: ಚಿತ್ರದುರ್ಗ ಕ್ಷೇತ್ರದ ಹೆದ್ದಾರಿಗಳ ಅಭಿವೃದ್ಧಿಗೆ ಸಂಬಂಧಿಸಿ ಸಲ್ಲಿಸಿರುವ ಪ್ರಸ್ತಾವಗಳಿಗೆ ಶೀಘ್ರ ಅನುಮೋದನೆ ನೀಡಬೇಕು' ಎಂದು ಸಂಸದ ಗೋವಿಂದ ಕಾರಜೋಳ ಅವರು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಬುಧವಾರ ಇಲ್ಲಿ ಮನವಿ ಮಾಡಿದರು.

'ಹಿರಿಯೂರು ಬಳಿ ಕ್ಲೋವರ್ ಲೀಫ್ ಜಂಕ್ಷನ್ ನಿರ್ಮಾಣ, ಚಳ್ಳಕೆರೆ ಪಟ್ಟಣದಲ್ಲಿ ಹೆದ್ದಾರಿ ಅಭಿವೃದ್ಧಿ, ಮೂಡಿಗೆರೆ–ಹೊಳಲ್ಕೆರೆ ಹೆದ್ದಾರಿಯನ್ನು ದಾವಣಗೆರೆ ಜಿಲ್ಲೆಯ ಆನಗೋಡು ವರೆಗೆ ವಿಸ್ತರಣೆ, ಹಿರಿಯೂರು ಹತ್ತಿರ ಆದಿವಾಲ–ಪಟ್ರೇಹಳ್ಳಿ ಬಳಿ ಕೆಳಸೇತುವೆ ನಿರ್ಮಾಣ, ಚಿಕ್ಕನಹಳ್ಳಿ ಅಂಡರ್‌ಪಾಸ್ ಲೋಪ ಸರಿಪಡಿಸಬೇಕು' ಎಂದು ಅವರು ಒತ್ತಾಯಿಸಿದರು. ಈ ಯೋಜನೆಗಳಿಗೆ ಶೀಘ್ರ ಅನುಮೋದನೆ ನೀಡಿ ಅನುದಾನ ಒದಗಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಲೋಕ ಅದಾಲತ್: ವಿಲೇವಾರಿಯಾದ 4,204 ಎಂವಿಸಿ ಪ್ರಕರಣ

ಒಟ್ಟು 41 ಲಕ್ಷ ಪ್ರಕರಣ ಇತ್ಯರ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಇದೇ 8ರಂದು ನಡೆದ 2025ನೇ ಸಾಲಿನ ಮೊದಲ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ನ್ಯಾಯಾಲಯದಲ್ಲಿ ಬಾಕಿಯಿದ್ದ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳೂ ಸೇರಿದಂತೆ ಒಟ್ಟು 41 ಲಕ್ಷಕ್ಕೂ ಹೆಚ್ಚು ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ.

ಈ ಕುರಿತ ಅಂಕಿಅಂಶಗಳನ್ನು 'ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ'ದ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ವಿ.ಕಾಮೇಶ್ವರ್ ರಾವ್ ಮತ್ತು ಶ್ರೀನಿವಾಸ ಹರೀಶ್ ಕುಮಾರ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

'ಬೆಂಗಳೂರಿನ ಐದು, ಧಾರವಾಡದ 4 ಮತ್ತು ಕಲಬುರಗಿಯ 2 ಪೀಠಗಳು ಕಾರ್ಯನಿರ್ವಹಿಸಿ ಒಟ್ಟು 963 ಪ್ರಕರಣಗಳನ್ನು ಇತ್ಯರ್ಥಪಡಿಸಿವೆ. ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ 994 ಅದಾಲತ್ ನಡೆಸಲಾಗಿದೆ. ಆ ಮೂಲಕ ಒಟ್ಟು 1,005 ಪೀಠಗಳು ಅದಾಲತ್ ನಡೆಸಿ ನ್ಯಾಯಾಲಯದಲ್ಲಿ ಬಾಕಿಯಿದ್ದ 2,59,270 ಪ್ರಕರಣಗಳು ಮತ್ತು ವ್ಯಾಜ್ಯ ಪೂರ್ವ 39,22,498 ಪ್ರಕರಣಗಳೂ ಸೇರಿದಂತೆ ಒಟ್ಟು 41,81,768 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಒಟ್ಟು ₹2,345 ಕೋಟಿ ಮೊತ್ತವನ್ನು ಪರಿಹಾರ ರೂಪದಲ್ಲಿ ಕೊಡಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ಈ ಬಾರಿಯ ಅದಾಲತ್‌ನಲ್ಲಿ 5 ವರ್ಷ ಮತ್ತು ಅದಕ್ಕೂ ಹಳೆಯದಾದ 1,457 ಮತ್ತು 10 ವರ್ಷ ಹಾಗೂ ಅದಕ್ಕೂ ಹಳೆಯದಾದ 212 ಪ್ರಕರಣಗಳು, 15 ವರ್ಷ ಮತ್ತು ಅದಕ್ಕೂ ಹಳೆಯದಾದ 37 ಮತ್ತು ಬೆಂಗಳೂರಿನ 8ನೇ ಎಸಿಎಂಎಂ ನ್ಯಾಯಾಲಯದಲ್ಲಿ 28 ವರ್ಷಗಳಷ್ಟು ಹಳೆಯದಾದ ಕ್ರಿಮಿನಲ್ ಪ್ರಕರಣವನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಿರುವುದು ವಿಶೇಷವಾಗಿದೆ. 1,540 ಪ್ರಕರಣಗಳಲ್ಲಿ ಹಿರಿಯ ನಾಗರಿಕರು ತಮ್ಮ ವ್ಯಾಜ್ಯಗಳನ್ನು ಪರಿಹರಿಸಿ ಕೊಂಡಿದ್ದಾರೆ' ಎಂದು ನ್ಯಾಯಮೂರ್ತಿಗಳು ಸಂತಸ ವ್ಯಕ್ತಪಡಿಸಿದರು.

'11,408 ಚೆಕ್ ಬೌನ್ಸ್ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. 455 ಎಲ್‌ಎಸಿ ಅಮಲ್ಜಾರಿ ಪ್ರಕರಣಗಳನ್ನು ಇತ್ಯರ್ಥಪಡಿಸಿ, ₹123 ಕೋಟಿ ಪರಿಹಾರ ಕಲ್ಪಿಸಲಾಗಿದೆ. 784 ಎಂವಿಸಿ ಅಮಲ್ಜಾರಿ ಪ್ರಕರಣಗಳನ್ನು ₹69 ಕೋಟಿ ಪರಿಹಾರ ಮೊತ್ತಕ್ಕೆ ಇತ್ಯರ್ಥ ಪಡಿಸಲಾಗಿದೆ. ಅಂತೆಯೇ, 3,279 ಇತರೆ ಅಮಲ್ಜಾರಿ ಪ್ರಕರಣ ಇತ್ಯರ್ಥ ಪಡಿಸಲಾಗಿದ್ದು, ₹109 ಕೋಟಿ ಪರಿಹಾರ ಒದಗಿಸಲಾಗಿದೆ' ಎಂದು ವಿವರಿಸಿದರು.

'67 ಗ್ರಾಹಕರ ವ್ಯಾಜ್ಯ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ₹2.59 ಕೋಟಿ ಪರಿಹಾರ ನೀಡಲಾಗಿದೆ. ರಿಯಲ್ ಎಸ್ಟೇಟ್‌ಗೆ ಸಂಬಂಧಿಸಿದಂತೆ ರೇರಾ ಮುಂದೆ ಬಾಕಿಯಿದ್ದ 40 ಪ್ರಕರಣಗಳನ್ನು ₹2.6 ಕೋಟಿಗೆ, ಸಾಲ ವಸೂಲಾತಿ ನ್ಯಾಯಮಂಡಳಿಯಲ್ಲಿನ 411 ಪ್ರಕರಣಗಳನ್ನು ₹195 ಕೋಟಿ ಪರಿಹಾರ ಮೊತ್ತಕ್ಕೆ ಇತ್ಯರ್ಥ ಮಾಡಲಾಗಿದೆ' ಎಂದು ತಿಳಿಸಿದರು.

'ಬೆಂಗಳೂರು ನಗರ ಜಿಲ್ಲೆಯ ಲಘು ವ್ಯಾಜ್ಯಗಳ ನ್ಯಾಯಾಲಯದಲ್ಲಿ (ಸಿಸಿಎಚ್-1) ಎಂವಿಸಿ ಪ್ರಕರಣವೊಂದನ್ನು ₹1.20 ಕೋಟಿಗೆ, ಸಿಸಿಚ್-25ರಲ್ಲಿನ ಪ್ರಕರಣವೊಂದನ್ನು ₹1.80 ಕೋಟಿಗೆ, ಸಿಸಿಎಚ್-4ರಲ್ಲಿನ ಪ್ರಕರಣವೊಂದನ್ನು ₹1.49 ಕೋಟಿ ಪರಿಹಾರ ಮೊತ್ತಕ್ಕೆ ಇತ್ಯರ್ಥ ಪಡಿಸಲಾಗಿದೆ. ಬೆಂಗಳೂರು ಜಿಲ್ಲೆಯಲ್ಲಿ ಎರಡು ಪ್ರತ್ಯೇಕ ಚೆಕ್ ಬೌನ್ಸ್‌ಗಳನ್ನು ಕ್ರಮವಾಗಿ ₹3 ಕೋಟಿ ಮತ್ತು ₹5.81 ಕೋಟಿ ಮೊತ್ತಕ್ಕೆ ವಿಲೇವಾರಿ ಮಾಡಲಾಗಿದೆ' ಎಂದು ಮಾಹಿತಿ ನೀಡಿದರು.

ಕಾನೂನು ಸೇವೆಗಳ ರಾಜ್ಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಎಲ್.ರಘುನಾಥ್, ಉಪ ಕಾರ್ಯದರ್ಶಿ ಎಂ.ಶ್ರೀಧರ್ ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿ ಪಿ.ಎಂ. ಬಾಲಸುಬ್ರಮಣಿ ಇದ್ದರು.

ಮುಖ್ಯಾಂಶಗಳು

- 1,966 ವೈವಾಹಿಕ ಪ್ರಕರಣ ಇತ್ಯರ್ಥ
- ಪುನಃ ಒಂದಾದ 355 ದಂಪತಿಗಳು
- 3,247 ವಿಭಾಗ ದಾವೆ ವಿಲೇವಾರಿ



ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ವಿ.ಕಾಮೇಶ್ವರ್ ರಾವ್ ಮತ್ತು ಶ್ರೀನಿವಾಸ ಹರೀಶ್ ಕುಮಾರ್ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ 2025ನೇ ಸಾಲಿನ ಮೊದಲ ರಾಷ್ಟ್ರೀಯ ಲೋಕ ಅದಾಲತ್ ವಿವರ ನೀಡಿದರು

2ನೇ ರಾಷ್ಟ್ರೀಯ ಲೋಕ ಅದಾಲತ್ ಮೇ 10ಕ್ಕೆ

'2025ನೇ ಸಾಲಿನ ಎರಡನೇ ರಾಷ್ಟ್ರೀಯ ಲೋಕ ಅದಾಲತ್ ಅನ್ನು ಮೇ 10ರಂದು ನಡೆಸಲು ತೀರ್ಮಾನಿಸಲಾಗಿದೆ. ವ್ಯಾಜ್ಯದಾರರು ಆ ಅದಾಲತ್‌ನಲ್ಲಿ ಭಾಗವಹಿಸಿ ತಮ್ಮ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ತ್ವರಿತವಾಗಿ ಇತ್ಯರ್ಥಪಡಿಸಿಕೊಳ್ಳಲು ಅವಕಾಶವಿದೆ' ಎಂದು ನ್ಯಾಯಮೂರ್ತಿ ವಿ.ಕಾಮೇಶ್ವರ್ ರಾವ್ ಅವರು ತಿಳಿಸಿದ್ದಾರೆ.

ಚಿತ್ರಾವಳಿ



ವಿದ್ಯಾರಣ್ಯಪುರದಲ್ಲಿರುವ ವಿದ್ಯಾಗಣಪತಿ ದೇವಸ್ಥಾನದ ಆವರಣದಲ್ಲಿ ವಿದ್ಯಾರಣ್ಯಪುರ ಸಂಸ್ಕೃತಿ ಕೇಂದ್ರದವರು ₹80ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ವಿದ್ಯಾಗಣಪತಿ ಸಮುದಾಯ ಭವನವನ್ನು ತುಮಕೂರಿನ ಸಿದ್ಧಗಂಗಾಮಠದ ಸಿದ್ಧಲಿಂಗಸ್ವಾಮೀಜಿ ಅವರು ಉದ್ಘಾಟಿಸಿದರು. ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷ ಆರ್. ಅಶ್ವಥ್, ಉಪಾಧ್ಯಕ್ಷ ನಾಗರಾಜ್, ಕಾರ್ಯದರ್ಶಿ ಡಾ. ಜಗದೀಶ್, ಸಹ ಕಾರ್ಯದರ್ಶಿ ಚಂದ್ರಶೇಖರ್ ದೀಕ್ಷಿತ್, ಖಜಾಂಚಿ ಶ್ರೀನಿವಾಸ ಮೂರ್ತಿ ಮತ್ತಿತರರು ಹಾಜರಿದ್ದರು



ಕೆನರಾ ಬ್ಯಾಂಕ್ ವೆಲ್ ಫೇರ್ ಸೊಸೈಟಿಯವರು ಬನಶಂಕರಿಯ ಸೇವಾಕ್ಷೇತ್ರ ಆಸ್ಪತ್ರೆಯ ಆವರಣದಲ್ಲಿರುವ ಮಾತೃಛಾಯಾ ವೃದ್ಧಾಶ್ರಮದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬೆಂಗಳೂರಿನ ಕಲಾಕದಂಬ ಆರ್ಟ್ ಸೆಂಟರ್‌ನ ಕಲಾವಿದರು ಕಂಸ ವಧೆ ಯಕ್ಷಗಾನ ಪ್ರಸಂಗವನ್ನು ಪ್ರದರ್ಶಿಸಿದರು

ಐಪಿಎಸ್ ಅಧಿಕಾರಿಗಳ ವಿರುದ್ಧ ಸ್ನೇಹಮಯಿ ಕೃಷ್ಣ ದೂರು

ಪ್ರಜಾವಾಣಿ ವಾರ್ತೆ

ಮೈಸೂರು: 'ಐಪಿಎಸ್ ಅಧಿಕಾರಿಗಳಾದ ಲೋಕಾಯುಕ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮನೀಶ್ ಕರ್ಬೀಕರ್, ಪೊಲೀಸ್ ಮಹಾನಿರೀಕ್ಷಕ ಸುಬ್ರಹ್ಮಣ್ಯೇಶ್ವರ ರಾವ್, ಮೈಸೂರು ಲೋಕಾಯುಕ್ತ ಎಸ್.ಪಿ. ಟಿ.ಜೆ. ಉದೇಶ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರರ ವಿರುದ್ಧದ ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಸುಳ್ಳು ತನಿಖಾ ವರದಿ ಸಲ್ಲಿಸಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು'ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಕೇಂದ್ರ ಜಾಗೃತಿ ಆಯೋಗದ ಆಯುಕ್ತರಿಗೆ ಅಂಚೆ ಮೂಲಕ ದೂರು ಸಲ್ಲಿಸಿದ್ದಾರೆ.



ಸ್ನೇಹಮಯಿ ಕೃಷ್ಣ

'ಪ್ರಕರಣದ ತನಿಖೆಯ ಉಸ್ತುವಾರಿ ಹೊತ್ತಿದ್ದ ಈ ಮೂವರು ಅಧಿಕಾರಿಗಳು ಪ್ರಭಾವಕ್ಕೆ ಒಳಗಾಗಿ ಸೂಕ್ತವಾಗಿ ತನಿಖೆ ನಡೆಸಿಲ್ಲ. ಬೇಕಾದಂತೆ ವರದಿ ಸಿದ್ಧಪಡಿಸಿ ಕರ್ತವ್ಯ ಲೋಪ ಎಸಗಿದ್ದಾರೆ. ಮೂವರನ್ನು ವಿಚಾರಣೆಗೆ ಒಳಪಡಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಅವರು ದೂರಿನಲ್ಲಿ ಕೋರಿದ್ದಾರೆ.

ಅಮೆರಿಕಕ್ಕೆ ಬೇಕಾಗಿದ್ದ ಆರೋಪಿ ಭಾರತದಲ್ಲಿ ಸೆರೆ

ನವದೆಹಲಿ (ಪಿಟಿಐ): ಲಿಥುವೇನಿಯಾ ದೇಶದ ಪ್ರಜೆ ಅಲೆಕ್ಸೆಜ್ ಬೆಸಿಯೊಕೊವ್ ಎನ್ನುವವನನ್ನು ಸಿಬಿಐ ಮತ್ತು ಕೇರಳ ಪೊಲೀಸರು ಬಂಧಿಸಿದ್ದಾರೆ.



ಕ್ರಿಮಿನಲ್ ಕೃತ್ಯಗಳ ಮೂಲಕ ಸಂಪಾದಿಸಿದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಲು ಕ್ರಿಪ್ಟೊ ಕರೆನ್ಸಿ ವಿನಿಮಯ ವೇದಿಕೆ 'ಗ್ಯಾರಂಟೆಕ್ಸ್' ಆರಂಭಿಸಿದ ಕಾರಣಕ್ಕೆ ಈತ ಅಮೆರಿಕದ ತನಿಖಾ ಏಜೆನ್ಸಿಗಳಿಗೂ ಬೇಕಾದವ.

ದೇಶದಿಂದ ಪರಾರಿಯಾಗಲು ಯತ್ನಿಸುತ್ತಿದ್ದ ಸಂದರ್ಭದಲ್ಲಿ ಈತನನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಮೆರಿಕದ ಏಜೆನ್ಸಿಗಳ ಪ್ರಕಾರ, 2019ರಿಂದ 2025ರವರೆಗೆ ಈತ 'ಗ್ಯಾರಂಟೆಕ್ಸ್' ವೇದಿಕೆಯನ್ನು ನಿಯಂತ್ರಿಸುತ್ತಿದ್ದ, ನಿರ್ವಹಿಸುತ್ತಿದ್ದ. ಈ ವೇದಿಕೆಯು ಭಯೋತ್ಪಾದಕ ಸಂಘಟನೆಗಳು ಸೇರಿದಂತೆ ಹಲವು ಅಂತರರಾಷ್ಟ್ರೀಯ ಕ್ರಿಮಿನಲ್ ಸಂಘಟನೆಗಳ ಕೋಟ್ಯಂತರ ಡಾಲರ್ ಮೊತ್ತವನ್ನು ಕ್ರಿಪ್ಟೊಕರೆನ್ಸಿಗಳ ರೂಪದಲ್ಲಿ ಅಕ್ರಮವಾಗಿ ವರ್ಗಾವಣೆ ಮಾಡಿಕೊಟ್ಟಿದೆ.

ಗ್ಯಾರಂಟೆಕ್ಸ್‌ನ ತಾಂತ್ರಿಕ ಆಡಳಿತಾಧಿಕಾರಿ ಆಗಿದ್ದ ಈತ, ಈ ವೇದಿಕೆಗೆ ಅಗತ್ಯವಿರುವ ಮೂಲ ಸೌಕರ್ಯವನ್ನು ನಿರ್ವಹಿಸುವ ಕೆಲಸ ಮಾಡುತ್ತಿದ್ದ.

ಮೈಸೂರು: ಮಹಿಳಾ ನಿಲಯದ ಇಬ್ಬರಿಗೆ ಕಂಕಣ ಭಾಗ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯ ಮಹಿಳಾ ನಿಲಯ ಆವರಣವು ಬುಧವಾರ ಮದುವೆ ಮನೆಯಾಗಿ ಬದಲಾಗಿತ್ತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನಿಲಯದ ಇಬ್ಬರು ನಿವಾಸಿಗಳ ಮದುವೆ ವಿಜೃಂಭಣೆಯಿಂದ ನಡೆಯಿತು.

ನಿಲಯದ ಅಶ್ವಿನಿ ಅವರು ಬಿ.ಆರ್.ಸಂದೀಪ್ ಅವರೊಂದಿಗೆ ಹಾಗೂ ಬಿ.ಬಿ.ಆಯೇಷಾ ಬಾನು ಅವರು ಕೆ.ವಿಕಾಸ್ ಅವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಸಂದೀಪ್ ಚಿತ್ರದುರ್ಗದವರಾಗಿದ್ದು, ಅದೇ ಜಿಲ್ಲೆಯಲ್ಲಿ ಬ್ಯಾಂಕ್ ಉದ್ಯೋಗಿ. ಕೆ.ವಿಕಾಸ್ ವಿಜಯನಗರ ಜಿಲ್ಲೆಯ ನಾಗೇನಹಳ್ಳಿಯವರಾಗಿದ್ದು, ಕೆಎಂಎಫ್ ಡೀಲರ್. ಎರಡೂ ಕುಟುಂಬದವರು ಅನೇಕ ಕಡೆ ಹುಡುಕಾಟ ನಡೆಸಿದ ಬಳಿಕ, ಸಂಬಂಧಿಕರ ಮೂಲಕ ಮಾಹಿತಿ ಪಡೆದು ನಿಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಇಲಾಖೆಯ ಉಪನಿರ್ದೇಶಕ ಬಿ.ಬಸವರಾಜು ಮದುವೆಯ ನೇತೃತ್ವ ವಹಿಸಿದ್ದರು.ಅಧಿಕಾರಿಗಳು ಹಾಗೂ ಸಿಬ್ಬಂದಿ ವಧು, ವರರಿಗೆ ಶುಭಾಶಯ ಕೋರಿದರು.

'ಯುವತಿಯರ ಇಷ್ಟದಂತೆ ಹಿಂದೂ ಸಂಪ್ರದಾಯದಲ್ಲಿ ಮದುವೆ ನಡೆಸಲಾಗಿದೆ. ಇಲಾಖೆಯಿಂದ ₹15 ಸಾವಿರ ಅವರ ಹೆಸರಿನಲ್ಲಿ ಠೇವಣಿ ಇಡಲಾಗುವುದು. ಯುವಕರ ಬಗ್ಗೆ ವಿಚಾರಿಸಿ, ಪೊಲೀಸ್ ಇಲಾಖೆಯಿಂದ ವರದಿಯನ್ನೂ ಪಡೆದಿದ್ದೇವೆ. ಐದು ವರ್ಷ ಅವರ ನಡವಳಿಕೆ ಬಗ್ಗೆ ನಿಗಾ ವಹಿಸುತ್ತೇವೆ' ಎಂದು ಬಸವರಾಜು ತಿಳಿಸಿದರು.

ಆಟೊ ಪ್ರಯಾಣ ದರ ಪರಿಷ್ಕರಣೆಗೆ ಸಂಬಂಧಿಸಿ ನಡೆದ ಸಭೆ

ವಾರದಲ್ಲಿ ಅಭಿಪ್ರಾಯ ನೀಡಲು ಸೂಚನೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಆಟೊರಿಕ್ಷಾ ಪ್ರಯಾಣ ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ಆಟೊರಿಕ್ಷಾ ಚಾಲಕ–ಮಾಲೀಕರ ಸಂಘಟನೆಗಳು ಒಂದು ವಾರದ ಒಳಗೆ ಲಿಖಿತವಾಗಿ ಅಭಿಪ್ರಾಯ ತಿಳಿಸಬೇಕು. ಅದರ ಆಧಾರದಲ್ಲಿ ವರದಿ ಸಿದ್ಧಪಡಿಸಲು ಬೆಂಗಳೂರು ಸಾರಿಗೆ ಪ್ರಾಧಿಕಾರದ ಉಪಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು.

ಬೆಂಗಳೂರು ನಗರ ವ್ಯಾಪ್ತಿಯ ಆಟೊ ಪ್ರಯಾಣ ದರಕ್ಕೆ ಸಂಬಂಧಿಸಿದಂತೆ ಬುಧವಾರ ಪೂರ್ವ ಡಿಸಿಪಿ ಕಚೇರಿಯಲ್ಲಿ ಡಿಸಿಪಿ ಸಾಹಿಲ್ ಬಾಗ್ಲಾ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

2021ರಲ್ಲಿ ದರ ಪರಿಷ್ಕರಣೆ ಮಾಡಲಾಗಿದ್ದು, ಅದೇ ದರ ಮುಂದುವರಿದಿದೆ. ಇಂಧನ ಹಾಗೂ ನಿತ್ಯ ಬಳಕೆಯ ವಸ್ತುಗಳ ದರ ನಾಲ್ಕು ವರ್ಷಗಳಲ್ಲಿ ವಿಪರೀತ ಹೆಚ್ಚಳವಾಗಿದೆ. ಆಗ ಆಟೊ ಚಾಸಿಗೆ ₹ 1.5 ಲಕ್ಷ ಇತ್ತು. ಈಗ ₹2.70 ಲಕ್ಷಕ್ಕೆ ಏರಿಕೆಯಾಗಿದೆ. ಹೀಗಾಗಿ ಆಟೊ ಪ್ರಯಾಣ ದರವನ್ನು ಏರಿಸಬೇಕು ಎಂದು ಹಲವು ಸಂಘಟನೆಗಳ ಪದಾಧಿಕಾರಿಗಳು ಸಭೆಯಲ್ಲಿ ಆಗ್ರಹಿಸಿದರು.

'ನಿಮ್ಮ ಅಭಿಪ್ರಾಯಗಳನ್ನು ಒಂದು ವಾರದ ಒಳಗೆ ಲಿಖಿತವಾಗಿ ನೀಡಬೇಕು. ನಾವು ಆಗಿನ ಇಂಧನ ದರ, ಇತರೆ ವೆಚ್ಚಗಳನ್ನು ಮತ್ತು ಈಗಿನ ಇಂಧನ ದರ, ಇತರೆ ವೆಚ್ಚಗಳನ್ನು ತಾಳೆ ಮಾಡಿ ನೋಡಿ, ನಿಮ್ಮ ಅಭಿಪ್ರಾಯಗಳನ್ನೂ ಪರಿಗಣಿಸಿ ವರದಿ ತಯಾರು ಮಾಡುತ್ತೇವೆ. ಅದನ್ನು ನಗರ ಜಿಲ್ಲಾಧಿಕಾರಿಗೆ ಸಲ್ಲಿಸುತ್ತೇವೆ. ಅವರು ಮುಂದಿನ ತೀರ್ಮಾನ ಕೈಗೊಳ್ಳಲಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾಪನಶಾಸ್ತ್ರ ಅಧಿಕಾರಿ ಸೀಮಾ, ಶಾಂತಿನಗರ ಎಸ್.ಟಿ.ಯು ಮತ್ತು ಆಟೊ ರಿಕ್ಷಾ ಪರವಾನಗಿ ವಿಭಾಗದ ಪ್ರಾದೇಶಿಕ ಸಾರಿಗೆ ಅಧಿಕಾರಿ ಸೌಂದರ್ಯಾ, ಕೋರಮಂಗಲ ಪ್ರಾದೇಶಿಕ ಸಾರಿಗೆ ಅಧಿಕಾರಿ (ಬೆಂಗಳೂರು ಕೇಂದ್ರ) ಎಲ್. ದೀಪಕ್, ಜಯನಗರ ಪ್ರಾದೇಶಿಕ ಸಾರಿಗೆ ಅಧಿಕಾರಿ (ಬೆಂಗಳೂರು ದಕ್ಷಿಣ) ಎಸ್. ಮಲ್ಲೇಶ್, ವಿವಿಧ ಆಟೊ ಚಾಲಕ–ಮಾಲೀಕರ ಸಂಘಟನೆಗಳ ಪದಾಧಿಕಾರಿಗಳು ಸಭೆಯಲ್ಲಿ ಭಾಗ ವಹಿಸಿದ್ದರು.



ಬೆಂಗಳೂರು ನಗರ ವ್ಯಾಪ್ತಿಯ ಆಟೊ ಪ್ರಯಾಣ ದರಕ್ಕೆ ಸಂಬಂಧಿಸಿದಂತೆ ಬುಧವಾರ ಪೂರ್ವ ಡಿಸಿಪಿ ಸಾಹಿಲ್ ಬಾಗ್ಲಾ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು

ಪರಿಷ್ಕರಣೆಗೆ ವಿರೋಧ

ದರ ಏರಿಕೆ ಮಾಡಿದರೆ ಆಟೊಗಿಂತ ಕ್ಯಾಬ್‌ಗಳೇ ಕಡಿಮೆ ಮೊತ್ತಕ್ಕೆ ಸಂಚರಿಸಲಿವೆ. ಈಗಲೇ ಆಟೊದಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿದೆ. ದರ ಏರಿಕೆ ಮಾಡಿದರೆ ಅವರೂ ಬರುವುದಿಲ್ಲ. ಹಾಗಾಗಿ ಈಗಿರುವ ದರವೇ ಸಾಕು. ಆ್ಯಪ್ ಆಧಾರಿತ ಬೈಕ್, ಆಟೊ, ಟ್ಯಾಕ್ಸಿಗಳಿಗೆ ಕಡಿವಾಣ ಹಾಕುವ ಮೂಲಕ ಆಟೊಗಳಿಗೆ ದುಡಿಮೆ ಹೆಚ್ಚು ಸಿಗುವಂತೆ ಮಾಡಬೇಕು ಎಂದು ಕೆಲವು ಸಂಘಟನೆಗಳ ಪದಾಧಿಕಾರಿಗಳು ದರ ಪರಿಷ್ಕರಣೆಯನ್ನು ವಿರೋಧಿಸಿದರು.

ಮಿಟ್ಟಗಾನಹಳ್ಳಿ, ಬೆಳ್ಳಹಳ್ಳಿ ಭೂಭರ್ತಿ ಪ್ರದೇಶದಲ್ಲಿ ಸಾಲುಗಟ್ಟಿ ನಿಂತ ತ್ಯಾಜ್ಯ ತುಂಬಿದ ಕಾಂಪ್ಯಾಕ್ಟರ್‌ಗಳು

ತ್ಯಾಜ್ಯ ವಿಲೇವಾರಿಗೆ ಕಣ್ಣೂರು ತಡೆ

• ಆರ್. ಮಂಜುನಾಥ್

ಬೆಂಗಳೂರು: ನಗರದ ಹಲವು ಭಾಗಗಳಿಂದ ತ್ಯಾಜ್ಯ ಸಂಗ್ರಹಿಸುವ 300ಕ್ಕೂ ಹೆಚ್ಚು ಕಾಂಪ್ಯಾಕ್ಟರ್‌ಗಳು ಖಾಲಿಯಾಗಿಲ್ಲ. ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ಕಾಂಪ್ಯಾಕ್ಟರ್‌ಗಳು ಎರಡು ದಿನಗಳಿಂದ ಸಾಲುಗಟ್ಟಿ ನಿಂತಿರುವುದರಿಂದ, ನಗರದ ರಸ್ತೆಗಳಲ್ಲಿ ತ್ಯಾಜ್ಯ ತುಂಬಿಕೊಳ್ಳುತ್ತಿದೆ.

‘ಅವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದ್ದು, ಸುತ್ತಮುತ್ತಲಿನ ಪರಿಸರ ಹಾಳಾಗುತ್ತಿದೆ. ದ್ರವತ್ಯಾಜ್ಯ (ಲಿಚೆಟ್) ಹೆಚ್ಚಾಗಿ ಹೊರಬರುತ್ತಿದ್ದು, ಸುತ್ತಮುತ್ತಲಿನ ಕೆರೆ, ಕುಂಟೆ, ಬಾವಿಗಳು, ಕೊಳವೆಬಾವಿಗಳೂ ಕಲುಷಿತಗೊಂಡಿವೆ. ದಿನಬಳಕೆಯ ನೀರಿನಲ್ಲಿ ಈ ಕಲ್ಮಶ ಸೇರಿಕೊಂಡು ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಆದ್ದರಿಂದ ಅವೈಜ್ಞಾನಿಕ ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಿ’ ಎಂದು ಆಗ್ರಹಿಸಿ ಕಣ್ಣೂರು ಗ್ರಾಮ ಪಂಚಾಯಿತಿ ಸದಸ್ಯರು ಹೋರಾಟ ನಡೆಸುತ್ತಿದ್ದಾರೆ.

‘ಮಿಟ್ಟಗಾನಹಳ್ಳಿ ಗ್ರಾಮದ ಸರ್ಕಾರಿ ಗೋಮಾಳದ ಜಮೀನಿನಲ್ಲಿ ಬಿಬಿಎಂಪಿ ಒಂಬತ್ತು ವರ್ಷದಿಂದ ಕಸ ವಿಲೇವಾರಿ ಮಾಡುತ್ತಿದೆ. ಆದರೆ, ಇಲ್ಲಿನ ಪರಿಸರದ ಬಗ್ಗೆ ಕಾಳಜಿ ವಹಿಸದೆ, ವಿಲೇವಾರಿ ಆರಂಭಿಸುವ ಮೊದಲು ನೀಡಿದ್ದ ಭರವಸೆಯನ್ನು ಈಡೇರಿಸಿಲ್ಲ. ಹೀಗಾಗಿ, ಕಾಂಪ್ಯಾಕ್ಟರ್‌ಗಳಿಂದ ತ್ಯಾಜ್ಯವನ್ನು ಭೂಭರ್ತಿ ಮಾಡಲು ಬಿಡುವುದಿಲ್ಲ’ ಎಂದು ಕಣ್ಣೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್. ಅಶೋಕ್ ನೇತೃತ್ವದಲ್ಲಿ ಸದಸ್ಯರು ಕಾಂಪ್ಯಾಕ್ಟರ್‌ಗಳು ಸಂಚರಿಸುವ ದಾರಿಗೆ ತಡೆ ಹಾಕಿದ್ದಾರೆ.

‘ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್)ದವರಿಗೆ ಈ ಬಗ್ಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಿಂದ ಹರಿಯುವ ದ್ರವತ್ಯಾಜ್ಯದಿಂದ ಬೆಳ್ಳಹಳ್ಳಿ ಕೆರೆ, ಕಣ್ಣೂರು ಕೆರೆ, ಚಿಕ್ಕಗುಬ್ಬಿ ಕೆರೆ, ದೊಡ್ಡ ಗುಬ್ಬಿ ಕೆರೆ ಹಾಗೂ ರಾಂಪುರ ಕೆರೆಗಳು ಮಲಿನಗೊಂಡಿದ್ದು, ಸಾವಿರಾರು ಮೀನುಗಳು ಸಾಯುತ್ತಿವೆ. ಅಂತರ್ಜಲ ಕೂಡ ಕಲುಷಿತಗೊಂಡಿದೆ’ ಎಂದು ದೂರಿರುವ ಅವರು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೂ ಪತ್ರ ಬರೆದು ಕ್ರಮ ಕೈಗೊಳ್ಳಲು ಮನವಿ ಮಾಡಿದ್ದಾರೆ.

ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದ ಒಳಗೆ ಹಾಗೂ ಮಿಟ್ಟಗಾನಹಳ್ಳಿ, ಬೆಳ್ಳಹಳ್ಳಿ, ಬೆಳ್ಳಹಳ್ಳಿ ಕ್ರಾಸ್‌ವರೆಗೂ ತ್ಯಾಜ್ಯ ತುಂಬಿದ ಕಾಂಪ್ಯಾಕ್ಟರ್‌ಗಳು ಎರಡು ದಿನಗಳಿಂದ ಸಾಲುಗಟ್ಟಿ ನಿಂತಿವೆ. ಸಾಮಾನ್ಯ ದಿನಗಳಲ್ಲೂ ದುರ್ವಾಸನೆಯ ಸಮಸ್ಯೆ ಇದ್ದು, ಈಗ ಕಾಂಪ್ಯಾಕ್ಟರ್‌ಗಳು ನಿಂತಿರುವುದರಿಂದ ದುರ್ವಾಸನೆ ಮತ್ತಷ್ಟು ಹೆಚ್ಚಾಗಿದೆ.



ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ಸಾಲುಗಟ್ಟಿ ನಿಂತಿರುವ ತ್ಯಾಜ್ಯ ತುಂಬಿದ ಕಾಂಪ್ಯಾಕ್ಟರ್‌ಗಳು
ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ನೀರಿಲ್ಲ, ಊಟವಿಲ್ಲ: ಚಾಲಕರು

‘ಮಂಗಳವಾರ ಬೆಳಿಗ್ಗೆಯಿಂದ ತ್ಯಾಜ್ಯ ವಿಲೇವಾರಿ ಮಾಡಲು ಬಿಡುತ್ತಿಲ್ಲ. ಕಾಂಪ್ಯಾಕ್ಟರ್‌ಗಳನ್ನು ರಸ್ತೆಯಲ್ಲೇ ನಿಲ್ಲಿಸಿದ್ದೇವೆ. ಬಿಟ್ಟು ಹೋಗುವಂತೆಯೂ ಇಲ್ಲ, ಉಳಿಯುವುದಕ್ಕೂ ಆಗುತ್ತಿಲ್ಲ. ನಿನ್ನೆಯಿಂದ ಊಟ ಮಾಡಲು ಸಾಧ್ಯವಾಗಿಲ್ಲ. ಇದು ನಿರ್ಜನ ಪ್ರದೇಶ. ಊಟ, ನೀರು ಸಿಗುವುದಿಲ್ಲ. ಏನಾದರೂ ಬೇಕಾದರೆ ಎರಡು ಕಿ.ಮೀ. ದೂರ ನಡೆದುಕೊಂಡು ಹೋಗಬೇಕು. ಸೋಮವಾರ ರಾತ್ರಿ ಇಲ್ಲಿ ಕಳೆದದ್ದು ಭಯಾನಕವಾಗಿತ್ತು’ ಎಂದು ಕಾಂಪ್ಯಾಕ್ಟರ್‌ಗಳ ಚಾಲಕರು ಅಳಲು ತೋಡಿಕೊಂಡರು.

‘ಮಂಗಳವಾರ ಬೆಳಿಗ್ಗೆ ಒಂದಷ್ಟು ಕಾಂಪ್ಯಾಕ್ಟರ್‌ಗಳು ಒಳಕ್ಕೆ ಹೋದವು. ಆದರೆ, ವೇಯಿಂಗ್ ಗೇಟ್‌ನಿಂದ ಮುಂದಕ್ಕೆ ಯಾವುದೇ ಕಾಂಪ್ಯಾಕ್ಟರ್ ಬಿಡುತ್ತಿಲ್ಲ’ ಎಂದು ಹೇಳಿದರು.

‘ಮಂಗಳವಾರ ಮುಂಜಾನೆ ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ತ್ಯಾಜ್ಯ ವಿಲೇವಾರಿ ಮಾಡಿದ ಸುಮಾರು 25 ಕಾಂಪ್ಯಾಕ್ಟರ್‌ಗಳು ಅಲ್ಲಿಂದ ಹೊರಹೋಗದಂತೆಯೂ ತಡೆಹಾಕಲಾಗಿದೆ. ಕಾಂಪ್ಯಾಕ್ಟರ್ ಹೋಗುವ ಹಾಗೂ ಬರುವ ದಾರಿಯನ್ನು ಮುಚ್ಚಲಾಗಿದೆ’ ಎಂದು ಚಾಲಕರು ಹೇಳಿದರು.


ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ಕಣ್ಣೂರು ಗ್ರಾಮ ಪಂಚಾಯಿತಿ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸಿದರು

‘ವೈಜ್ಞಾನಿಕ ವಿಲೇವಾರಿಯಾಗದಿದ್ದರೆ ಉಗ್ರ ಹೋರಾಟ’


ಎಸ್. ಅಶೋಕ್

‘ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ಅವೈಜ್ಞಾನಿಕವಾಗಿ ತ್ಯಾಜ್ಯವನ್ನು ಸುರಿಯಲಾಗುತ್ತಿದೆ. ಪ್ರಾಣಿತ್ಯಾಜ್ಯ, ವೈದ್ಯಕೀಯ ತ್ಯಾಜ್ಯ, ಕಾರ್ಖಾನೆಗಳ ವಿಷಪೂರಿತ ತ್ಯಾಜ್ಯವನ್ನೂ ಇಲ್ಲಿ ತಂದು ಸುರಿಯುತ್ತಿದ್ದಾರೆ. ತ್ಯಾಜ್ಯದೊಂದಿಗೆ ಶವವೂ ಪತ್ತೆಯಾಗಿತ್ತು. ಈ ಬಗ್ಗೆ ಬಿಎಸ್‌ಡಬ್ಲ್ಯುಎಂಎಲ್ ಮುಖ್ಯ ಪ್ರಧಾನ ವ್ಯವಸ್ಥಾಪಕ ಲೋಕೇಶ್ ಅವರಿಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ. ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡದಿದ್ದರಿಂದ ತ್ಯಾಜ್ಯ ವಿಲೇವಾರಿಯನ್ನು ತಡೆಯಲಾಗಿದೆ. ನಮ್ಮೊಂದಿಗೆ ಯಾರೂ ಮಾತುಕತೆಗೆ ಬಂದಿಲ್ಲ. ನಮ್ಮ ಮನವಿಗೆ ಸ್ಪಂದಿಸದಿದ್ದರೆ, ಗ್ರಾಮಸ್ಥರು, ವಿದ್ಯಾಸಂಸ್ಥೆಗಳ ವತಿಯಿಂದ ಹೋರಾಟ ನಡೆಸಲಾಗುತ್ತದೆ’ ಎಂದು ಕಣ್ಣೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್. ಅಶೋಕ್ ತಿಳಿಸಿದರು.

ಅನವಶ್ಯಕವಾಗಿ ತೊಂದರೆ: ಲೋಕೇಶ್

‘ಮಿಟ್ಟಗಾನಹಳ್ಳಿಯಲ್ಲಿ ಕಳೆದ ವರ್ಷಗಳಲ್ಲಿ ಹೇಗೆ ಭೂಭರ್ತಿ ಮಾಡಲಾಗುತ್ತಿತ್ತೋ ಅದೇ ರೀತಿ ತ್ಯಾಜ್ಯವನ್ನು ವಿಲೇವಾರಿ ಮಾಡಲಾಗುತ್ತಿದೆ. ಯಾವುದೇ ರೀತಿಯ ವ್ಯತ್ಯಾಸವಾಗಿಲ್ಲ. ಆದರೂ ಕೆಲವರು ಅನವಶ್ಯಕವಾಗಿ ತೊಂದರೆ ನೀಡಿ, ಕಾಂಪ್ಯಾಕ್ಟರ್‌ಗಳನ್ನು ತಡೆದಿದ್ದಾರೆ. ಅವರೊಂದಿಗೆ ಮಾತುಕತೆ ನಡೆಸಲಾಗುತ್ತಿದೆ’ ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಲೋಕೇಶ್ ತಿಳಿಸಿದರು.

‘ಭೂಭರ್ತಿ ಪ್ರದೇಶದಲ್ಲಿನ ದ್ರವತ್ಯಾಜ್ಯ (ಲಿಚೆಟ್) ಉತ್ಪಾದನೆ ಹೆಚ್ಚಾಗಿ, ಕೆರೆಗಳು ಕಲುಷಿತವಾಗಿ ಎಂದು ಹೇಳುತ್ತಿದ್ದಾರೆ. ಆದರೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೀಡಿರುವ ವರದಿಯಂತೆ ಯಾವುದೇ ರೀತಿಯ ದ್ರವತ್ಯಾಜ್ಯ ಕೆರೆಗಳಿಗೆ ಸೇರುತ್ತಿಲ್ಲ. ನಾವು ವೈಜ್ಞಾನಿಕವಾಗಿಯೇ ತ್ಯಾಜ್ಯ ವಿಲೇವಾರಿ ಮಾಡುತ್ತಿದ್ದೇವೆ. ಶವ ಸಿಕ್ಕಿರುವುದು ನಮ್ಮ ಭೂಭರ್ತಿ ಪ್ರದೇಶದಲ್ಲಿ ಅಲ್ಲ. ಕಟ್ಟಡ ತ್ಯಾಜ್ಯ ಸುರಿಯುವ ಕಡೆ. ಅದಕ್ಕೂ ತ್ಯಾಜ್ಯಕ್ಕೂ ಸಂಬಂಧವಿಲ್ಲ’ ಎಂದರು.

ಆಟೊಗಳಲ್ಲೇ ಉಳಿದ ತ್ಯಾಜ್ಯ

ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶಗಳಲ್ಲಿ ತ್ಯಾಜ್ಯ ತುಂಬಿದ ಕಾಂಪ್ಯಾಕ್ಟರ್‌ಗಳನ್ನು ತಡೆಹಿಡಿದಿರುವುದರಿಂದ ನಗರ ಹಲವು ಪ್ರದೇಶಗಳಲ್ಲಿ ಮನೆಗಳಿಂದ ಸಂಗ್ರಹಿಸಿದ ತ್ಯಾಜ್ಯ ಆಟೊಗಳಲ್ಲೇ ಉಳಿದಿದೆ.

ಪ್ರತಿದಿನ ಸುಮಾರು 400 ಕಾಂಪ್ಯಾಕ್ಟರ್ ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ತ್ಯಾಜ್ಯವನ್ನು ಮಿಟ್ಟಗಾನಹಳ್ಳಿ ಭೂಭರ್ತಿಯಲ್ಲಿ ವಿಲೇವಾರಿ ಮಾಡುತ್ತಿದ್ದವು. ಮಂಗಳವಾರ, ಬುಧವಾರ ಈ ವಿಲೇವಾರಿ ನಡೆದಿಲ್ಲ. ಕಾಂಪ್ಯಾಕ್ಟರ್‌ಗಳು ಹೊರಬಂದಿಲ್ಲ. ಹೀಗಾಗಿ, ನಗರದಾದ್ಯಂತ ಆಟೊಗಳಲ್ಲೇ ತ್ಯಾಜ್ಯ ಉಳಿದಿದ್ದು, ರಸ್ತೆಗಳಲ್ಲಿ ದುರ್ವಾಸನೆ ಬೀರುತ್ತಿದೆ.

‘ಮಿಟ್ಟಗಾನಹಳ್ಳಿಯಲ್ಲಿ ತ್ಯಾಜ್ಯ ಭೂಭರ್ತಿಯಾಗದ್ದರಿಂದ ನಗರದ ಕೆಲವು ಪ್ರದೇಶಗಳಲ್ಲಿ ಸಮಸ್ಯೆ ಆಗಿದೆ. ಇನ್ನೆರಡು ದಿನ ನಾವು ನಿರ್ವಹಣೆ ಮಾಡಬಹುದು. ಅದರ ನಂತರ ಸಂಕಷ್ಟವಾಗುತ್ತದೆ’ ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಲೋಕೇಶ್ ತಿಳಿಸಿದರು.

15ಕ್ಕೆ ‘ಭೂಮಿಕಾ ಕ್ಲಬ್’ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಮಹಿಳೆಯರಿಗಾಗಿ ಸ್ಥಾಪಿಸಿರುವ ‘ಭೂಮಿಕಾ ಕ್ಲಬ್’ ವೇದಿಕೆಯು ಮಾರ್ಚ್ 15ರಂದು ಮಧ್ಯಾಹ್ನ 2.30ಕ್ಕೆ ಇಂದಿರಾನಗರ ಕ್ಲಬ್‌ನಲ್ಲಿ 25ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

‘ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್’, ‘ಮಣಿಪಾಲ್ ಆಸ್ಪತ್ರೆಗಳ ಸಮೂಹ’ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಚಲನಚಿತ್ರ ನಟಿ, ಬಿಗ್‌ಬಾಸ್ ಸ್ಪರ್ಧಿ ಅನುಷಾ ರೈ ಉದ್ಘಾಟಿಸಲಿದ್ದಾರೆ. ವಿಚಾರಸಂಕಿರಣ ಹಾಗೂ ಸಂಗೀತ ಕಾರ್ಯಕ್ರಮ ಸೇರಿ ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿರಲಿದೆ.

ಪವಾನಿ ಡಿ. ಮತ್ತು ಭವಾನಿ ನೃತ್ಯ ಪ್ರದರ್ಶನ ನೀಡಲಿದ್ದಾರೆ. ಪಶ್ಚಿಮ ವಿಭಾಗದ ‘ಸೆನ್’ ಎಸಿಪಿ ಉಮಾರಾಣಿ ಎಸ್. ಅವರು ಸೈಬರ್ ಅಪರಾಧದ ಕುರಿತು ಮಾಹಿತಿ ನೀಡಲಿದ್ದಾರೆ. ಮಹಿಳೆಯರ ಆರೋಗ್ಯದ ಬಗ್ಗೆ ಮಣಿಪಾಲ್ ಆಸ್ಪತ್ರೆಯ ತಜ್ಞ ವೈದ್ಯರು ತಿಳಿಸಿಕೊಡಲಿದ್ದಾರೆ.

‘ಉತ್ತರ ಕರ್ನಾಟಕ ಅಡುಗೆಮನೆ’ ಯುಟ್ಯೂಬ್ ಚಾನೆಲ್‌ನ ತ್ರಿವೇಣಿ ಅವರು ಅಡುಗೆ ಪ್ರಾತ್ಯಕ್ಷಿಕೆ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಪ್ರವೇಶ ಉಚಿತವಾಗಿದ್ದು, ಹೆಸರು ನೋಂದಾಯಿಸಿದವರಿಗೆ ಮಾತ್ರ ಅವಕಾಶ ನೀಡಲಾಗಿದೆ.

ವಿವರಗಳಿಗಾಗಿ 7338018541 ಸಂಪರ್ಕಿಸಬಹುದು. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

Freedom Healthy Cooking Oils Presents ಭೂಮಿಕಾ ಕ್ಲಬ್ Powered by manipalhospitals LIFE'S ON

ಭೂಮಿಕಾ ಕ್ಲಬ್ ಕ್ಯೂಆರ್ ಕೋಡ್

ಉದ್ಯಾನದಲ್ಲಿ ಒಣಗಿದ ಎಲೆಗಳಿಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಂಗ ಬಡಾವಣೆಯಲ್ಲಿರುವ ಉದ್ಯಾನದಲ್ಲಿ ಒಣಗಿದ ಎಲೆಗಳಿಗೆ ಬೆಂಕಿ ಹಚ್ಚಿದ್ದರಿಂದ, ಬೆಂಚು ಸೇರಿದಂತೆ ಉದ್ಯಾನದ ಪರಿಸರ ಹಾಳಾಗಿದೆ.

ಉದ್ಯಾನದಲ್ಲಿ ಒಣಗಿದ್ದ ಎಲೆಗಳಿಗೆ ಬೆಂಕಿ ಹಚ್ಚಿದ್ದರೆ ಅದರ ಪ್ರಮಾಣ ಹೆಚ್ಚಾಗಿದ್ದು, ಪೂರ್ಣ ಭಾಗಕ್ಕೆ ಹರಡುತ್ತಾ ಸಾಗಿತ್ತು. ಈ ಸಂದರ್ಭದಲ್ಲಿ ಟ್ಯಾಂಕರ್ ನೀರಿನಿಂದ, ಸ್ಥಳೀಯರು ಬೆಂಕಿ ನಂದಿಸಿದ್ದಾರೆ.

ನ್ಯಾಯಾಂಗ ಬಡಾವಣೆ ನಿವಾಸಿ ಲಲಿತಾ ಮೋಹನ್ ಅವರು, ‘ಉದ್ಯಾನದ ಒಂದು ಭಾಗದಲ್ಲಿ ಒಣಗಿದ್ದ ಎಲೆಗಳ ಶೇಖರಣೆಯಾಗಿತ್ತು. ಯಾರು ಬೆಂಕಿ ಹಚ್ಚಿದರು ಎಂಬ ಮಾಹಿತಿ ಇಲ್ಲ. ಮಕ್ಕಳು ಈ ಉದ್ಯಾನದಲ್ಲಿ ಆಟವಾಡುತ್ತಿದ್ದರು. ಕಳೆದ ವರ್ಷವೂ ಇದೇ ರೀತಿ ಆಗಿತ್ತು. ಆಗ ನಾವು ಅಗ್ನಿಶಾಮಕ ದಳವನ್ನು ಕರೆಸಿ, ಬೆಂಕಿ ನಂದಿಸಿದ್ದೆವು’ ಎಂದರು.

ಒಣಗಿದ ಎಲೆಗಳಿಗೆ ಬೆಂಕಿ ಹಚ್ಚುವ ಕಾರ್ಯ ನಗರದ ಹಲವು ಪ್ರದೇಶಗಳಲ್ಲಿ ನಡೆಯುತ್ತಿದೆ. ಕೆಲವು ಭಾಗಗಳಲ್ಲಿ ಪೌರಕಾರ್ಮಿಕರೇ ಬೆಂಕಿ ಹಚ್ಚುತ್ತಿದ್ದರೆ, ಕೆಲವು ಪ್ರದೇಶಗಳಲ್ಲಿ ನಿವಾಸಿಗಳು ಬೆಂಕಿ ಹಚ್ಚುತ್ತಿದ್ದಾರೆ. ಪರಿಸರಕ್ಕೆ ಧಕ್ಕೆಯಾಗುವ ಜೊತೆಗೆ ಆರೋಗ್ಯದ ಸಮಸ್ಯೆಗಳೂ ಉಂಟಾಗುತ್ತವೆ ಎಂದು ಪರಿಸರ ಕಾರ್ಯಕರ್ತರು ಆತಂಕ ವ್ಯಕ್ತಪಡಿಸಿದ್ದಾರೆ.


ನ್ಯಾಯಾಂಗ ಬಡಾವಣೆಯ ಎರಡನೇ ಅಡ್ಡರಸ್ತೆಯಲ್ಲಿರುವ ಉದ್ಯಾನದಲ್ಲಿ ಒಣಗಿದ್ದ ಎಲೆಗಳಿಗೆ ಹಚ್ಚಿದ್ದ ಬೆಂಕಿ ವಿವಿಧೆಡೆಗೆ ವ್ಯಾಪಿಸಿತ್ತು

‘ವ್ಯಾಯಾಮದಲ್ಲಿ ಆಸಕ್ತಿ ಇರಲಿ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ಡಯಾಲಿಸಿಸ್ ಹಾಗೂ ಮೂತ್ರಪಿಂಡ ಮರುಜೋಡಣೆ ಶಸ್ತ್ರಚಿಕಿತ್ಸೆಗೆ ಒಳಗಾದವರು ಕೂಡ ಜನಸಾಮಾನ್ಯರಂತೆ ಬದುಕು ನಡೆಸಬಹುದು ಎಂದು ಗ್ಲೆನಿಗಲ್ಸ್ ಬಿಜಿಎಸ್ ಆಸ್ಪತ್ರೆ ನೆಫ್ರಾಲಜಿ ವಿಭಾಗದ ಮುಖ್ಯಸ್ಥ ಹಾಗೂ ಮೂತ್ರಪಿಂಡ ಮರುಜೋಡಣಾ ತಜ್ಞ ಡಾ.ಅನಿಲ್ ಕುಮಾರ್ ಹೇಳಿದರು.

ವಿಶ್ವ ಮೂತ್ರಪಿಂಡ ದಿನಾಚರಣೆ ಅಂಗವಾಗಿ ಗ್ಲೆನಿಗಲ್ಸ್ ಬಿಜಿಎಸ್ ಆಸ್ಪತ್ರೆ ವತಿಯಿಂದ ಹಮ್ಮಿಕೊಂಡಿದ್ದ ಜಾಗೃತಿ ಅಭಿಯಾನ ಹಾಗೂ ಕ್ರೀಡಾಕೂಟದಲ್ಲಿ ಅವರು ಮಾತನಾಡಿದರು. ಜೀವನ ಶೈಲಿಯು ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ನಿಯಮಿತ ದೈಹಿಕ ಚಟುವಟಿಕೆಗಳು, ಆಹಾರ ಕ್ರಮಗಳು ನಮ್ಮನ್ನು ರೋಗದಿಂದ ಮುಕ್ತಗೊಳಿಸುತ್ತವೆ. ಈ ನಿಟ್ಟಿನಲ್ಲಿ ಎಲ್ಲ ವಯೋಮಾನದವರು ಆಹಾರ ಹಾಗೂ ವ್ಯಾಯಾಮದ ಬಗ್ಗೆ ಆಸಕ್ತಿ ವಹಿಸುವುದು ಅವಶ್ಯಕವಾಗಿದೆ ಎಂದು ಅಭಿಪ್ರಾಯಪಟ್ಟರು.

‘ಶಸ್ತ್ರಚಿಕಿತ್ಸೆಗಳು ರೋಗಗಳ ತೀವ್ರತೆಯನ್ನು ಶಮನಗೊಳಿಸುತ್ತವೆ. ಇದೇ ವೇಳೆ ರೋಗಿಯ ಅಚಲ ಆತ್ಮವಿಶ್ವಾಸವು ಶಸ್ತ್ರಚಿಕಿತ್ಸೆಯ ಯಶಸ್ಸು ದೀರ್ಘ ಕಾಲ ಉಳಿಯುವಂತೆ ಮಾಡುತ್ತದೆ’ ಎಂದು ಗ್ಲೆನಿಗಲ್ಸ್ ಹಾಸ್ಪಿಟಲ್ಸ್ ಕ್ಲಸ್ಟರ್ ಸಿಒಒ ಡಾ. ಜತಿಂದರ್ ಅರೋರ ಹೇಳಿದರು.

ಯುರಾಲಜಿ ಮತ್ತು ರೀನಲ್ ಟ್ರಾನ್ಸ್‌ಪ್ಲಾಂಟ್ ಸರ್ಜರಿ ವಿಭಾಗದ ಮುಖ್ಯಸ್ಥ ಹಾಗೂ ಹಿರಿಯ ಸಮಾಲೋಚಕ ಡಾ.ನರೇಂದ್ರ ಎಸ್ ಮಾತನಾಡಿದರು.

ಸಾಧನೆಯೊಂದಿಗೆ ಆರೋಗ್ಯದ ಕಡೆ ಗಮನಕೊಡಿ: ನಾ.ಸೋಮೇಶ್ವರ

ಪ್ರಜಾವಾಣಿ ವಾರ್ತೆ

ಯಲಹಂಕ: ಪುರಾತನ ಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ತಾಯಿಗೆ ಮೊದಲ ಆದ್ಯತೆ ನೀಡಲಾಗಿದೆ. ಒಂದು ಕುಟುಂಬ ಭದ್ರವಾಗಿ ನೆಲೆಯೂರಿ ನಿಲ್ಲಬೇಕಾದರೆ ತಾಯಿಯ ಪಾತ್ರ ಬಹಳ ಮುಖ್ಯ ಎಂದು ಸಾಹಿತಿ ನಾ.ಸೋಮೇಶ್ವರ ಅಭಿಪ್ರಾಯಪಟ್ಟರು.

ಉಪನಗರದಲ್ಲಿ ಆಯೋಜಿಸಿದ್ದ ವೇಣು ಸಿ.ವಿ. ಲೀಡರ್‌ಶಿಪ್ ನೆಕ್ಸಸ್ ಸಂಸ್ಥೆಯ ಉದ್ಘಾಟನೆ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಹಿಳೆಯರು ಯಾವುದೇ ಸಾಧನೆ ಮಾಡಬೇಕಾದರೆ ತಮ್ಮ ಆರೋಗ್ಯದ ಕಡೆಗೆ ಗಮನಹರಿಸಬೇಕಾದುದು ಬಹಳ ಮುಖ್ಯ. ಈ ನಿಟ್ಟಿನಲ್ಲಿ ಕುಟುಂಬ ನಿರ್ವಹಣೆಯ ಜೊತೆಗೆ ಆರೋಗ್ಯವನ್ನು ಉತ್ತಮ ರೀತಿಯಲ್ಲಿ ಕಾಪಾಡಿಕೊಳ್ಳಬೇಕು ಎಂದರು.

ಲೇಖಕ ವೇಣು ಸಿ.ವಿ ಮಾತನಾಡಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ 12 ಮಹಿಳೆಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ಯಲಹಂಕ ಉಪನಗರ ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷ ಆರ್. ಬಚ್ಚೇಗೌಡ, ಉಪಾಧ್ಯಕ್ಷ ಪಿ.ನಾಗಪ್ಪ, ಪ್ರಧಾನ ಕಾರ್ಯದರ್ಶಿ ಜಿ.ಗುರುಸ್ವಾಮಿ, ಪಾಲಿಕೆ ಮಾಜಿ ಸದಸ್ಯ ಮುನಿರಾಜು, ಸ್ಥಳೀಯ ಮುಖಂಡ ವಸಂತ್, ಮೆಮೊರಿ ಕ್ರೀಡಾ ತರಬೇತುದಾರರಾದ ಮಾಧವಿ ಚೌಧರಿ, ಉದ್ಯಮಿ ಶರ್ಮಿಳ ಆರ್. ಮತ್ತಿತರರು ಉಪಸ್ಥಿತರಿದ್ದರು.

ಅಂಗನವಾಡಿ ಕಾರ್ಯಕರ್ತೆಯರ ಕಡೆಗಣನೆ: 19ಕ್ಕೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಕೇವಲ ₹1 ಸಾವಿರ ಹಾಗೂ ಸಹಾಯಕಿಯರಿಗೆ ₹750 ಗೌರವಧನ ಹೆಚ್ಚಳ ಮಾಡಿರುವ ಸರ್ಕಾರದ ನಡೆ ಖಂಡಿಸಿ ಮಾರ್ಚ್ 19ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘಟನೆಗಳ ಸಂಯುಕ್ತ ಸಂಘರ್ಷ ಸಮಿತಿ ತಿಳಿಸಿದೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಪದಾಧಿಕಾರಿಗಳು ‘ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ತಿಂಗಳಿಗೆ ₹ 15 ಸಾವಿರ, ಸಹಾಯಕಿಯರಿಗೆ ₹ 10 ಸಾವಿರ ಗೌರವಧನ ನೀಡುವ ಭರವಸೆ ನೀಡಲಾಗಿತ್ತು. ಆದರೆ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಾದರೂ ಈಡೇರಿಸಿಲ್ಲ’ ಎಂದು ಆರೋಪಿಸಿದರು.

‘ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ಆದರೆ, ಸರ್ಕಾರ ನಮಗೆ ಕನಿಷ್ಠ ವೇತನದ ವ್ಯಾಪ್ತಿಗೆ ಒಳಪಡಿಸಿ ಸಂಭಾವನೆ ನೀಡದೆ ಅನ್ಯಾಯ ಮಾಡುತ್ತಿದೆ. ನಿವೃತ್ತರಾದ ಎಲ್ಲ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಗ್ರಾಚ್ಯುಟಿ ಸೌಲಭ್ಯ ನೀಡಬೇಕು’ ಎಂದು ಆಗ್ರಹಿಸಿದರು.

‘ಎಲ್ಲ ಅಂಗನವಾಡಿ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಸಮಸ್ಯೆಗಳಿಗೆ ಪರಿಹಾರ ನೀಡಬೇಕು. ಇತ್ತೀಚೆಗೆ ಇಲಾಖೆಯ ಸಚಿವರು ಹಾಗೂ ಅಧಿಕಾರಿಗಳು ತಮಗೆ ಬೇಕಾದ ಸಂಘಟನೆಗಳೊಂದಿಗೆ ಚರ್ಚಿಸುತ್ತಿರುವುದು ಖಂಡನೀಯ’ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಜಿ.ಆರ್. ಶಿವಶಂಕರ್, ಬಿ. ನಾಗರತ್ನಮ್ಮ, ಬಿ. ಅಮ್ಜದ್, ಎಂ. ಜಯಮ್ಮ, ಕೆ. ಸೋಮಶೇಖರ್ ಯಾದಗಿರಿ, ಎಂ. ಉಮಾದೇವಿ ಹಾಜರಿದ್ದರು.

ಸುಧಾ, ಅಂಜನಪ್ಪಗೆ ‘ಪಿಆರ್‌ಟಿ ಕಲಾಪ್ರಶಸ್ತಿ’

ಮೈಸೂರು: ಇಲ್ಲಿನ ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನವು ನೀಡುವ 2025ನೇ ಸಾಲಿನ ‘ಪಿಆರ್‌ಟಿ ಕಲಾಪ್ರಶಸ್ತಿ’ಗೆ ಧಾರವಾಡದ ಸುಧಾ ಮನೋಹರ್ ಹಾಗೂ ಚಿಕ್ಕಬಳ್ಳಾಪುರ ಮುಖವೀಣೆ ಅಂಜನಪ್ಪ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

‘ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಶಿಕ್ಷಣ ಪಡೆದು, ಅಲ್ಲಿಯೇ ಪ್ರಾಚಾರ್ಯ ಹಾಗೂ ಆಡಳಿತ ಮಂಡಳಿ ಸದಸ್ಯರಾಗಿ ಸುಧಾ ಕಾರ್ಯ ನಿರ್ವಹಿಸಿದ್ದಾರೆ. ಚಿಕ್ಕಬಳ್ಳಾಪುರದ ದಪ್ಪರ್ತಿ ಗ್ರಾಮದ ಅಂಜನಪ್ಪ ಮುಖವೀಣೆಯನ್ನು ಶಾಸ್ತ್ರೀಯವಾಗಿ ನುಡಿಸುವ ಮೂಲಕ ಈ ವಾದ್ಯಕ್ಕೆ ವಿಶಿಷ್ಟ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. ಏಕಕಾಲದಲ್ಲಿ ಐದು ವಾದ್ಯಗಳನ್ನು ನುಡಿಸಬಲ್ಲವರು. ಇಬ್ಬರಿಗೂ ಏಪ್ರಿಲ್‌ನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದು ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ ಕದಂಬ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಕಲಾವಿದ ಪಿ.ಆರ್. ತಿಪ್ಪೇಸ್ವಾಮಿ ನೆನಪಿನಲ್ಲಿ ಪ್ರತಿ ವರ್ಷ ಕಲಾವಿದರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ’ ಎಂದರು.

‘ನಾನೇ ಅವಧಿ ಪೂರ್ಣಗೊಳಿಸುವೆ’

ಒಂದನೇ ಪುಟದಿಂದ...

‘ನೀವೇ ಮುಖ್ಯಮಂತ್ರಿ ಆಗಿರುತ್ತೀರಾ’ ಎಂದು ಬಿಜೆಪಿಯ ವಿ.ಸುನಿಲ್ ಕುಮಾರ್ ಪ್ರಶ್ನಿಸಿದಾಗ, ‘ಹೌದು, ನಾನೇ ಮುಖ್ಯಮಂತ್ರಿ ಆಗಿರುತ್ತೇನೆ’ ಎಂದು ಸಿದ್ದರಾಮಯ್ಯ ಹೇಳಿದರು.

ಅದಕ್ಕೆ ಪ್ರತಿಕ್ರಿಯಿಸಿದ ಅಶೋಕ, ‘ನೀವು ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗ, ಏ... ಅಶೋಕ ಬರೆದುಕೊಳ್ಳಪ್ಪ, ನಾನೇ ಪರ್ಮನೆಂಟ್ ಅಂತ ಹೇಳಿದ್ದೀರಿ. ಚುನಾವಣೆ ಆದ ಬಳಿಕ ಕಾಣದಂತೆ ಮಾಯವಾದನೋ ನಮ್ಮ ಶಿವ... ಅಂತ ಕಾಣೆ ಆದಿರಿ. ಈಗ ಮತ್ತೆ ನಾನೇ ಬರ್ತೀನಿ ಅಂತಿದ್ದೀರಿ. ಹಾಗೆ ಹೇಳಿದ ಯಾರೂ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯಲಿಲ್ಲ’ ಎಂದು ಕುಟುಕಿದರು.

ಶೇ 40 ಕಮಿಷನ್ ಆರೋಪ: ವರದಿ ಸಲ್ಲಿಕೆ

ಬೆಂಗಳೂರು: ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಮಾಡಿದ್ದ ಶೇ 40ರಷ್ಟು ಕಮಿಷನ್ ಆರೋಪಗಳ ಕುರಿತು ತನಿಖೆ ನಡೆಸಲು ನೇಮಿಸಿದ್ದ ನ್ಯಾ.ಎಚ್.ಎನ್. ನಾಗಮೋಹನ್‌ದಾಸ್ ವಿಚಾರಣಾ ಆಯೋಗ ತನ್ನ ತನಿಖಾ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬುಧವಾರ ಸಲ್ಲಿಸಿತು.

ಟೆಂಡರ್ ಕಾಮಗಾರಿಗಳಲ್ಲಿ ಶೇ 40ರಷ್ಟು ಕಮಿಷನ್ ಚಾಲ್ತಿಯಲ್ಲಿದೆ, ಎಸ್‌ಆರ್ ದರಪಟ್ಟಿ ನಿಗದಿ, ಸ್ಟಾರ್‌ರೇಟ್ ಪದ್ಧತಿ ಜಾರಿ, ಪಾರದರ್ಶಕತೆ, ಕಾರ್ಯಾದೇಶದ ಜ್ಯೇಷ್ಠತೆಯ ಮೇಲೆ ಬಿಲ್ ಪಾವತಿ, ಕೆಆರ್‌ಐಡಿಎಲ್‌ನಿಂದ ಗುತ್ತಿಗೆದಾರರಿಗೆ ನೇರ ಕಾಮಗಾರಿ ನೀಡಿಕೆ ಸೇರಿದಂತೆ ಜುಲೈ 2019ರಿಂದ ಮಾರ್ಚ್ 2023ರವರೆಗೆ ನಡೆದಿದ್ದ ವಿವಿಧ ಕಾಮಗಾರಿಗಳ ತನಿಖೆ ನಡೆಸಲು ಕಾಂಗ್ರೆಸ್ ನೇತೃತ್ವದ ಸರ್ಕಾರ ಆಯೋಗ ರಚಿಸಿತ್ತು.

ಸಮಿತಿಯು 20 ಸಾವಿರ ಪುಟಗಳ ವರದಿ ಸಿದ್ಧಪಡಿಸಿದೆ. ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಗೆ ಅಡ್ಡಲಾಗಿ ನಿರ್ಮಿಸಲಾದ ಉಪ ಕಾಲುವೆಗಳ ಆಧುನೀಕರಣ ಕಾಮಗಾರಿ ಕುರಿತು 1,800 ಪುಟಗಳ ವರದಿ ಸಲ್ಲಿಸಿದೆ.

ಪ್ರಾದೇಶಿಕ ಪಕ್ಷ ಕಟ್ಟಲು ಯತ್ನಾಳ ಚಿಂತನೆ?

ಬೆಂಗಳೂರು: ಪಕ್ಷ ಶಿಸ್ತುಕ್ರಮ ಕೈಗೊಂಡರೆ ಪ್ರಾದೇಶಿಕ ಪಕ್ಷ ರಚಿಸುವ ಎಚ್ಚರಿಕೆ ನೀಡಿದ್ದರಿಂದಲೇ, ಶಾಸಕ ಬಸನಗೌಡ ಪಾಟೀಲ ಯತ್ನಾಳರ ವಿರುದ್ಧ ಬಿಜೆಪಿ ವರಿಷ್ಠರು ಕ್ರಮ ಜರುಗಿಸಿಲ್ಲ ಎಂಬ ಚರ್ಚೆ ಪಕ್ಷದಲ್ಲಿ ನಡೆದಿದೆ.

ಆರ್‌ಎಸ್‌ಎಸ್ ಮುಖಂಡ ಸಿ.ಆರ್. ಮುಕುಂದ ಮತ್ತು ತಟಸ್ಥ ಬಣದ ನಾಯಕರು ಯತ್ನಾಳ ಜತೆ ಚರ್ಚಿಸಿದರು. ಈ ವೇಳೆ, ಯತ್ನಾಳ ಅವರು ಕೆಲವು ಅಂಶಗಳನ್ನು ಕಡ್ಡಿ ಮುರಿದಂತೆ ಹೇಳಿದ್ದಾರೆ ಎಂದು ಮೂಲಗಳು ಹೇಳಿವೆ.

‘ಯಾವುದೇ ಕಾರಣಕ್ಕೂ ಬಿ.ವೈ. ವಿಜಯೇಂದ್ರ ಜತೆ ಹೊಂದಾಣಿಕೆಗೆ ಸಿದ್ಧವಿಲ್ಲ. ಒಂದು ವೇಳೆ ಪಕ್ಷ ಉಚ್ಚಾಟಿಸಿದರೆ ಹಲವು ಆಯ್ಕೆಗಳು ನನ್ನ ಮುಂದಿದೆ. ಉತ್ತರಕರ್ನಾಟಕ ಮತ್ತು ಕರಾವಳಿ ಕೇಂದ್ರಿತವಾಗಿ ಹಿಂದುತ್ವವನ್ನು ಸಿದ್ಧಾಂತ ವಾಗಿಸಿಕೊಂಡು ಪ್ರಾದೇಶಿಕ ಪಕ್ಷ ಕಟ್ಟುವ ಆಯ್ಕೆಯೂ ಇದೆ. ಮುಂದಿನ ಚುನಾವಣೆಯಲ್ಲಿ ಸುಮಾರು 60 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತೇನೆ ಎಂದು ತಿಳಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಈ ಮಧ್ಯೆ ಬುಧವಾರ ರಾತ್ರಿ ಯತ್ನಾಳ ಬಣ ಖಾಸಗಿ ಹೋಟೆಲ್‌ನಲ್ಲಿ ಸಭೆ ನಡೆಸಿತು. ಸಭೆಯಲ್ಲಿ ಮುಂದಿನ ಕಾರ್ಯತಂತ್ರದ ಬಗ್ಗೆ ಚರ್ಚಿಸಲಾಯಿತು. ಯತ್ನಾಳ, ಜಿ.ಎಂ.ಸಿದ್ದೇಶ್ವರ, ಬಿ.ಪಿ. ಹರೀಶ್ ಭಾಗವಹಿಸಿದ್ದರು.

ಶಾಸಕರ ಹಕ್ಕು ಮೊಟಕು ಮಾಡುವುದಿಲ್ಲ, ಕಾರ್ಯಕರ್ತರನ್ನೂ ಕೈಬಿಡಲ್ಲ: ಸಿ.ಎಂ ಸ್ಪಷ್ಟ ನುಡಿ

‘ಗ್ಯಾರಂಟಿ ಸಮಿತಿ ರದ್ದು ಮಾಡಲ್ಲ’

ಪ್ರಜಾವಾಣಿ ವಾರ್ತೆ

> ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನದ ಪರಿಶೀಲನೆಗೆ ನಿಮ್ಮ ಮೇಲೆ (ಸಿ.ಎಂ) ಎಐಸಿಸಿ ಅಧ್ಯಕ್ಷರನ್ನು ತಂದು ಕೂರಿಸಿದರೆ ಸುಮ್ಮನಿರುತ್ತೀರೋ
> **ವಿ.ಸುನಿಲ್ ಕುಮಾರ್,** ಬಿಜೆಪಿ

> ಮುಂದೆ ಆಶ್ರಯ ಮತ್ತಿತರ ಸಮಿತಿಗಳಿಗೂ ಉಸ್ತುವಾರಿ ಸಮಿತಿ ಮಾಡಿ ಶಾಸಕರ ಅಧಿಕಾರ ಕಸಿದುಕೊಂಡು ಬಿಡಿ. ಅಲ್ಲಿಗೆ ಕಥೆ ಮುಗಿಯುತ್ತದೆ
> **ಆರ್.ಅಶೋಕ,** ವಿರೋಧಪಕ್ಷದ ನಾಯಕ

> ಶಾಸಕರಿಗೇ ಪ್ರಾಧಾನ್ಯ ನೀಡಬೇಕು, ಅಗೌರವ ತೋರಬಾರದು ಎಂದು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಸೂಚನೆ ನೀಡುತ್ತೇನೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಬೆಂಗಳೂರು: ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ‘ಗ್ಯಾರಂಟಿ’ ಯೋಜನೆಗಳ ಅನುಷ್ಠಾನ ಸಮಿತಿಗಳನ್ನು ರದ್ದು ಮಾಡುವ ಮತ್ತು ಕಾರ್ಯಕರ್ತರನ್ನು ಆ ಹುದ್ದೆಗಳಿಂದ ತೆಗೆಯುವ ಪ್ರಶ್ನೆಯೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗ್ಯಾರಂಟಿ ಸಮಿತಿಗಳ ಅಧ್ಯಕ್ಷ ಹುದ್ದೆ ರದ್ದು ಮಾಡಿ, ಶಾಸಕರಿಗೆ ಆ ಜವಾಬ್ದಾರಿ ನೀಡಬೇಕು ಮತ್ತು ಸಮಿತಿಗಳಲ್ಲಿರುವ ಕಾಂಗ್ರೆಸ್ ಪದಾಧಿಕಾರಿಗಳಿಗೆ ಸರ್ಕಾರದ ಬೊಕ್ಕಸದಿಂದ ಸಂಬಳ ನೀಡುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿ ವಿಧಾನಸಭೆಯಲ್ಲಿ ಎರಡು ದಿನಗಳಿಂದ ವಿರೋಧ ಪಕ್ಷಗಳ ನಡೆಸುತ್ತಿದ್ದ ಧರಣಿ ಹಾಗೂ ಹೋರಾಟಕ್ಕೆ ಬುಧವಾರ ಅವರು ಉತ್ತರಿಸಿದರು.

ಜೆಡಿಎಸ್‌ನ ಎಂ.ಟಿ.ಕೃಷ್ಣಪ್ಪ ಅವರು ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಕೇಳಿದ ಪ್ರಶ್ನೆಯು ಸದನದಲ್ಲಿ ಹೋರಾಟದ ಸ್ವರೂಪ ಪಡೆಯಿತು. ಧರಣಿ ಮತ್ತು ಪದೇ ಪದೇ ಕಲಾಪ ಮುಂದೂಡಿಕೆಗೂ ಸಾಕ್ಷಿಯಾಯಿತು. ‘ಮುಖ್ಯಮಂತ್ರಿ ಅವರೇ ಬಂದು ಉತ್ತರ ನೀಡಬೇಕು’ ಎಂದು ವಿರೋಧಪಕ್ಷಗಳು ಪಟ್ಟು ಹಿಡಿದವು. ಸಭಾಧ್ಯಕ್ಷರ ಕೊಠಡಿಯಲ್ಲಿ ನಡೆದ ಸಂಧಾನದಲ್ಲಿ ಮುಖ್ಯಮಂತ್ರಿ ಅವರಿಂದ ಉತ್ತರ ಕೊಡಿಸುವ ಭರವಸೆ ಸಿಕ್ಕ ಬಳಿಕ ವಿರೋಧಪಕ್ಷದ ಸದಸ್ಯರು ಕಲಾಪ ನಡೆಯುವುದಕ್ಕೆ ಅವಕಾಶ ನೀಡಿದರು.

‘ಯಾವುದೇ ಸರ್ಕಾರ ಇದ್ದಾಗ ಆ ಪಕ್ಷದ ಕಾರ್ಯಕರ್ತರಿಗೆ ಅವಕಾಶ ಕೊಡುವುದು ಹಿಂದಿನಿಂದ ನಡೆದುಕೊಂಡೇ ಬಂದಿದೆ. ಮಹಾರಾಷ್ಟ್ರದಲ್ಲಿ ಸಚಿವರಿಗೆ ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಆಪ್ತ ಸಹಾಯಕರನ್ನಾಗಿ ಮಾಡಿಲ್ಲವೇ? ಕೆಕೆಆರ್‌ಡಿಬಿಗೆ ಸಲಹೆ ಕೊಡಲು ಬಸವರಾಜ ಪಾಟೀಲ ಸೇಡಂ ನೇತೃತ್ವದಲ್ಲಿ ಸಂಸ್ಥೆ ರಚಿಸಿ ಅದಕ್ಕೆ ಸರ್ಕಾರದಿಂದ ಹಣ ಕೊಟ್ಟಿರಲಿಲ್ಲವೇ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಇದಕ್ಕೆ ತಿರುಗೇಟು ನೀಡಿದ ಬಿಜೆಪಿ ಸದಸ್ಯರು, ‘ನೀವು ಕೂಡ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಿಸಿಕೊಂಡಿಲ್ಲವೇ? ಮಹಾರಾಷ್ಟ್ರದಲ್ಲಿ ಗ್ಯಾರಂಟಿ ಸಮಿತಿ ರೀತಿಯ ವ್ಯವಸ್ಥೆ ಮಾಡಿ ಅಲ್ಲಿ ಪಕ್ಷದ ಕಾರ್ಯಕರ್ತರಿಗೆ ಸಂಬಳ ಕೊಟ್ಟು ಸಾಕುತ್ತಿಲ್ಲ’ ಎಂದರು.

ತಮ್ಮ ಪಟ್ಟು ಬಿಡದ ಮುಖ್ಯಮಂತ್ರಿ, ‘ಯಾವುದೇ ಕಾರಣಕ್ಕೂ ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳಲ್ಲಿ ಬದಲಾವಣೆ ಮಾಡುವುದಿಲ್ಲ ಎಂದು ಹೇಳಿದರು.

ಆಗ ಮಧ್ಯಪ್ರವೇಶಿಸಿ ಮಾತನಾಡಿದ ಆರ್.ಅಶೋಕ, ‘ಸಮಿತಿಯ ಅಧ್ಯಕ್ಷರು ಶಾಸಕರನ್ನು ಲೆಕ್ಕಕ್ಕೇ ತೆಗೆದುಕೊಳ್ಳುತ್ತಿಲ್ಲ. ಅಗೌರವ ತೋರಿಸುತ್ತಿದ್ದಾರೆ. ಶಿಕಾರಿಪುರದಲ್ಲಿ ಗ್ಯಾರಂಟಿ ಸಮಿತಿ ಅಧ್ಯಕ್ಷರು ಅಧಿಕಾರಿಗಳನ್ನು ಕರೆದು ಸಭೆ ನಡೆಸಿದ್ದಾರೆ. ಅಷ್ಟೇ ಅಲ್ಲದೆ ಅಧಿಕಾರಿಗಳ ಪಟ್ಟಿ ಮಾಡಿ ವರ್ಗಾವಣೆಗೂ ಮುಂದಾಗಿದ್ದಾರೆ. ಮುಂದೆ ಬೇರೆ ಸರ್ಕಾರಗಳು ಬಂದಾಗಲೂ ಇದೇ ಪರಂಪರೆ ಮುಂದುವರಿಸುತ್ತಾರೆ. ನೀವು ತಪ್ಪು ದಾರಿಯಲ್ಲಿ ನಡೆದರೆ, ಅದು ನಿಮಗೇ ರಿವರ್ಸ್ ಆಗುತ್ತದೆ. ಹಿಂದೆ ಯಾವುದೇ ಮುಖ್ಯಮಂತ್ರಿ ಈ ರೀತಿ ನಡೆದುಕೊಂಡಿರಲಿಲ್ಲ’ ಎಂದರು.

‘ಶಾಸಕರ ಹಕ್ಕು ಮೊಟಕು ಮಾಡದ ಹಾಗೆ ಮತ್ತು ಅಗೌರವ ಆಗದಂತೆ ನೋಡಿಕೊಳ್ಳುವುದಾಗಿ ಮುಖ್ಯಮಂತ್ರಿಯವರು ಭರವಸೆ ನೀಡಿದ್ದಾರೆ. ಜಿಲ್ಲಾಧಿಕಾರಿಗಳಿಗೂ ಸೂಚನೆ ನೀಡುವುದಾಗಿ ಹೇಳಿದ್ದಾರೆ. ಅಧಿವೇಶನ ಮುಗಿದ ಬಳಿಕ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷಗಳ ಸದಸ್ಯರನ್ನು ಕರೆಸಿ, ಅವರಿಂದ ಸಲಹೆ ಪಡೆಯಿರಿ’ ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಮುಖ್ಯಮಂತ್ರಿಗೆ ಸಲಹೆ ನೀಡಿದರು.

ಸುದ್ದಿ 2 ನಿಮಿಷ

5 ವರ್ಷಗಳಲ್ಲಿ ಸಾರಿಗೆ ನಿಗಮಗಳಿಗೆ ₹5,200 ಕೋಟಿ ನಷ್ಟ: ಸಚಿವ

‘ಐದು ವರ್ಷಗಳಲ್ಲಿ ರಾಜ್ಯ ಸಾರಿಗೆ ಸಂಸ್ಥೆಯ ಅಡಿಯಲ್ಲಿರುವ ನಾಲ್ಕು ಸಾರಿಗೆ ನಿಗಮಗಳಿಗೆ ₹5,200 ಕೋಟಿ ನಷ್ಟ ಆಗಿದೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಕೇಶವಪ್ರಸಾದ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ತೈಲ ಬೆಲೆ, ಸಿಬ್ಬಂದಿ ವೇತನ, ವಾಹನ ಬಿಡಿಭಾಗಗಳ ಬೆಲೆ ಹೆಚ್ಚಳದಿಂದ ಆರ್ಥಿಕ ಹೊರೆ ಉಂಟಾಗಿದೆ. ಹೀಗಾಗಿ, ಕಳೆದ ಜನವರಿಯಲ್ಲಿ ಬಸ್ ಪ್ರಯಾಣ ದರವನ್ನು ಶೇ 15ರಷ್ಟು ಹೆಚ್ಚಿಸಲಾಗಿದೆ’ ಎಂದರು.



‘ಶಕ್ತಿ’ ಯೋಜನೆಗೆ 2024-25ನೇ ಸಾಲಿನಲ್ಲಿ ₹9,978 ಕೋಟಿ ಅನುದಾನದ ಪೈಕಿ ₹7,796 ಕೋಟಿ ಬಿಡುಗಡೆಯಾಗಿದೆ. ಬಾಕಿ ₹2 ಸಾವಿರ ಕೋಟಿ ಬಿಡುಗಡೆ ಆಗಬೇಕಿದೆ ಎಂದರು.

‘ಕೆಎಸ್‌ಆರ್‌ಟಿಸಿ ನೌಕರರಿಗೆ ನಗದುರಹಿತ ವೈದ್ಯಕೀಯ ಚಿಕಿತ್ಸಾ ಯೋಜನೆ ಈಗಾಗಲೇ ಜಾರಿಯಲ್ಲಿದ್ದು, ಇತರ ಸಾರಿಗೆ ನಿಗಮಗಳಿಗೂ ಈ ಯೋಜನೆ ವಿಸ್ತರಿಸಲಾಗಿದೆ. ಇತರ ಇಲಾಖೆಗಳಲ್ಲಿ ಮೂರು ತಿಂಗಳ ಒಳಗೆ ನೋಂದಣಿ ಪೂರ್ಣಗೊಳಿಸಿ ಒಡಂಬಡಿಕೆಯಾದ ರಾಜ್ಯದ 350 ಆಸ್ಪತ್ರೆಗಳಲ್ಲಿ ನೌಕರರು ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗುವುದು’ ಎಂದರು.

4 ಮಸೂದೆಗೆ ಪರಿಷತ್ ಒಪ್ಪಿಗೆ

ಬೆಂಗಳೂರು: ಎಲ್ಲ ಇ–ಪ್ಲಾಟ್‌ಫಾರ್ಮ್‌ಗಳಲ್ಲಿ ಮಾರಾಟವಾಗುವ ಕೃಷಿ ಉತ್ಪನ್ನಗಳ ಮೇಲೆ ಸೆಸ್ ವಿಧಿಸಲು ಅವಕಾಶ ಕಲ್ಪಿಸುವ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಮಸೂದೆಯೂ ಸೇರಿ ನಾಲ್ಕು ಮಸೂದೆಗಳಿಗೆ ವಿಧಾನ ಪರಿಷತ್ ಬುಧವಾರ ಅಂಗೀಕಾರ ನೀಡಿತು.

ಎಪಿಎಂಸಿ ತಿದ್ದುಪಡಿ ಮಸೂದೆ ಮಂಡಿಸಿದ ಸಚಿವ ಶಿವಾನಂದ ಪಾಟೀಲ, ‘ಪರವಾನಗಿ ಪಡೆಯದ ಹೊರತು ಅಧಿಸೂಚಿತ ಕೃಷಿ ಉತ್ಪನ್ನದ ವ್ಯಾಪಾರಕ್ಕಾಗಿ ಇ-ಫ್ಲಾಟ್‌ಫಾರ್ಮ್ ಸ್ಥಾಪನೆ ಮಾಡುವಂತಿಲ್ಲ. ಉದ್ದೇಶಪೂರ್ವಕ ತಪ್ಪು ಮಾಹಿತಿ ಅಥವಾ ವಂಚನೆ ಮೂಲಕ ಪರವಾನಗಿ ಪಡೆದಿದ್ದರೆ, ಪರವಾನಗಿದಾರರು ಷರತ್ತು ಉಲ್ಲಂಘಿಸಿದರೆ ಪರವಾನಗಿ ಅಮಾನತುಪಡಿಸುವ ಅಧಿಕಾರವನ್ನು ಮಾರುಕಟ್ಟೆ ನಿರ್ದೇಶಕರು ಹೊಂದಿರುತ್ತಾರೆ’ ಎಂದರು.

ಕರ್ನಾಟಕ ಗಿರವಿದಾರರ (ತಿದ್ದುಪಡಿ) ಮಸೂದೆ, ಲೇವಾದೇವಿದಾರರ (ತಿದ್ದುಪಡಿ) ಮಸೂದೆ, ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ (ತಿದ್ದುಪಡಿ) ಮಸೂದೆಗಳನ್ನು ಸಹಕಾರ ಸಚಿವ ಕೆ.ಎನ್. ರಾಜಣ್ಣ ಮಂಡಿಸಿದರು. ‘ಮಿತಿಮೀರಿದ ಬಡ್ಡಿ’ ಎಂದರೆ ಸರ್ಕಾರವೇ ಬಡ್ಡಿ ದರವನ್ನು ನಿರ್ಧರಿಸಲಿದೆಯೇ ಎಂಬ ವಿಪಕ್ಷ ಸದಸ್ಯರ ಪ್ರಶ್ನೆಗೆ ಪ್ರತಿಕ್ರಿಯಿಸಿದ ರಾಜಣ್ಣ, ‘2013ರಲ್ಲಿ ಸರ್ಕಾರ ಹೊರಡಿಸಿದ ಅಧಿಸೂಚನೆಯ ಪ್ರಕಾರ ಭದ್ರತೆ ನೀಡಿದ ಸಾಲಕ್ಕೆ ಶೇ 14, ಭದ್ರತೆ ಇಲ್ಲದ ಸಾಲಗಳಿಗೆ ಶೇ 16ರಷ್ಟು ಬಡ್ಡಿ ವಿಧಿಸಲು ಅವಕಾಶವಿದೆ. ಇದು ಜಾಸ್ತಿ. ಇದನ್ನು ಪರಿಷ್ಕರಿಸುವ ಅಗತ್ಯವಿದೆ’ ಎಂದರು.

ಗ್ಯಾರಂಟಿ ಸಮಿತಿ ಅಧ್ಯಕ್ಷರಿಗೆ ತೆರಿಗೆ ಹಣದಲ್ಲಿ ಸಂಬಳ ಪಾವತಿ ಎಷ್ಟು ಸರಿ: ಬಿಜೆಪಿ–ಜೆಡಿಎಸ್ ಪ್ರಶ್ನೆ

ಹಕ್ಕು ಮೊಟಕು: ರಾಜ್ಯಪಾಲರಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಿಂದ ಶಾಸಕರ ಹಕ್ಕು ಮೊಟಕು ಮಾಡಲಾಗುತ್ತಿದೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಜನರ ತೆರಿಗೆ ಹಣದಿಂದ ಸಂಬಳ ನೀಡಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ಬಿಜೆಪಿ ಮತ್ತು ಜೆಡಿಎಸ್ ಶಾಸಕರು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ.

ವಿಧಾನಸೌಧದ ಆವರಣದಲ್ಲಿರುವ ಕೆಂಗಲ್ ಹನುಮಂತಯ್ಯ ಪ್ರತಿಮೆಯ ಬಳಿ ಪ್ರತಿಭಟನೆ ನಡೆಸಿ, ಬಳಿಕ ಕೆಲ ಸಮಯ ಕಲಾಪದಲ್ಲಿ ಭಾಗವಹಿಸಿದ ವಿರೋಧ ಪಕ್ಷದ ಸದಸ್ಯರು, ಕಲಾಪ ಮುಂದೂಡಿಕೆ ಆದಾಗ ಕಾಲ್ನಡಿಗೆಯಲ್ಲಿ ರಾಜಭವನಕ್ಕೆ ತೆರಳಿ ಮನವಿ ಪತ್ರ ಅರ್ಪಿಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ‘ಗ್ಯಾರಂಟಿ ಅನುಷ್ಠಾನ ಮಾಡುವುದಕ್ಕಾಗಿ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಅಧ್ಯಕ್ಷರನ್ನು ನೇಮಿಸಿರುವುದು ಮತ್ತು ಅವರ ಸಂಬಳಕ್ಕಾಗಿ ಸರ್ಕಾರದ ಬೊಕ್ಕದ ಹಣ ಬಳಸುತ್ತಿರುವುದು ಅಸಾಂವಿಧಾನಿಕ ನಡೆ ಎಂಬುದನ್ನು ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ’ ಎಂದರು.



ಗ್ಯಾರಂಟಿ ಅನುಷ್ಠಾನ ಸಮಿತಿ ರದ್ದುಗೊಳಿಸಬೇಕು ಎಂದು ಒತ್ತಾಯಿಸಿ, ಬಿಜೆಪಿ–ಜೆಡಿಎಸ್ ಶಾಸಕರು ವಿಧಾನಸೌಧ ಬಳಿಯ ಕೆಂಗಲ್ ಹನುಮಂತಯ್ಯ ಪ್ರತಿಮೆಯ ಬಳಿ ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

ರಾಜ್ಯದ ಜನರ ತೆರಿಗೆ ಹಣದ ದುರುಪಯೋಗ ಆಗಿದೆ ಎಂದು ರಾಜ್ಯಪಾಲರಿಗೆ ಮನದಟ್ಟು ಮಾಡಲಾಗಿದೆ ಎಂದರು. ಈ ಸರ್ಕಾರಕ್ಕೆ ತಿಳಿ ಹೇಳುವ ಕೆಲಸ ಮಾಡುವಂತೆ ಹಾಗೂ ಮಧ್ಯಸ್ಥಿಕೆ ವಹಿಸಲು ಮನವಿ ಮಾಡಿದ್ದಾಗಿ ತಿಳಿಸಿದರು.

‘ನನ್ನ ವಿಧಾನಸಭಾ ಕ್ಷೇತ್ರದಲ್ಲೇ ಜಿಲ್ಲಾ ಉಸ್ತುವಾರಿ ಸಚಿವರು, ಶಾಲೆ ಮತ್ತು ಕಾಲೇಜುಗಳ ಉಸ್ತುವಾರಿ ಸಮಿತಿಗಳಿಗೆ ಶಿಕಾರಿಪುರ ತಾಲ್ಲೂಕಿನ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರು ಕೊಟ್ಟ ಹೆಸರನ್ನು ಪರಿಗಣಿಸಲು ಸೂಚಿಸಿದ್ದಾರೆ. ಇಂಥ ಕೆಲಸ ಬೇರೆ ಕಡೆಯೂ ನಡೆಯುತ್ತಿದೆ. ಈ ಸಂಬಂಧ ಸದನದಲ್ಲಿ ಹಕ್ಕುಚ್ಯುತಿ ಮಂಡಿಸಲಿದ್ದೇನೆ. ಸಚಿವರಿಂದಲೂ ಶಾಸಕರ ಹಕ್ಕು ಮೊಟಕುಗೊಳಿಸುವ ಕೆಲಸ ಆಗುತ್ತಿದೆ’ ಎಂದು ದೂರಿದರು.

‘ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತವರ ಮಕ್ಕಳನ್ನು ಗ್ಯಾರಂಟಿ ಸಮಿತಿಗಳಿಗೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದೇವೆ. ಗ್ಯಾರಂಟಿ ಅನುಷ್ಠಾನಕ್ಕೆ ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರ್ ಅವರು ಇಲ್ಲವೇ? ಇದಕ್ಕೆ ಕಾಂಗ್ರೆಸ್ ಕಾರ್ಯಕರ್ತರನ್ನು ಬಳಸಿಕೊಳ್ಳಬೇಕೇ’ ಎಂದು ವಿಜಯೇಂದ್ರ ಪ್ರಶ್ನಿಸಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಜೆಡಿಎಸ್ ವಿಧಾನ ಪರಿಷತ್ತಿನ ನಾಯಕ ಬೋಜೆಗೌಡ ಮತ್ತು ಬಿಜೆಪಿ-ಜೆಡಿಎಸ್ ಶಾಸಕರು ಹಾಗೂ ವಿಧಾನ ಪರಿಷತ್ತಿನ ಸದಸ್ಯರು ಭಾಗವಹಿಸಿದ್ದರು.

ಗಡಿಭಾಗದ ಶಾಲೆಗಳ ದುಃಸ್ಥಿತಿ ‘ಪ್ರಜಾವಾಣಿ’ ವರದಿ ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಡಿ ಭಾಗದ ಸರ್ಕಾರಿ ಶಾಲೆಗಳಿಗೆ ಮೂಲಸೌಲಭ್ಯ ಒದಗಿಸಲು ಹಾಗೂ ಕಾಯಂ ಶಿಕ್ಷಕರನ್ನು ನೇಮಕಾತಿ ಮಾಡಿ, ಗಡಿಭಾಗದ ಜನರಿಗೆ ಕನ್ನಡದಲ್ಲಿ ಗುಣಮಟ್ಟದ ಶಿಕ್ಷಣ ಸೌಲಭ್ಯ ಒದಗಿಸಬೇಕು’ ಎಂದು ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ತಳವಾರ ಸಾಬಣ್ಣಾ ಒತ್ತಾಯಿಸಿದರು.


ಗಡಿಯಲ್ಲಿ ಯಾರಿಗೂ ಸಲ್ಲದ ಶಾಲೆಗಳು

‘ಪ್ರಜಾವಾಣಿ’ಯ ಮಾರ್ಚ್ 9ರ ಸಂಚಿಕೆಯಲ್ಲಿ ಪ್ರಕಟವಾದ ‘ಗಡಿಯಲ್ಲಿ ಯಾರಿಗೂ ಸಲ್ಲದ ಶಾಲೆಗಳು’ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಅವರು, ‘ಕರ್ನಾಟಕದ 19 ಗಡಿ ಜಿಲ್ಲೆಗಳು ಮತ್ತು 63 ತಾಲ್ಲೂಕುಗಳು ಆರು ರಾಜ್ಯಗಳೊಂದಿಗೆ ಗಡಿ ಹಂಚಿಕೊಂಡಿವೆ. ರಾಜ್ಯದ ಗಡಿಭಾಗದ ಒಂದೊಂದು ಊರಿಗೆ ಭೇಟಿ ನೀಡಿದರೆ, ಅಲ್ಲಿನ ಸರ್ಕಾರಿ ಶಾಲೆಗಳ ಅವ್ಯವಸ್ಥೆ ಕಣ್ಣಿಗೆ ರಾಚುತ್ತದೆ. ಮೂಲಸೌಲಭ್ಯ ವಂಚಿತ ಮತ್ತು ಸರ್ಕಾರಿ ಶಾಲೆಗಳ ಪಟ್ಟಿಯಲ್ಲಿ ಕನ್ನಡ ಮಾಧ್ಯಮ ಶಾಲೆಗಳು ಹೆಚ್ಚಿವೆ’ ಎಂದರು.

‘ಯಾದಗಿರಿಯ ಸೈದಾಪುರ, ಗುರುಮಠಕಲ್ ತಾಲ್ಲೂಕುಗಳಲ್ಲಿ ತೆಲುಗು ಪ್ರಭಾವ ದಟ್ಟವಾಗಿದ್ದು, ಕನ್ನಡ ಶಾಲೆಯ ಶಿಕ್ಷಕರ ಕೊರತೆಯಿಂದ ಅನಿವಾರ್ಯವಾಗಿ ತೆಲುಗು ಶಾಲೆಗಳಿಗೆ ಹೋಗಬೇಕಾದ ಪರಿಸ್ಥಿತಿ ಇದೆ. ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನಲ್ಲಿ ತಮಿಳು ಪ್ರಭಾವವಿದೆ. ಬಹುತೇಕ ಗ್ರಾಮಗಳು ಅರಣ್ಯ ವ್ಯಾಪ್ತಿಯಲ್ಲಿರುವುದರಿಂದ ಸರಿಯಾದ ರಸ್ತೆಗಳಿಲ್ಲದೆ ಬಸ್ ಸಂಚರಿಸುವುದಿಲ್ಲ. ಗೋವಾದೊಂದಿಗೆ ಗಡಿ ಹಂಚಿಕೊಂಡ ಉತ್ತರ ಕನ್ನಡದ ಕಾರವಾರ ಮತ್ತು ಜೋಯಿಡಾ ತಾಲ್ಲೂಕಿನ ಕನ್ನಡ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆ ಕುಸಿಯುತ್ತಿದೆ. ಕೇರಳದ ಕಾಸರಗೋಡಿನಲ್ಲಿ 184 ಕನ್ನಡ ಶಾಲೆಗಳಿವೆ. ಅಲ್ಲಿ ಮಲಯಾಳ ಶಿಕ್ಷಕರನ್ನು ಕನ್ನಡ ಶಾಲೆಗಳಿಗೆ ನೇಮಕ ಮಾಡಿದ ವಿಷಯ ವಿವಾದವಾಗಿತ್ತು. ಮೂಲಸೌಲಭ್ಯ ಒದಗಿಸುವ ಮೂಲಕ ಗಡಿ ಭಾಗದ ಶಾಲೆಗಳ ನೆರವಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಧಾವಿಸಬೇಕು’ ಎಂದೂ ಅವರು ಆಗ್ರಹಿಸಿದರು.

ಪಿಡಿಒ ವರ್ಗಾವಣೆ: ಕೌನ್ಸೆಲಿಂಗ್‌ಗೆ ವಿರೋಧ

ಕೌನ್ಸೆಲಿಂಗ್ ಆದರೆ ನಮ್ಮ ಪತ್ರಕ್ಕೆ ಬೆಲೆ ಇರಲ್ಲ: ಶಾಸಕರು • ಸಮಸ್ಯೆ ಇದ್ದರೆ ಸರಿಪಡಿಸೋಣ: ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ವರ್ಗಾವಣೆಗೆ ಕೌನ್ಸೆಲಿಂಗ್ ಬೇಡವೇ ಬೇಡ. ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಿದರೆ ನಮ್ಮ ಪತ್ರಕ್ಕೆ ಬೆಲೆಯೇ ಇರುವುದಿಲ್ಲ. ಅಧಿಕಾರಿಗಳ ಮೇಲೆ ಜನಪ್ರತಿನಿಧಿಗಳಿಗೆ ಹಿಡಿತವೂ ಇರುವುದಿಲ್ಲ...’

ಕೌನ್ಸೆಲಿಂಗ್ ಮೂಲಕ ಪಿಡಿಒಗಳನ್ನು ವರ್ಗಾವಣೆ ಮಾಡುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ನಿರ್ಧಾರವನ್ನು ವಿಧಾನಸಭೆಯಲ್ಲಿ ಶಾಸಕರು ಬುಧವಾರ ಹೀಗೆ ವಿರೋಧಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಡಾ.ಎಚ್.ಡಿ. ರಂಗನಾಥ್ ಅವರು, ‘ನನ್ನ ಕ್ಷೇತ್ರದಲ್ಲಿ ಪಿಡಿಒಗಳ ಕೊರತೆ ಇದೆ. ಒಬ್ಬ ಪಿಡಿಒ ಎರಡರಿಂದ ಮೂರು ಪಂಚಾಯಿತಿಗಳ ಪ್ರಭಾರ ಹೊಂದಿದ್ದಾರೆ. ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡುತ್ತಿರುವುದರಿಂದಲೂ ತೊಂದರೆ ಆಗಿದೆ’ ಎಂದರು.

ಬಿಜೆಪಿಯ ಸುರೇಶ್ ಗೌಡ, ಹರೀಶ್ ಪೂಂಜ, ಸಿ.ಸಿ. ಪಾಟೀಲ, ಜೆಡಿಎಸ್‌ನ ಸಿ.ಬಿ. ಸುರೇಶ್ ಬಾಬು, ಕಾಂಗ್ರೆಸ್‌ನ ಎಚ್.ಡಿ. ತಮ್ಮಯ್ಯ ಸೇರಿದಂತೆ ಹಲವರು ದನಿಗೂಡಿಸಿದರು.

ಉತ್ತರ ನೀಡಿದ ಪ್ರಿಯಾಂಕ್ ಖರ್ಗೆ, ‘300ರಿಂದ 400 ಪಿಡಿಒಗಳು ಹತ್ತು ವರ್ಷಕ್ಕೂ ಹೆಚ್ಚು ಅವಧಿಯಿಂದ ಒಂದೇ ಸ್ಥಳದಲ್ಲಿದ್ದಾರೆ. 400ರಿಂದ 500 ಪಿಡಿಒಗಳು ಎಂಟು ವರ್ಷಕ್ಕೂ ಹೆಚ್ಚು ಅವಧಿಯಿಂದ ಹಾಗೂ ಶೇಕಡ 70ರಷ್ಟು ಮಂದಿ ಐದು ವರ್ಷಕ್ಕೂ ಹೆಚ್ಚು ಸಮಯದಿಂದ ಒಂದೇ ಸ್ಥಳದಲ್ಲಿದ್ದಾರೆ. ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಿದರೆ ಮಾತ್ರ ಅವರನ್ನು ಕದಲಿಸಲು ಸಾಧ್ಯ’ ಎಂದರು.

‘ಗೃಹಲಕ್ಷ್ಮಿ: 2 ತಿಂಗಳ ಹಣ ಬಾಕಿ’

‘ಗೃಹ ಲಕ್ಷ್ಮಿ ಯೋಜನೆ ಫಲಾನುಭವಿಗಳಿಗೆ ಪ್ರಸಕ್ತ ವರ್ಷದ ಜನವರಿ ಮತ್ತು ಫೆಬ್ರುವರಿ ತಿಂಗಳ ಹಣ ಬಿಡುಗಡೆ ಬಾಕಿ ಇದೆ. ಶೀಘ್ರದಲ್ಲಿ ಬಾಕಿ ಮೊತ್ತವನ್ನು ಫಲಾನುಭವಿಗಳ ಖಾತೆಗಳಿಗೆ ವರ್ಗಾಯಿಸಲಾಗುವುದು’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಭರವಸೆ ನೀಡಿದರು.

ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ಅವರ ಪ್ರಶ್ನೆಗೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಪರವಾಗಿ ಉತ್ತರಿಸಿದ ಅವರು, ‘ಸಂಪನ್ಮೂಲ ಸಂಗ್ರಹವನ್ನು ಆಧರಿಸಿ ಸರ್ಕಾರ ಹಣ ಬಿಡುಗಡೆ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಖಜಾನೆಯಲ್ಲಿ ಸಮಸ್ಯೆಗಳ ಕಾರಣದಿಂದ ಎರಡು ತಿಂಗಳ ಹಣ ಬಿಡುಗಡೆ ಆಗಿಲ್ಲ’ ಎಂದರು.

ವಿತ್ತೀಯ ಬೇಡಿಕೆ ಮಂಡನೆ

ರಾಜ್ಯ ಸರ್ಕಾರದ 28 ಇಲಾಖೆಗಳಿಗೆ 2025ರ ಏಪ್ರಿಲ್ 1ರಿಂದ 2026 ಮಾರ್ಚ್ 31ರವರೆಗೆ ಅಗತ್ಯವಿರುವ ಮೊತ್ತವನ್ನು ವೆಚ್ಚ ಮಾಡಲು ಮಂಜೂರಾತಿ ಕೋರುವ ವಿತ್ತೀಯ ಬೇಡಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ಬುಧವಾರ ಮಂಡಿಸಿದರು.

ಬಜೆಟ್ ಘೋಷಣೆಯಂತೆ ವೃತ್ತಿ ತೆರಿಗೆ ದರದ ಪರಿಷ್ಕರಣೆಗೆ ಅವಕಾಶ ಕಲ್ಪಿಸುವ ‘ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ–2025’ ಅನ್ನು ಕೂಡ ಸಿ.ಎಂ ಸದನದಲ್ಲಿ ಮಂಡಿಸಿದರು.

ಇದು ಆರಂಭದ ಹಂತ. ಕೌನ್ಸೆಲಿಂಗ್‌ನಲ್ಲಿ ಸಮಸ್ಯೆಗಳಿದ್ದರೆ ಸರಿಪಡಿಸಲಾಗುವುದು ಎಂದು ಹೇಳಿದರು.

868 ಪಿಡಿಒ ಹುದ್ದೆಗಳು ಖಾಲಿ ಇವೆ. 247 ಪಿಡಿಒಗಳ ಹುದ್ದೆಗಳ ಭರ್ತಿಗೆ ಪರೀಕ್ಷೆ ಪೂರ್ಣಗೊಂಡಿದ್ದು, ಶೀಘ್ರದಲ್ಲಿ ನೇಮಕಾತಿ ಆದೇಶ ಹೊರಡಿಸಲಾಗುವುದು. ಉಳಿದ ಹುದ್ದೆಗಳ ಭರ್ತಿಗೂ ಆರ್ಥಿಕ ಇಲಾಖೆಯ ಸಮ್ಮತಿ ದೊರೆತಿದೆ. ಶಾಸಕರು ಮತ್ತು ಸಚಿವರ ಬಳಿ 88 ಪಿಡಿಒಗಳು ಕಾರ್ಯನಿರ್ವಹಿಸುತ್ತಿದ್ದು, ಅವರ ಸೇವೆಯನ್ನು ಇಲಾಖೆಗೆ ಮರಳಿಸಬೇಕು ಎಂದು ಸಚಿವರು ಮನವಿ ಮಾಡಿದರು.

ದಕ್ಷಿಣದ ಹಕ್ಕಿನ ಹೋರಾಟಕ್ಕೆ ಬೆಂಬಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರದ ದಕ್ಷಿಣ ರಾಜ್ಯಗಳ ವಿರೋಧಿ ನೀತಿ ವಿರುದ್ಧ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಸಂಘಟಿಸುತ್ತಿರುವ ಹೋರಾಟಕ್ಕೆ ನಮ್ಮ ಬೆಂಬಲವಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ, ಹಿಂದಿ ಹೇರಿಕೆ, ತೆರಿಗೆ ಪಾಲು ಹಂಚಿಕೆಯಲ್ಲಿ ದಕ್ಷಿಣ ಭಾರತದ ರಾಜ್ಯಗಳಿಗೆ ಕೇಂದ್ರವು ಅನ್ಯಾಯ ಮಾಡುತ್ತಿದೆ. ಇದರ ವಿರುದ್ಧದ ಹೋರಾಟದ ರೂಪುರೇಷೆಗಳನ್ನು ಸಿದ್ಧಪಡಿಸಲು ಸ್ಟಾಲಿನ್ ಅವರು ಇದೇ 22ರಂದು ಚೆನ್ನೈನಲ್ಲಿ ಸಭೆ ಆಯೋಜಿಸಿದ್ದಾರೆ.

ತಮಿಳುನಾಡಿನ ಅರಣ್ಯ ಸಚಿವ ಕೆ.ಪೊನ್ನುಮುಡಿ ಮತ್ತು ರಾಜ್ಯಸಭಾ ಸದಸ್ಯ ಮೊಹಮ್ಮದ್ ಅಬ್ದುಲ್ಲಾ ಇಸ್ಮಾಯಿಲ್ ಅವರು ಮುಖ್ಯಮಂತ್ರಿಯವರ ಕಾವೇರಿ ನಿವಾಸದಲ್ಲಿ ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿ ಮಾಡಿ, ಸಭೆಗೆ ಆಮಂತ್ರಣ ನೀಡಿದರು. ಸ್ಟಾಲಿನ್ ಅವರು ಕರೆ ಮಾಡಿ, ಸಿದ್ದರಾಮಯ್ಯ ಅವರನ್ನು ಸಭೆಗೆ ಆಮಂತ್ರಿಸಿದರು.

‘ಕರ್ನಾಟಕದ ಹಿತಾಸಕ್ತಿಗೆ ವಿರುದ್ಧವಾದ, ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ, ಸಂವಿಧಾನದ ಒಕ್ಕೂಟ ತತ್ವಕ್ಕೆ ವಿರುದ್ಧವಾದ ಕೇಂದ್ರ ಸರ್ಕಾರದ ಎಲ್ಲಾ ನಡೆಗಳನ್ನೂ ನಾವು ಮುಲಾಜಿಲ್ಲದೆ ಖಂಡಿಸುತ್ತೇವೆ. ಈ ವಿಚಾರದಲ್ಲಿ ಹೋರಾಟಕ್ಕೂ ಬೆಂಬಲ ನೀಡುತ್ತೇವೆ’ ಎಂದು ಸಿದ್ದರಾಮಯ್ಯ ಹೇಳಿದರು.

‘ಲೋಕಸಭೆಯಲ್ಲಿ ದಕ್ಷಿಣದ ರಾಜ್ಯಗಳ ಪ್ರಾತಿನಿಧ್ಯ ತಗ್ಗಿಸುವ ಕೇಂದ್ರದ ಸಂಚಿನ ವಿರುದ್ಧ ನಡೆಯಲಿರುವ ಹೋರಾಟಕ್ಕೆ ನಾವು ಜತೆಯಾಗುತ್ತೇವೆ’ ಎಂದರು. ಪೊನ್ನುಮುಡಿ ಮತ್ತು ಇಸ್ಮಾಯಿಲ್ ಅವರು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನೂ ಭೇಟಿ ಮಾಡಿ, ಸಭೆಗೆ ಆಹ್ವಾನಿಸಿದರು.




ಕೆ.ಪೊನ್ನುಮುಡಿ ಅವರು ಸಿದ್ದರಾಮಯ್ಯ ಅವರಿಗೆ ಆಮಂತ್ರಣ ಪತ್ರ ನೀಡಿದರು

ವಿಲ್ ಅಥವಾ ದಾನಪತ್ರ ರದ್ದುಪಡಿಸಲು ಅವಕಾಶವಿದೆ: ಕೃಷ್ಣ ಬೈರೇಗೌಡ

‘ತಂದೆ–ತಾಯಿ ಕಡೆಗಣಿಸಿದರೆ ಆಸ್ತಿ ಪಾಲು ಇಲ್ಲ’

ಪ್ರಜಾವಾಣಿ ವಾರ್ತೆ



ಕೃಷ್ಣ ಬೈರೇಗೌಡ

ಬೆಂಗಳೂರು: ‘ಪೋಷಕರನ್ನು ಆರೈಕೆ ಮಾಡದಿದ್ದರೆ ತನ್ನ ಮಕ್ಕಳಿಗೆ ಅಥವಾ ಸಂಬಂಧಿಕರಿಗೆ ನೀಡಿದ ವಿಲ್ ಅಥವಾ ದಾನಪತ್ರ ರದ್ದು ಮಾಡಲು ಅವಕಾಶವಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಬಲ್ಕೀಸ್ ಬಾನು ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಕೇಂದ್ರ ಸರ್ಕಾರ 2007ರಲ್ಲಿ ಜಾರಿಗೆ ತಂದಿರುವ ‘ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆಯಲ್ಲಿ ಈ ಅಂಶವಿದೆ. ಆದರೆ, ಈ ಬಗ್ಗೆ ಹಲವರಿಗೆ ಮಾಹಿತಿ ಇಲ್ಲ’ ಎಂದರು.

‘ಈ ಕಾಯ್ದೆ ಪ್ರಕಾರ ಮಕ್ಕಳು ಅಥವಾ ಸಂಬಂಧಿಕರು ಹಿರಿಯ ನಾಗರಿಕರನ್ನು ಆರೈಕೆ ಮಾಡಬೇಕು. ಔಷಧಿ ಸೇರಿದಂತೆ ಅವರ ತಿಂಗಳ ಖರ್ಚಿಗೆ ಹಣ ನೀಡಬೇಕು. ಒಂದು ವೇಳೆ ಹಣ ನೀಡದಿದ್ದರೆ ಅಥವಾ ಆರೈಕೆ ಮಾಡಲು ನಿರ್ಲಕ್ಷಿಸಿದರೆ ಹಿರಿಯ ನಾಗರಿಕರು ಕಾಯ್ದೆಯ ಸೆಕ್ಷನ್ 09ರ ಅಡಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಸಲ್ಲಿಸಬಹುದು’ ಎಂದು ತಿಳಿಸಿದರು.

‘ತಂದೆ– ತಾಯಿಯಿಂದ ಆಸ್ತಿ ಪಡೆದು ಅವರ ಆರೈಕೆ ಮಾಡದಿದ್ದರೆ, ಸೆಕ್ಷನ್ 23ರಂತೆ ತಮ್ಮ ಮಕ್ಕಳ ಅಥವಾ ಸಂಬಂಧಿಕರ ಹೆಸರಿನಲ್ಲಿ ಬರೆದಿರುವ ವಿಲ್ ಅಥವಾ ದಾನಪತ್ರವನ್ನು ರದ್ದುಗೊಳಿಸಿ ಮತ್ತೆ ಪೋಷಕರ ಹೆಸರಿಗೇ ಮರು ಸ್ಥಾಪಿಸಲು ಈ ಕಾಯ್ದೆಯಲ್ಲಿ ಅವಕಾಶ ಇದೆ. ಈ ಜವಾಬ್ದಾರಿಯನ್ನು ಉಪ ವಿಭಾಗಾಧಿಕಾರಿಗಳಿಗೆ ನೀಡಲಾಗಿದೆ’ ಎಂದರು.

‘ಉಪ ವಿಭಾಗಾಧಿಕಾರಿಗಳ ಮುಂದೆ ಸಾವಿರಾರು ಪ್ರಕರಣಗಳಿವೆ. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿ ತಿಂಗಳೂ ಉಪ ವಿಭಾಗಾಧಿಕಾರಿಗಳ ಜೊತೆ ಸಭೆ ನಡೆಸಲಾಗುತ್ತಿದೆ. ಅಲ್ಲದೆ, ಜಿಲ್ಲಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಲು ಕೂಡಾ ಅರ್ಜಿದಾರರಿಗೆ ಅವಕಾಶ ನೀಡಲಾಗಿದೆ’ ಎಂದು ಅವರು ಮಾಹಿತಿ ನೀಡಿದರು.

ವರ್ಷದೊಳಗೆ ಇ- ಜಮಾಬಂದಿ ತಂತ್ರಾಂಶ’

‘ಗ್ರಾಮ ಹಾಗೂ ತಾಲ್ಲೂಕು ಮಟ್ಟದ ಭೂದಾಖಲೆಗಳನ್ನು ತಾಳೆ ಮಾಡಿ ಕ್ರಮಬದ್ಧಗೊಳಿಸುವ ಜಮಾಬಂದಿ ಪ್ರಕ್ರಿಯೆಯನ್ನು ವೇಗವಾಗಿ ನಿರ್ವಹಿಸಲು ಇ-ಜಮಾಬಂದಿ ತಂತ್ರಾಂಶವನ್ನು ಒಂದು ವರ್ಷದೊಳಗೆ ಅಭಿವೃದ್ಧಿಪಡಿಸಲಾಗುವುದು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಟಿ.ಎನ್. ಜವರಾಯಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇತ್ತೀಚೆಗೆ ಮಂಡಿಸಿದ ಬಜೆಟ್‌ನಲ್ಲಿ ಇ- ಜಮಾಬಂದಿ ಘೋಷಿಸಿದ್ದಾರೆ. ಇದರಿಂದ ಗ್ರಾಮ ಲೆಕ್ಕಿಗರ ಮೇಲಿನ ಕೆಲಸದ ಒತ್ತಡ ಕಡಿಮೆ ಆಗಲಿದೆ’ ಎಂದರು.

‘ಇ-ಜಮಾಬಂದಿ ಎಂದರೆ ಜಮಾಬಂದಿಯ ಆನ್‌ಲೈನ್ ಆವೃತ್ತಿ. ಇದು ಹಕ್ಕುಗಳ ದಾಖಲೆ ಅಥವಾ ಭೂ ಮಾಲೀಕತ್ವದ ದಾಖಲೆಗಳಿಗೆ ಅಧಿಕೃತ ದೃಢೀಕರಣ ನೀಡುತ್ತದೆ. ಹರಿಯಾಣ ಸೇರಿದಂತೆ ಇತರ ರಾಜ್ಯಗಳು ಈಗಾಗಲೇ ಜಮಾಬಂದಿಯ ವಿದ್ಯುನ್ಮಾನ ಆವೃತ್ತಿಯನ್ನು ಅಭಿವೃದ್ಧಿಪಡಿಸಿ ಯಶಸ್ವಿ ಆಗಿವೆ’ ಎಂದರು.

‘ವರ್ಷದಲ್ಲಿ 2.30 ಲಕ್ಷ ಮನೆ ನಿರ್ಮಾಣ’



ಜಮೀರ್ ಅಹಮದ್

‘ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಒಂದು ವರ್ಷದೊಳಗೆ 2.30 ಲಕ್ಷ ಮನೆಗಳ ನಿರ್ಮಾಣ ಪೂರ್ಣಗೊಳಿಸಲಾಗುವುದು’ ಎಂದು ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ತಿಳಿಸಿದರು.

ವಿಧಾನಪರಿಷತ್ತಿನಲ್ಲಿ ಬಿಜೆಪಿಯ ಕೆ.ಎಸ್. ನವೀನ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ರಾಜ್ಯ ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ 1.80 ಲಕ್ಷ ಮನೆಗಳು ಮಂಜೂರಾಗಿದ್ದು ಮೊದಲ ಹಂತದಲ್ಲಿ 36,789, ಎರಡನೇ ಹಂತದಲ್ಲಿ 39,843 ಮನೆಗಳ ನಿರ್ಮಾಣ ಪೂರ್ಣಗೊಳಿಸಲಾಗಿದೆ. ಉಳಿದ 1.30 ಲಕ್ಷ ಮನೆಗಳ ನಿರ್ಮಾಣ ಪ್ರಗತಿಯಲ್ಲಿವೆ’ ಎಂದರು.

‘ಮುಖ್ಯಮಂತ್ರಿಗಳ ವಸತಿ ಯೋಜನೆಯಡಿ 46 ಸಾವಿರ ಮನೆ ಸೇರಿ ಈ ವರ್ಷ 2.30 ಲಕ್ಷ ಮನೆಗಳನ್ನು ಪೂರ್ಣಗೊಳಿಸಲಾಗುವುದು. ಬಾಕಿಯಿರುವ 9.50 ಲಕ್ಷ ಮನೆ ನಿರ್ಮಾಣಕ್ಕೆ ₹13,500 ಕೋಟಿ ವೆಚ್ಚವಾಗಲಿದೆ’ ಎಂದರು.

‘ಧರ್ಮದ ಹೆಸರಿನಲ್ಲಿ ಭಯ ಸೃಷ್ಟಿ’

ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಕಾರ್ಯಕ್ರಮದಲ್ಲಿ ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮದ ಹೆಸರಿನಲ್ಲಿ ಈಚೆಗೆ ಭಯದ ವಾತಾವರಣ ನಿರ್ಮಾಣ ಮಾಡಲಾಗುತ್ತಿದೆ. ಸಮಾಜದಲ್ಲಿ ಶಾಂತಿ, ಸಮಾಧಾನ, ಪ್ರೀತಿ, ವಿಶ್ವಾಸ ಇಲ್ಲವಾಗಿದೆ’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಬೇಸರ ವ್ಯಕ್ತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ‘ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ’ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

‘ವೀರಶೈವ–ಲಿಂಗಾಯತ ಮಠಗಳು ಧರ್ಮ ಪ್ರಚಾರದ ಜತೆಗೆ ಸಾಮಾಜಿಕ ಕಳಕಳಿ ಮೆರೆಯುತ್ತಿವೆ. ಎಲ್ಲ ಸಮುದಾಯದವರನ್ನೂ ಒಳಗೊಂಡು, ಶಿಕ್ಷಣ, ಆಶ್ರಯ, ಆರೋಗ್ಯವನ್ನು ಒದಗಿಸುತ್ತಿವೆ. ಮಠಾಧೀಶರು ಧರ್ಮ ಜಾಗೃತಿಗೆ ದೇಶದಾದ್ಯಂತ ಸಂಚರಿಸುತ್ತಿದ್ದಾರೆ. ಕಾಲ ಕಾಲಕ್ಕೆ ಸಮಾಜವನ್ನು ಉನ್ನತೀಕರಿಸುವ ಕೆಲಸ ಮಾಡುತ್ತಿದ್ದಾರೆ. ‘ಧರ್ಮೋ ರಕ್ಷತಿ ರಕ್ಷಿತಃ’ ಎಂದು ಹೇಳಲಾಗುತ್ತದೆ. ಧರ್ಮ ಅಂದರೆ, ಸತ್ಯ, ನ್ಯಾಯ, ತಂದೆ–ತಾಯಿಯ ಸೇವೆ, ಪ್ರಕೃತಿಯ ರಕ್ಷಣೆಯಾಗಿದೆ. ಬಸವಣ್ಣ ಅವರು ‘ದಯವೇ ಧರ್ಮದ ಮೂಲವಯ್ಯ’ ಎಂದಿದ್ದರು. ಆದರೆ, ಇತ್ತೀಚೆಗೆ ನಾವು ಭೌತಿಕ ಸುಖಕ್ಕೆ ಬಿದ್ದು, ಇದನ್ನು ಮರೆಯುತ್ತಿದ್ದೇವೆ’ ಎಂದರು.

‘ಕರ್ನಾಟಕ ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ ಪ್ರತಿ ವರ್ಷ ₹500 ಕೋಟಿ ಅನುದಾನ ನೀಡಬೇಕೆಂಬ ಬೇಡಿಕೆಯಿದೆ. ಈ ವರ್ಷ ಹಣ ಅನುದಾನ ಒದಗಿಸಬೇಕೆಂದು ನಾನು ಕೂಡ ಮುಖ್ಯಮಂತ್ರಿ ಅವರಿಗೆ ಒತ್ತಾಯ ಮಾಡುತ್ತೇನೆ’ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ‘ನಮ್ಮ ಭಾರತೀಯ ನೆಲದಲ್ಲಿ ಅಧ್ಯಾತ್ಮ ಪರಂಪರೆ ಅತ್ಯಂತ ಶ್ರೀಮಂತವಾಗಿದೆ. ದೈಹಿಕ ಶುಚಿತ್ವದ ಜತೆಗೆ ಮಾನಸಿಕ ಶುಚಿತ್ವಕ್ಕೆ ಅಗತ್ಯವಾದ ಧ್ಯಾನ, ಜಪ, ತಪಗಳನ್ನು ಮೈಗೂಡಿಸಿಕೊಂಡ ದೇಶ ನಮ್ಮದು. ನಾಡಿನಲ್ಲಿ ಅನೇಕ ಸಂತರು, ಸಾಧುಗಳು, ಶರಣರು ಆಗಿ ಹೋಗಿದ್ದಾರೆ. ಅಂತಹ ದಾರ್ಶನಿಕ ಲೋಕದಲ್ಲಿ ಅಗ್ರಗಣ್ಯರಾದವರು ಜಗದ್ಗುರು ರೇಣುಕಾಚಾರ್ಯರು. ವೀರಶೈವ ಧರ್ಮಕ್ಕೆ ಜೀವ ನೀಡಿದ ಮಹಾನ್ ವ್ಯಕ್ತಿ ಅವರಾಗಿದ್ದು, ಜಾತಿಭೇದ ತೊರೆದು ಎಲ್ಲರಿಗೂ ಲಿಂಗ ದೀಕ್ಷೆ ನೀಡುವ ಮೂಲಕ ವೀರಶೈವ ತತ್ವ ಬೋಧಿಸಿದರು’ ಎಂದರು.

ಕರ್ನಾಟಕ ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಎಸ್. ಕಾಶಪ್ಪನವರ್, ‘ನಿಗಮಕ್ಕೆ 2023–24ನೇ ಸಾಲಿನಲ್ಲಿ ₹60 ಕೋಟಿ ಅನುದಾನ ನೀಡಲಾಗಿತ್ತು. ಈ ಸಾಲಿಗೆ ₹224 ಕೋಟಿ ನೀಡಲಾಗಿದೆ. ಪ್ರತಿ ವಿಧಾನಸಭೆ ಕ್ಷೇತ್ರದಲ್ಲಿ ವೀರಶೈವ–ಲಿಂಗಾಯತ ಭವನ ನಿರ್ಮಾಣ ಮಾಡಲಾಗುವುದು’ ಎಂದು ಹೇಳಿದರು.

ಇದಕ್ಕೂ ಮೊದಲು ಎಸ್.ಜೆ.ಆರ್.ಸಿ. ಮಹಿಳಾ ಕಾಲೇಜಿನ ಪ್ರಾಂಶುಪಾಲೆ ಪ್ರೇಮಾ ಸಿದ್ಧರಾಜು ಅವರು ರೇಣುಕಾಚಾರ್ಯರ ಬಗ್ಗೆ ಉಪನ್ಯಾಸ ನೀಡಿದರು.



ಕಾರ್ಯಕ್ರಮದಲ್ಲಿ (ಎಡದಿಂದ) ರೇಣುಕಾ ಶಿವಾಚಾರ್ಯ ಸ್ವಾಮೀಜಿ, ಈಶ್ವರ ಖಂಡ್ರೆ ಮತ್ತು ಶಿವರಾಜ್ ತಂಗಡಗಿ ಅವರು ರೇಣುಕಾಚಾರ್ಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಕಾರವಾರದಲ್ಲಿ 42 ಡಿಗ್ರಿ ತಲುಪಿದ ಉಷ್ಣಾಂಶ

ಪ್ರಜಾವಾಣಿ ವಾರ್ತೆ

ಕಾರವಾರ: ತಾಲ್ಲೂಕಿನ ಸಾವಂತವಾಡಾ ಹೋಬಳಿಯಲ್ಲಿ ಬುಧವಾರ ಗರಿಷ್ಠ ಉಷ್ಣಾಂಶ 42.9 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಬುಧವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ರಾಜ್ಯದಲ್ಲಿ ದಾಖಲಾದ ಗರಿಷ್ಠ ಮಟ್ಟದ ತಾಪಮಾನ ಇದು ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿಗಾ ಕೇಂದ್ರ (ಕೆಎಸ್‌ಎನ್‌ಎಂಡಿಸಿ) ತಿಳಿಸಿದೆ.

ಇದೇ ಭಾಗದ ಹೋಬಳಿಯಲ್ಲಿ 42.3 ಡಿಗ್ರಿ ಸೆಲ್ಸಿಯಸ್, ಕಿನ್ನರ ಹೋಬಳಿ ವ್ಯಾಪ್ತಿಯಲ್ಲಿ 41.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಜಿಲ್ಲೆಯ ಕರಾವಳಿ ಭಾಗದಲ್ಲಿ ಸೆಕೆಯ ಪ್ರಮಾಣ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ.

‘ಉಷ್ಣ ಅಲೆಯ ಪರಿಣಾಮ ತಾಪಮಾನದಲ್ಲಿ ಏರಿಕೆ ಆಗುತ್ತಿದೆ. ಕರಾವಳಿ ಭಾಗದಲ್ಲಿ 37 ರಿಂದ 38 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇದ್ದು, ಮುಂದಿನ 24 ಗಂಟೆಗಳಲ್ಲಿ ಹೆಚ್ಚಿನ ಬದಲಾವಣೆ ಆಗದು’ ಎಂದು ಕೆಎಸ್‌ಎನ್‌ಎಂಡಿಸಿ ತಿಳಿಸಿದೆ.

ಆದಿಚುಂಚನಗಿರಿ: ಸಿದ್ಧ ಸಿಂಹಾಸನ ಪೂಜೆ, ಜ್ವಾಲಾಪೀಠಾರೋಹಣ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ಆದಿಚುಂಚನಗಿರಿ ಜಾತ್ರಾ ಮಹೋತ್ಸವದ ಅಂಗವಾಗಿ ಬುಧವಾರ ಇಲ್ಲಿ ನಡೆದ ಜ್ವಾಲಾಪೀಠಾರೋಹಣ ಮತ್ತು ಸಿದ್ಧ ಸಿಂಹಾಸನ ಪೂಜೆಗಳಲ್ಲಿ ನೂರಾರು ಭಕ್ತರು ಸಾಕ್ಷಿಯಾದರು.

ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ಪರಶಿವನು ಬಂದು ತಪಸ್ಸು ಮಾಡಿದ ಸ್ಥಳವೇ ಜ್ವಾಲಾಪೀಠವಾಗಿದೆ ಎಂಬ ನಂಬಿಕೆಗೆ ಅನುಗುಣವಾಗಿ, ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರು ಬುಧವಾರ ರಾತ್ರಿ ಸರ್ವಾಲಂಕೃತರಾಗಿ ಪೂಜೆ ಸಲ್ಲಿಸಿ ಜ್ವಾಲಾಪೀಠಾರೋಹಣ ಮಾಡಿದರು. ‘ಕೈಲಾಸದಲ್ಲಿ ಪರಶಿವನನ್ನೇ ದರ್ಶನ ಮಾಡಿದಷ್ಟು ಪುಣ್ಯ ಪ್ರಾಪ್ತಿ ಆಗುತ್ತದೆ’ ಎಂಬ ನಂಬಿಕೆಯಿಂದ ಭಕ್ತರು ದರ್ಶನ ಪಡೆದರು.

ಸ್ವಾಮೀಜಿ ಸಿದ್ಧ ಸಿಂಹಾಸನದಲ್ಲಿ ಆಸೀನರಾಗಿ ದರ್ಶನ ನೀಡಿದರು. ನಂತರ, ಚಿನ್ನದ ಕಿರೀಟ ಧರಿಸಿ, ಸಾವಿರಾರು ಭಕ್ತರ ನಡುವೆ ಸಂಸ್ಕೃತ ಶಾಲೆಯ ವಟುಗಳ ವೇದಘೋಷದ ಮೆರವಣಿಗೆಯಲ್ಲಿ ಆಗಮಿಸಿ ಕಾಲಭೈರವೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿದರು.

ನಂತರ ಭಕ್ತರಿಗೆ ವಿಭೂತಿ ತಿಲಕವನ್ನಿಟ್ಟು ಆಶೀರ್ವದಿಸಿದರು. ಕ್ಷೇತ್ರದ ದೇವಾಲಯಗಳಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆದವು. ಮಠದ ವೇದಪಂಡಿತರು, ವಟುಗಳು, ಷೋಡೋಶೋಪಚಾರ ಪೂಜೆಗಳನ್ನು ನೆರವೇರಿಸಿದರು.



ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ನಡೆಯುತ್ತಿರುವ ಜಾತ್ರಾ ಮಹೋತ್ಸವದ ಅಂಗವಾಗಿ ನಿರ್ಮಲಾನಂದನಾಥ ಸ್ವಾಮೀಜಿ ಅವರು ಬುಧವಾರ ಸಿದ್ಧ ಸಿಂಹಾಸನಾರೂಢರಾಗಿ ದರ್ಶನ ನೀಡಿದರು

ವಿಮಾ ಹಣ ಪಾವತಿಗೆ ನಿರಾಕರಣೆ ಐಡಿಬಿಐ ಬ್ಯಾಂಕಿಗೆ ₹10 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ರಾಯಚೂರು: ವಿಮಾ ಕಂತು ಸ್ವಯಂ ನವೀಕರಣದಿಂದ ಪಾವತಿಯಾಗಿದ್ದರೂ ಮೃತ ಮಹಿಳೆಯ ಪತಿಗೆ ವಿಮಾ ಹಣ ₹2 ಲಕ್ಷ ಪಾವತಿಸದ ಇಲ್ಲಿಯ ಐಡಿಬಿಐ ಬ್ಯಾಂಕಿಗೆ ರಾಯಚೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ₹10,000 ದಂಡ ವಿಧಿಸಿದೆ.

ನಗರದ ವಿಜಯ ಆನಂದಪ್ಪ ಅವರ ಪತ್ನಿ ವಸಂತಕುಮಾರಿ ಐಡಿಬಿಐ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ಹೊಂದಿದ್ದರು. ಪ್ರಧಾನಮಂತ್ರಿ ಜೀವನ ಬಿಮಾ ಯೋಜನೆಯಲ್ಲಿ (ಪಿ.ಎಂ.ಜೆ. ಬಿ.ವೈ) ₹2 ಲಕ್ಷ ವಿಮೆಯ ಪಾಲಿಸಿಯನ್ನು ಬ್ಯಾಂಕ್ ಮೂಲಕ ಪಡೆದಿದ್ದರು. ಅದಕ್ಕಾಗಿ ಪ್ರತಿ ವರ್ಷ ಬ್ಯಾಂಕ್ ಖಾತೆ ಮೂಲಕ ₹330 ವಿಮಾ ಕಂತು ಸ್ವಯಂ ಕಡಿತಗೊಳ್ಳುವಂತೆ ಮಾಡಿದರು.

ವಸಂತಕುಮಾರಿ 2020ರ ಮೇ 11ರಂದು ಮೃತಪಟ್ಟಿದ್ದರು. ಪತಿ ವಿಜಯ ಅವರು ₹2 ಲಕ್ಷ ವಿಮಾ ಮೊತ್ತ ಪಾವತಿಸುವಂತೆ ಐಡಿಬಿಐ ಬ್ಯಾಂಕ್‌ಗೆ ಮನವಿ ಮಾಡಿದ್ದರು. ಖಾತೆ ಚಾಲ್ತಿಯಲ್ಲಿ ಇರದ ಕಾರಣ ಪಾಲಿಸಿ ರದ್ದಾಗಿದೆ. ವಿಮಾ ಮೊತ್ತ ಪಾವತಿಸಲು ಸಾಧ್ಯವಿಲ್ಲ ಎಂದು ಬ್ಯಾಂಕ್ ಅಧಿಕಾರಿಗಳು ಹೇಳಿದ್ದರು.

ನಂತರ ವಿಜಯ ಅವರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ನೀಡಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ ಆಯೋಗದ ಅಧ್ಯಕ್ಷ ಕೆ.ವಿ. ಸುರೇಂದ್ರಕುಮಾರ ಹಾಗೂ ಸದಸ್ಯ ಪ್ರಭುದೇವ ಪಾಟೀಲ ಅವರು, ನಿಷ್ಕ್ರಿಯ ಖಾತೆ ಎಂದು ಪರಿಗಣಿಸಿ ವಿಮಾ ಮೊತ್ತ ಕೊಡಲು ನಿರಾಕರಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ವಿಮಾ ಮೊತ್ತವನ್ನು ಬಡ್ಡಿ ಸಮೇತ ಪಾವತಿಸಬೇಕು ಎಂದು ಆದೇಶಿಸಿದ್ದಾರೆ.

ದೂರುದಾರರಿಗೆ ₹2 ಲಕ್ಷ ವಿಮಾ ಮೊತ್ತವನ್ನು ಬಡ್ಡಿ ಸಹಿತ ಪಾವತಿಸಬೇಕು. ಮಾನಸಿಕ ಹಿಂಸೆ ನೀಡಿರುವುದಕ್ಕೆ ₹10 ಸಾವಿರ ಮತ್ತು ದೂರಿನ ವೆಚ್ಚವಾಗಿ ₹5 ಸಾವಿರ ಪಾವತಿಸಬೇಕು ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ ಎಂದು ಜಿಲ್ಲಾ ಆಯೋಗದ ಪ್ರಭಾರ ಸಹಾಯಕ ರಿಜಿಸ್ಟ್ರಾರ್ ಅಣ್ಣಾರಾವ್ ಹಾಬಾಳಕರ್ ತಿಳಿಸಿದ್ದಾರೆ.

ಮರಾಠಿಯಲ್ಲಿ ಮಾತನಾಡದ ಪಿಡಿಒಗೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮರಾಠಿಯಲ್ಲೇ ಮಾತನಾಡಬೇಕು, ಮರಾಠಿಯಲ್ಲೇ ಸರ್ಕಾರಿ ದಾಖಲೆ ನೀಡಬೇಕು' ಎಂದು ತಿಪ್ಪಣ್ಣ ಡೋಕ್ರೆ ಎಂಬುವರು, ತಾಲ್ಲೂಕಿನ ಕಿಣಯೆ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ನಾಗೇಂದ್ರ ಪತ್ತಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ವಿಡಿಯೊ ತುಣುಕುಗಳು ಬುಧವಾರ ಎಲ್ಲೆಡೆ ಹರಿದಾಡಿವೆ.

ಗ್ರಾಮ ಪಂಚಾಯಿತಿ ಕಚೇರಿಗೆ ಬಂದ ತಿಪ್ಪಣ್ಣ ಡೋಕ್ರೆ, ಮರಾಠಿಯಲ್ಲೇ ದಾಖಲೆ ಕೊಡುವಂತೆ ಆಗ್ರಹಿಸಿದ್ದಾರೆ. ಅದಕ್ಕೆ ನಾಗೇಂದ್ರ ಪತ್ತಾರ, 'ನೀವು ಅರ್ಜಿ ಕೊಡಿ ಪರಿಶೀಲಿಸುವೆ' ಎಂದಿದ್ದಾರೆ.

'ನನಗೆ ಕನ್ನಡ ಬರುವುದಿಲ್ಲ, ಮರಾಠಿಯಲ್ಲೇ ಮಾತನಾಡು' ಎಂದು ತಿಪ್ಪಣ್ಣ ಹೇಳಿದಾಗ, 'ಇದು ಕರ್ನಾಟಕ, ಇಲ್ಲಿ ಕನ್ನಡದಲ್ಲೇ ಮಾತನಾಡಬೇಕು. ಕನ್ನಡದಲ್ಲೇ ದಾಖಲೆ ಕೊಡಬೇಕು. ನೀವು ಮೊದಲು ಕನ್ನಡದಲ್ಲಿ ಅರ್ಜಿ ಕೊಡಿ' ಎಂದು ನಾಗೇಂದ್ರ ಪ್ರತಿಕ್ರಿಯಿಸಿದ್ದಾರೆ. ಜಗಳ ತಾರಕಕ್ಕೇರಿದಾಗ, ಹೊಡೆಯುವುದಾಗಿ ತಿಪ್ಪಣ್ಣ ಬೆದರಿಕೆ ಒಡ್ಡಿದ್ದರು.

'ಮದ್ಯ ಕುಡಿದು ಬಂದು ಕೆಲಸಕ್ಕೆ ಅಡ್ಡಿಪಡಿಸಿದ್ದಲ್ಲದೇ, ಅವಾಚ್ಯ ಪದದಿಂದ ಬೈದಿದ್ದೀರಿ. ಈಗಲೇ ಪೊಲೀಸರನ್ನು ಕರೆಸುವೆ ಎಂದು ಹೇಳಿದಾಗ, ತಿಪ್ಪಣ್ಣ ಪರಾರಿಯಾದ. ಈ ಗ್ರಾಮದಲ್ಲಿ ಕೆಲವರು ನನಗೆ ಬೆದರಿಕೆ ಹಾಕಿದ್ದಾರೆ. ಪೊಲೀಸ್ ರಕ್ಷಣೆ ಬೇಕಿದೆ' ಎಂದು ನಾಗೇಂದ್ರ ತಿಳಿಸಿದ್ದಾರೆ.

ಡ್ರಗ್ಸ್ ಪೂರೈಕೆ: ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಗಳು ಹಾಗೂ ಸೆಲೆಬ್ರಿಟಿಗಳು ಆಯೋಜಿಸುತ್ತಿದ್ದ ಪಾರ್ಟಿಗಳಿಗೆ ಮಾದಕ ಪದಾರ್ಥಗಳನ್ನು ಪೂರೈಸುತ್ತಿದ್ದ ಆರೋಪದ ಅಡಿ ನಟಿಯರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದ್ದು, ಆ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಸಿಸಿಬಿ ಪೊಲೀಸರು ಸಿದ್ಧತೆ ನಡೆಸಿದ್ದಾರೆ.

'ನಟಿಯರಾದ ರಾಗಿಣಿ ದ್ವಿವೇದಿ, ಸಂಜನಾ ಗಲ್ರಾನಿ ಹಾಗೂ ಪ್ರಶಾಂತ್ ರಂಕ ವಿರುದ್ಧ ಸಿಸಿಬಿ ನೀಡಿದ್ದ ದೂರು ಆಧರಿಸಿ ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆ ಪ್ರಕರಣವನ್ನು ಹೈಕೋರ್ಟ್ ರದ್ದು-ಗೊಳಿಸಿತ್ತು. ಆ ಆದೇಶವನ್ನು ಪ್ರಶ್ನಿಸಿ, ಎರಡು ದಿನಗಳ ಒಳಗಾಗಿ ಮೇಲ್ಮನವಿ ಸಲ್ಲಿಸಲಾಗುವುದು. ದಾಖಲೆಗಳ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಮೇಲ್ಮನವಿ ಸಲ್ಲಿಸಲು ಗೃಹ ಹಾಗೂ ಕಾನೂನು ಇಲಾಖೆಯು ಸಮ್ಮತಿ ನೀಡಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ದೋಷಾರೋಪ ಪಟ್ಟಿಯಲ್ಲಿ ಆರೋಪಿಗಳ ಹೇಳಿಕೆಗಳು ಹಾಗೂ ಸಾಕ್ಷಿಗಳ ಹೇಳಿಕೆ ಹೊರತುಪಡಿಸಿದರೆ, ಅರ್ಜಿದಾರರು ಪಾರ್ಟಿ ಆಯೋಜಿಸಿದ್ದರು ಅಥವಾ ಡ್ರಗ್ಸ್ ಪೂರೈಸಿದ್ದರು ಎಂಬುದಕ್ಕೆ ಯಾವುದೇ ಸಾಕ್ಷ್ಯಾಧಾರ ಒದಗಿಸಿಲ್ಲ ಎಂದು ಹೇಳಿದ್ದ ನ್ಯಾಯಾಲಯ ಪ್ರಕರಣ-ವನ್ನು ರದ್ದುಗೊಳಿಸಿತ್ತು.

ಚಿನ್ನ ಕಳ್ಳಸಾಗಣೆ: ಮುಂಬೈ, ಚೆನ್ನೈನಲ್ಲಿ ಬಿಗಿಭದ್ರತೆ ನಂತರ ಕೆಐಎಎಲ್ ಬಳಕೆ

ಬೆಂಗಳೂರು ನೂತನ ಕಾರಸ್ಥಾನ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಬೈನಿಂದ ವಿಮಾನದ ಮೂಲಕ ಭಾರತಕ್ಕೆ ಚಿನ್ನ ಕಳ್ಳಸಾಗಣೆ ಮಾಡುವ ನೂತನ ಕೇಂದ್ರವಾಗಿ ಬೆಂಗಳೂರಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎಎಲ್) ಬಳಕೆಯಾಗುತ್ತಿರುವುದು ತನಿಖೆಯಲ್ಲಿ ಪತ್ತೆಯಾಗಿದೆ.


ರನ್ಯಾ ರಾವ್

'ಒಮ್ಮೆಗೇ 10–15 ಕೆ.ಜಿ.ಯಷ್ಟು ಚಿನ್ನವನ್ನು ಮುಂಬೈ ಮತ್ತು ಚೆನ್ನೈ ವಿಮಾನ ನಿಲ್ದಾಣಗಳ ಮೂಲಕ ಮಾತ್ರ ನಡೆಸಲಾಗುತ್ತಿತ್ತು. ಅದರಲ್ಲಿ ಭಾಗಿಯಾಗಿದ್ದ ವಿಮಾನ ನಿಲ್ದಾಣದ ಸಿಬ್ಬಂದಿ ಮತ್ತು ಕಸ್ಟಮ್ಸ್ ಅಧಿಕಾರಿಗಳನ್ನು ಬಂಧಿಸಿದ ನಂತರ, ಎರಡೂ ವಿಮಾನ ನಿಲ್ದಾಣಗಳ ಮೂಲಕ ಅಂತಹ ಕಳ್ಳಸಾಗಣೆ ಕಡಿಮೆಯಾಗಿತ್ತು' ಎನ್ನುತ್ತವೆ ಸಿಬಿಐ ಮೂಲಗಳು.

'ಆದರೆ ಆ ಜಾಲ ತನ್ನ ಕಾರ್ಯಾಚರಣೆಯನ್ನು ಕೆಐಎಎಲ್‌ಗೆ ಸ್ಥಳಾಂತರಿಸಿರುವ ಸಾಧ್ಯತೆ ಹೆಚ್ಚಿದೆ. ಇಲ್ಲಿ ಈ ರೀತಿಯ ಪ್ರಕರಣ ವರದಿಯಾಗದೇ ಇದ್ದುದರಿಂದ, ಸಿಕ್ಕಿಬೀಳುವ ಸಾಧ್ಯತೆ ಕಡಿಮೆ ಇತ್ತು. ಹೀಗಾಗಿ ಆರೇಳು ತಿಂಗಳಿಂದ ಕೆಐಎಎಲ್ ಮೂಲಕ ಕಳ್ಳಸಾಗಣೆ ನಡೆಸಿರುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

'ಈ ಜಾಲವು ಸಿಂಗಪುರದಿಂದಲೂ ಚಿನ್ನ ಕಳ್ಳಸಾಗಣೆ ಮಾಡಿರುವ ಬಗ್ಗೆ ಸುಳಿವು ದೊರೆತಿದೆ. ಹೀಗಾಗಿ ಆರೇಳು ತಿಂಗಳಲ್ಲಿ ದುಬೈ ಮತ್ತು ಸಿಂಗಪುರದಿಂದ ಪದೇ–ಪದೇ ಪ್ರಯಾಣ ಮಾಡಿರುವ ರಾಜತಾಂತ್ರಿಕ ಅಧಿಕಾರಿಗಳು, ಸಿಬ್ಬಂದಿ ಮತ್ತು ಅತಿಗಣ್ಯರ ವಿವರ ಕಲೆಹಾಕಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಆದೇಶ ಕಾಯ್ದಿರಿಸಿದ ಕೋರ್ಟ್

ನ್ಯಾಯಾಂಗ ಬಂಧನದಲ್ಲಿರುವ ರನ್ಯಾ ರಾವ್ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ಬುಧವಾರ ನಡೆಸಿದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ವಿಶ್ವನಾಥ್ ಸಿ.ಗೌಡರ್ ಅವರು, ಆದೇಶವನ್ನು ಕಾಯ್ದಿರಿಸಿದರು. ಶುಕ್ರವಾರ ಬೆಳಿಗ್ಗೆ ಆದೇಶ ಪ್ರಕಟಿಸುವುದಾಗಿ ಹೇಳಿದರು.

'ಶಿಷ್ಟಾಚಾರ ಸಿಬ್ಬಂದಿಯ ನೆರವು ಪಡೆದು ರನ್ಯಾ ಅವರು ಚಿನ್ನವನ್ನು ಕಳ್ಳಸಾಗಣೆ ಮಾಡಿದ್ದಾರೆ. ಆರೋಪಿಗೆ ಜಾಮೀನು ಮಂಜೂರು ಮಾಡಬಾರದು' ಎಂದು ಪ್ರಾಸಿಕ್ಯೂಷನ್ ಪರವಾಗಿ ವಕೀಲ ಮಧು ಎನ್. ರಾವ್ ಮನವಿ ಮಾಡಿದರು.

'ವಿಮಾನ ನಿಲ್ದಾಣದಲ್ಲಿ ಆರೋಪಿಯಿಂದ 14.2 ಕೆ.ಜಿ ಚಿನ್ನವನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಇದು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಷಯ ಆಗಿರುವುದರಿಂದ ರನ್ಯಾಗೆ ಜಾಮೀನು ನೀಡಬಾರದು. ಡಿಆರ್‌ಐ ತನಿಖೆಗೂ ಆರೋಪಿ ಸಹಕಾರ ನೀಡಿಲ್ಲ. ಈ ಪ್ರಕರಣದಲ್ಲಿ ದೊಡ್ಡಮಟ್ಟದ ಜಾಲ ಕಾರ್ಯ ನಿರ್ವಹಿಸಿದೆ. ಅನೇಕರ ಕೈವಾಡ ಇದೆ. ಹವಾಲ ಮೂಲಕ ವಹಿವಾಟು ನಡೆದಿದೆ' ಎಂದು ನ್ಯಾಯಾಧೀಶರ ಗಮನಕ್ಕೆ ತಂದರು.

'ರನ್ಯಾಗೆ ಸಹಾಯ ಮಾಡಲು ಪ್ರಯತ್ನಿಸಿದ ಶಿಷ್ಟಾಚಾರ ಸಿಬ್ಬಂದಿಯ ವಿಚಾರಣೆ ನಡೆಸಲಾಗಿದೆ. ಚಿನ್ನದ ಕಳ್ಳ ಸಾಗಣೆಗೆ ಸಂಬಂಧಿಸಿದಂತೆ ಕೆಲವು ಮಹತ್ವದ ಮಾಹಿತಿಗಳು ತನಿಖಾ ತಂಡಕ್ಕೆ ಸಿಕ್ಕಿವೆ. ರನ್ಯಾ ಬಳಿ ಯುನೈಟೆಡ್ ಅರಬ್ ಎಮಿರೇಟ್ಸ್ ನಿವಾಸಿ ಗುರುತಿನ ಚೀಟಿ ಸಹ ಪತ್ತೆಯಾಗಿದೆ' ಎಂದು ನ್ಯಾಯಾಲಯಕ್ಕೆ ತಿಳಿಸಿದರು.



ಮತ್ತೆ ಮೂವರ ತಪಾಸಣೆ: ವಿಮಾನ ನಿಲ್ದಾಣದ ಅಂತರ ರಾಷ್ಟ್ರೀಯ ಟರ್ಮಿನಲ್‌ನಿಂದ ಹೊರಬರುವಾಗ ರನ್ಯಾ ರಾವ್ ಅವರನ್ನು, ತಪಾಸಣೆಗೆ ಒಳಪಡಿಸುವುದನ್ನು ತಪ್ಪಿಸುವಲ್ಲಿ ನೆರವು ನೀಡಿದ್ದ ಮೂವರು ಸಿಬ್ಬಂದಿಯನ್ನು ಸಿಬಿಐ ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ.

ರಾಜ್ಯ ಪೊಲೀಸ್‌ನ ಶಿಷ್ಟಾಚಾರ ಸಿಬ್ಬಂದಿ ಮತ್ತು ಕಸ್ಟಮ್ಸ್ ಅಧಿಕಾರಿಗಳಿಗೆ ಈ ಮೊದಲೇ ಸಮನ್ಸ್ ನೀಡಲಾಗಿತ್ತು. ಅದ ರಂತೆ ಬುಧವಾರ ವಿಚಾರಣೆ ನಡೆಸಲಾಗಿದೆ. ತಪಾಸಣೆಯನ್ನು ಹೇಗೆ ತಪ್ಪಿಸಲಾಗುತ್ತಿತ್ತು ಎಂಬುದರ ವಿವರಣೆ ಪಡೆಯಲಾಗಿದೆ. ಹೀಗೆ ಮಾಡುವಂತೆ ಸೂಚನೆ ನೀಡಿದವರು ಯಾರು ಎಂಬುದರ ಬಗ್ಗೆ ಪ್ರಶ್ನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ನ್ಯಾಯಾಂಗ ಬಂಧನದಲ್ಲಿರುವ ರನ್ಯಾ ರಾವ್ ಅವರನ್ನು ತಮ್ಮ ಕಸ್ಟಡಿಗೆ ಪಡೆಯಲು ಸಿಬಿಐ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ. ಈ ಸಂಬಂಧ ಶೀಘ್ರವೇ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ದಾಂಪತ್ಯದಲ್ಲಿ ವೈಮನಸ್ಸು?: ರನ್ಯಾ ರಾವ್ ಮತ್ತು ಜತಿನ್ ಹುಕ್ಕೇರಿ ಅವರು 2024ರ ಅಕ್ಟೋಬರ್ 6 ರಂದು ಬೆಂಗಳೂರಿನಲ್ಲಿ ಬಾಸ್ಟಿನ್ ರೆಸ್ಟೊರೆಂಟ್‌ನಲ್ಲಿ ಭೇಟಿ ಆಗಿದ್ದರು. ಅ.23ರಂದು ರನ್ಯಾ, ಜತಿನ್ ನಿಶ್ಚಿತಾರ್ಥ ನಡೆದಿತ್ತು. ನ.27ರಂದು ತಾಜ್ ವೆಸ್ಟ್ ಎಂಡ್ ಹೋಟೆಲ್ ನಲ್ಲಿ ಮದುವೆಯಾಗಿದ್ದರು. ರನ್ಯಾ ಅವರು ಇತ್ತೀಚೆಗೆ ಹೆಚ್ಚಾಗಿ ವಿದೇಶಕ್ಕೆ ಹೋಗುತ್ತಿದ್ದರು. ಇದರಿಂದ ದಂಪತಿ ಮಧ್ಯೆ ವೈಮನಸ್ಸು ಉಂಟಾಗಿತ್ತು ಎಂದು ಹೇಳಲಾಗಿದೆ. ಜತಿನ್ ಹುಕ್ಕೇರಿ ಅವರನ್ನೂ ರೆವೆನ್ಯೂ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ.

ಗೌರವ್ ಗುಪ್ತ ನೇತೃತ್ವದಲ್ಲೇ ತನಿಖೆ

'ರನ್ಯಾ ರಾವ್ ವಿದೇಶ ಪ್ರಯಾಣದ ವೇಳೆ ಪೊಲೀಸ್ ಸಿಬ್ಬಂದಿ ಕರ್ತವ್ಯಲೋಪ ಎಸಗಿದ್ದು ಕಂಡುಬಂದಿದ್ದು ಪ್ರಕರಣದ ತನಿಖೆಯನ್ನು ಗೃಹ ಇಲಾಖೆ ಸಿಐಡಿಗೆ ಮಂಗಳವಾರ ವಹಿಸಿತ್ತು. ರಾಮಚಂದ್ರ ರಾವ್ ಅವರ ಪಾತ್ರದ ಕುರಿತೂ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರಿಗೆ ಜವಾಬ್ದಾರಿ ನೀಡಿತ್ತು. ಸಿಐಡಿ ತನಿಖೆ ಆದೇಶವನ್ನು ಗೃಹ ಇಲಾಖೆ ವಾಪಸ್ ಪಡೆದುಕೊಂಡಿದೆ. ಗೌರವ್ ಗುಪ್ತ ನೇತೃತ್ವದ ತಂಡವೇ ಎರಡೂ ಪ್ರಕರಣದ ತನಿಖೆ ನಡೆಸಲಿದೆ' ಎಂದು ಮೂಲಗಳು ಹೇಳಿವೆ.

ವಿಮಾನ ನಿಲ್ದಾಣ: ಕೇಂದ್ರದ್ದೇ ಹೊಣೆ

ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ: ವಿಮಾನ ನಿಲ್ದಾಣ, ವಾಯುಯಾನಗಳಿಗೆ ಸಂಬಂಧಿಸಿದಂತೆ ಎಲ್ಲ ಕಾಯ್ದೆಗಳನ್ನು ರೂಪಿಸುವ, ಎಲ್ಲ ಸ್ವರೂಪದ ಆಡಳಿತದ ಮೇಲ್ವಿಚಾರಣೆ ನಡೆಸುವ ಸಚಿವಾಲಯ

ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ: ವಿಮಾನ ನಿಲ್ದಾಣಗಳಿಗೆ ಸಂಬಂಧಿಸಿದ ಸಮಗ್ರ ಮೇಲ್ವಿಚಾರಣೆ ನಡೆಸುವ, ಎಲ್ಲ ನೀತಿ–ನಿಯಮಗಳನ್ನು ಅನುಷ್ಠಾನಕ್ಕೆ ತರುವ ಹೊಣೆಗಾರಿಕೆ ಕೇಂದ್ರ ಸರ್ಕಾರದ ಈ ಸಂಸ್ಥೆಯದ್ದು

ವಿಮಾನ ನಿಲ್ದಾಣ ಲಿಮಿಟೆಡ್: ಪ್ರತಿ ವಿಮಾನ ನಿಲ್ದಾಣದ ನಿರ್ವಹಣೆಗೆ ರಚಿಸಲಾದ ಪ್ರತ್ಯೇಕ ಕಂಪನಿ. ಇದರಲ್ಲಿ ವಿಮಾನಯಾನ ಸಚಿವಾಲಯದ, ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳು ಮತ್ತು ರಾಜ್ಯ ಸರ್ಕಾರದ ಪ್ರತಿನಿಧಿಗಳು ಇರುತ್ತಾರೆ

ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್): ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಈ ಪಡೆಯು ವಿಮಾನ ನಿಲ್ದಾಣದ ಕಾವಲು, ಪ್ರಯಾಣಿಕರ ತಪಾಸಣೆ, ಬ್ಯಾಗೇಜ್ ತಪಾಸಣೆಯ ಹೊಣೆ ನಿರ್ವಹಿಸುತ್ತದೆ

ಕಸ್ಟಮ್ಸ್ ವಿಭಾಗ: ಕೇಂದ್ರ ಪರೋಕ್ಷ ತೆರಿಗೆ ಮಂಡಳಿ ಅಡಿಯಲ್ಲಿ ಬರುವ ಕಸ್ಟಮ್ಸ್ ಇಲಾಖೆಯ ಸಿಬ್ಬಂದಿ ಈ ವಿಭಾಗವನ್ನು ನಿರ್ವಹಿಸುತ್ತಾರೆ. ವಿಮಾನ ನಿಲ್ದಾಣಗಳಲ್ಲಿ ಪಾಸ್‌ಪೋರ್ಟ್ ಮತ್ತು ವೀಸಾ ಪರಿಶೀಲನೆ, ಅಂತರರಾಷ್ಟ್ರೀಯ ವಿಮಾನಗಳ ಪ್ರಯಾಣಿಕರ ಬ್ಯಾಗೇಜ್ ತಪಾಸಣೆ, ಸರಕು ತಪಾಸಣೆ ಹೊಣೆ ಈ ಅಧಿಕಾರಿಗಳದ್ದು

ಆಫ್ರಿಕಾವರೆಗೂ ಚಿನ್ನದ ಜಾಡು

ಒಂದನೇ ಪುಟದಿಂದ...

'ಸಾಮಾನ್ಯವಾಗಿ ಕೆ.ಜಿಗಿಂತಲೂ ಸಣ್ಣ ಪ್ರಮಾಣದಲ್ಲಿ ಚಿನ್ನವನ್ನು ಬ್ಯಾಗೇಜ್‌ಗಳಲ್ಲಿ ಅಡಗಿಸಿ, ಪೇಸ್ಟ್, ಹಾಳೆ, ಯಂತ್ರೋಪಕರಣಗಳ ಬಿಡಿ ಭಾಗಗಳ ರೂಪದಲ್ಲಿ ಕಳ್ಳಸಾಗಣೆ ಮಾಡಲಾಗುತ್ತದೆ. ಆದರೆ ಒಮ್ಮೆಗೇ 10–15 ಕೆ.ಜಿ.ಯಷ್ಟು ಚಿನ್ನವನ್ನು ಕಳ್ಳಸಾಗಣೆ ಮಾಡುವುದು ಅಪರೂಪ. ಅತ್ಯಂತ ವ್ಯವಸ್ಥಿತ ಜಾಲದಿಂದಷ್ಟೇ ಈ ಮಟ್ಟದ ಕಳ್ಳಸಾಗಣೆ ನಡೆಸಲು ಸಾಧ್ಯವಾಗುತ್ತದೆ' ಎನ್ನುತ್ತವೆ ಸಿಬಿಐ ಮೂಲಗಳು.

'ರಾಜತಾಂತ್ರಿಕರಿಗೆ, ಅತಿಗಣ್ಯರಿಗೆ ಮತ್ತು ಶಿಷ್ಟಾಚಾರದ ಸವಲತ್ತು ಇರುವ ವ್ಯಕ್ತಿಗಳಿಗಷ್ಟೇ ವಿಮಾನ ನಿಲ್ದಾಣಗಳಲ್ಲಿ ಅಂತರರಾಷ್ಟ್ರೀಯ ಟರ್ಮಿನಲ್‌ಗಳಿಂದ ಹೊರಬರುವಾಗ ಕಸ್ಟಮ್ಸ್ ಅಧಿಕಾರಿಗಳ ತಪಾಸಣೆಯಿಂದ ವಿನಾಯಿತಿ ಸಿಗುತ್ತದೆ. ದೊಡ್ಡಮಟ್ಟದ ಕಳ್ಳಸಾಗಣೆಗೆ ಈ ಜಾಲವು, ಅಂತಹ ವಿನಾಯಿತಿ ಇರುವವರನ್ನೇ ಬಳಸಿಕೊಳ್ಳುತ್ತದೆ. ರನ್ಯಾ ರಾವ್ ಪ್ರಕರಣವೂ ಇಂಥದ್ದೇ ಒಂದು' ಎಂಬುದು ಮೂಲಗಳ ವಿವರಣೆ.

'2024ರ ಏಪ್ರಿಲ್‌ನಲ್ಲಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿದೇಶಿ ರಾಜತಾಂತ್ರಿಕ ಮಹಿಳಾ ಅಧಿಕಾರಿಯೊಬ್ಬರನ್ನು, ಖಚಿತ ಮಾಹಿತಿ ಮೇರೆಗೆ ಡಿಆರ್‌ಐ ಅಧಿಕಾರಿಗಳು ತಪಾಸಣೆಗೆ ಒಳಪಡಿಸಿದ್ದರು. ಆ ಮಹಿಳೆ ಬೆಲ್ಟ್, ರುಮಾಲು, ಒಳಉಡುಪು ಮತ್ತು ಹಾಳೆಗಳ ರೂಪದಲ್ಲಿ ದುಬೈನಿಂದ ಮುಂಬೈಗೆ 25 ಕೆ.ಜಿಯಷ್ಟು ಚಿನ್ನವನ್ನು ದೇಹದ ಮೇಲೆ ಹೊತ್ತು ಕಳ್ಳಸಾಗಣೆ ಮಾಡಿದ್ದರು. ಆನಂತರ ಅಂತಹ ಹಲವು ಪ್ರಕರಣಗಳನ್ನು ಪತ್ತೆ ಮಾಡಿ, ಚಿನ್ನವನ್ನು ವಶಕ್ಕೆ ಪಡೆಯಲಾಯಿತು' ಎನ್ನುತ್ತಾರೆ ತನಿಖಾಧಿಕಾರಿಗಳು.

ರನ್ಯಾಗೆ ಸ್ವಾಮೀಜಿ 'ಕೃಪೆ'

ಒಂದನೇ ಪುಟದಿಂದ...

ಕರಾವಳಿ ಮೂಲದ ಸ್ವಾಮೀಜಿ ಅವರೇ ಪ್ರಮುಖ ಸಂಚುಕೋರ ಎಂಬ ವಿಚಾರವು ಗೊತ್ತಾದ ಬಳಿಕ ತನಿಖಾಧಿಕಾರಿಗಳು ಪ್ರಕರಣದ ಬೆನ್ನು ಹತ್ತಿದ್ದಾರೆ.

'ಪ್ರಕರಣದಲ್ಲಿ ಸ್ವಾಮೀಜಿಯೊಬ್ಬರ ಪಾತ್ರವಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಸ್ವಾಮೀಜಿಯವರ ಬೆಂಗಳೂರು ನಿವಾಸದಲ್ಲೂ ಶೋಧ ನಡೆಸಿ, ದಾಖಲೆ ಹಾಗೂ ಚಿನ್ನವನ್ನು ವಶಕ್ಕೆ ಪಡೆಯಲಾಗಿದೆ. ಅಲ್ಲದೇ 'ರೆಡ್ ಕಾರ್ನರ್' ನೋಟಿಸ್ ಜಾರಿಗೂ ಸಿದ್ಧತೆ ನಡೆಸಲಾಗಿದೆ. ಅದಾದ ಮೇಲೆ ತನಿಖಾ ತಂಡವು ದುಬೈಗೆ ತೆರಳಿ, ಸ್ವಾಮೀಜಿ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಿದೆ' ಎಂದು ಮೂಲಗಳು ಖಚಿತ ಪಡಿಸಿವೆ.

'ಎರಡು ವರ್ಷಗಳ ಹಿಂದೆ ದುಬೈಗೆ ತೆರಳಿದ್ದ ಸ್ವಾಮೀಜಿ, ಅಲ್ಲಿಯೇ ನೆಲಸಿದ್ದಾರೆ. ದುಬೈನಲ್ಲೇ ಕಚೇರಿ ಸಹ ತೆರೆದಿದ್ದಾರೆ. ಪ್ರಭಾವಿ ರಾಜಕಾರಣಿಯೊಬ್ಬರಿಗೆ ಸ್ವಾಮೀಜಿಯೇ ರನ್ಯಾ ಅವರನ್ನು ಪರಿಚಯಿಸಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ಚಿನ್ನ ಸಾಗಣೆಗೆ ಸಂಬಂಧಿಸಿದಂತೆ ಸ್ವಾಮೀಜಿ ದುಬೈನಲ್ಲೇ ಕುಳಿತು ರನ್ಯಾ ರಾವ್ ಹಾಗೂ ತರುಣ್ ರಾಜು ಮೂಲಕ ಕಾರ್ಯಾಚರಣೆ ನಡೆಸುತ್ತಿದ್ದರು. ಸ್ವಾಮೀಜಿ ಅವರೇ ಮಧ್ಯವರ್ತಿಗಳ ಮೂಲಕ ಚಿನ್ನದ ಬಿಸ್ಕತ್‌ಗಳನ್ನು ತಲುಪಿಸುತ್ತಿದ್ದರು ಎಂಬುದಕ್ಕೆ ದಾಖಲೆಗಳು ಸಿಕ್ಕಿವೆ. ಆ ಮಾಹಿತಿ ಆಧರಿಸಿ ತನಿಖೆ ನಡೆಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

'ವ್ಯವಸ್ಥಿತ ಜಾಲವೊಂದು ಇದನ್ನು ನಡೆಸುತ್ತಿದೆ ಎಂಬುದು ಗೊತ್ತಾಗಿತ್ತು. ಈ ಸಂಬಂಧ ಇಂಟರ್‌ಪೋಲ್ ಮೂಲಕ ಹಲವು ನೋಟಿಸ್‌ಗಳನ್ನೂ ಹೊರಡಿಸಲಾಗಿದೆ. ಖಚಿತ ಸುಳಿವಿನ ಆಧಾರದಲ್ಲಿ ರನ್ಯಾ ರಾವ್ ಅವರನ್ನು ತಪಾಸಣೆಗೆ ಒಳಪಡಿಸಿದಾಗ, ಅವರೂ ಚಿನ್ನ ಕಳ್ಳಸಾಗಣೆ ಮಾಡುವಾಗ ಸಿಕ್ಕಿಬಿದ್ದರು. ರನ್ಯಾ ಪ್ರಕರಣಕ್ಕೂ ಈ ಹಿಂದಿನ ಪ್ರಕರಣಗಳಿಗೂ ಸಾಮ್ಯತೆ ಇರುವುದು ಪತ್ತೆಯಾಗಿದೆ' ಎಂಬುದು ಅವರ ಮಾಹಿತಿ.

'ಹೀಗೆ ತಂದ ಚಿನ್ನವನ್ನು ಯಾರು ಮಾರಾಟ ಮಾಡುತ್ತಿದ್ದಾರೆ, ದುಬೈ–ಅಬುಧಾಬಿಯಲ್ಲಿ ಕೈಬದಲಿಸಲು ವ್ಯವಸ್ಥೆ ಮಾಡುತ್ತಿರುವವರು ಯಾರು, ಇಲ್ಲಿ ಅದನ್ನು ಖರೀದಿಸುತ್ತಿರುವವರು ಯಾರು ಎಂಬ ದಿಕ್ಕಿನಲ್ಲಿ ತನಿಖೆ ನಡೆಯುತ್ತಿದೆ. ಆದರೆ ಹೀಗೆ ಕಳ್ಳಸಾಗಣೆ ಆಗಿ ಬರುವ ಚಿನ್ನದ ಬಹುಪಾಲು, ಆಭರಣಗಳ ರೂಪದಲ್ಲಿ ರಫ್ತಾಗುತ್ತಿದೆ ಎಂಬುದು ಗೊತ್ತಾಗಿದೆ. ಹೀಗಾಗಿ ಚಿನ್ನಾಭರಣ ರಫ್ತಿನಲ್ಲಿ ತೊಡಗಿರುವ ಕೆಲ ಉದ್ಯಮಿಗಳನ್ನೂ ತನಿಖೆಗೆ ಒಳಪಡಿಸಲಾಗುತ್ತಿದೆ' ಎನ್ನುತ್ತಾರೆ ತನಿಖಾಧಿಕಾರಿಗಳು.

'ಸಿಬಿಐ, ಇಡಿ ತನಿಖೆ ಮಾಡಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ ರನ್ಯಾ ರಾವ್ ಚಿನ್ನದ ಕಳ್ಳ ಸಾಗಣೆ ಪ್ರಕರಣದಲ್ಲಿ ಇಬ್ಬರು ಪ್ರಭಾವಿ ಸಚಿವರು ಇದ್ದಾರೆ ಎಂದು ಬಿಜೆಪಿ ಪದೇ ಪದೇ ಆರೋಪ ಮಾಡುವ ಬದಲು ಕೇಂದ್ರದ ಜತೆ ಮಾತನಾಡಿ ಇ.ಡಿ, ಸಿಬಿಐನಿಂದ ತನಿಖೆ ಮಾಡಿಸಲಿ ಎಂದು ಬಿಜೆಪಿ ಶಾಸಕ ಎಸ್‌.ಟಿ.ಸೋಮಶೇಖರ್ ಹೇಳಿದರು.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ತನಿಖಾ ಏಜೆನ್ಸಿಗಳು ಕೇಂದ್ರದ ಅಧೀನದಲ್ಲಿವೆ, ಬಿಜೆಪಿಯವರನ್ನು ತಡೆದವರು ಯಾರು' ಎಂದು ಪ್ರಶ್ನಿಸಿದರು.

'ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ರನ್ಯಾ ಕೆಐಎಡಿಬಿಯಿಂದ 12 ಎಕರೆ ಜಮೀನು ಪಡೆಯುವುದಕ್ಕೂ 6 ತಿಂಗಳು ಮೊದಲು ತಮ್ಮ ಬ್ಯಾಂಕ್ ಖಾತೆಗೆ ₹10 ಲಕ್ಷ ಸಂದಾಯ ಮಾಡಿಸಿಕೊಂಡಿದ್ದರು. ಈ ರೀತಿ ಹಣ ವರ್ಗಾವಣೆ ಮಾಡಿರುವುದು ಪ್ರಭಾವಿ ರಾಜಕಾರಣಿ ಎನ್ನಲಾಗಿದೆ. ರನ್ಯಾ ಮತ್ತು ಅವರ ಸಹೋದರ ಖುಷಬ್ ನಿರ್ದೇಶಕರಾಗಿದ್ದ ಕ್ಸಿರೋದಾ ಇಂಡಿಯಾ ಲಿಮಿಟೆಡ್‌ಗೆ ಈ ಜಮೀನು ನೀಡಲಾಗಿತ್ತು. ಆ ಪ್ರಭಾವಿ ರಾಜಕಾರಣಿ ಯಾರು? ಅವೆಲ್ಲಾ ತನಿಖೆಯಿಂದ ಹೊರಬರಲಿ' ಎಂದರು.

ಸುದ್ದಿ 2 ನಿಮಿಷ

ಬಳ್ಳಾರಿ: 21 ಸಾವಿರ ಪ್ರಮಾಣ ಪತ್ರ ಜಾಲಾಡಿದ ವಿಶ್ವವಿದ್ಯಾಲಯ

ಬಳ್ಳಾರಿ: ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ (ವಿಎಸ್‌ಕೆಯು) ಕುಲಪತಿ ಸಹಿ ನಕಲು ಮಾಡಿ ನೂರಾರು ಮಂದಿಗೆ ಘಟಿಕೋತ್ಸವದ ನಕಲಿ ಪ್ರಮಾಣ ಪತ್ರ ನೀಡಿರುವುದಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ತನಿಖಾ ತಂಡವು ಈವರೆಗೆ 21 ಸಾವಿರ ಪ್ರಮಾಣ ಪತ್ರಗಳನ್ನು ಜಾಲಾಡಿದೆ.

ಪ್ರತಿಯೊಂದು ಪ್ರಮಾಣಪತ್ರದ ಕ್ರಮ ಸಂಖ್ಯೆಗಳನ್ನು ಪರಿಶೀಲಿಸುತ್ತಿರುವ ತನಿಖಾತಂಡ, ಅನುಮಾನ ಕಂಡು ಬಂದ ಪ್ರಮಾಣ ಪತ್ರದ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

'ಈ ವರೆಗೆ 1 ಸಾವಿರಕ್ಕೂ ಹೆಚ್ಚು ನಕಲಿ ಪ್ರಮಾಣ ಪತ್ರಗಳು ತನಿಖೆ ವೇಳೆ ಸಿಕ್ಕಿವೆ. ಒಂದು ಪ್ರಮಾಣ ಪತ್ರಕ್ಕೆ ₹ 10 ಸಾವಿರ ಸಂಗ್ರಹಿಸಿದ್ದರೂ, ₹ 1 ಕೋಟಿಯಷ್ಟು ಅವ್ಯವಹಾರ ನಡೆದಿರುವ ಸಾಧ್ಯತೆ ಇದೆ' ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

2022ರಲ್ಲೇ ದೂರು: 'ನಕಲಿ ಪ್ರಮಾಣ ಪತ್ರದ ಕುರಿತು 2022ರಲ್ಲೇ ವಿದ್ಯಾರ್ಥಿಯೊಬ್ಬರು ವಿಶ್ವವಿದ್ಯಾಲಯಕ್ಕೆ ದೂರು ನೀಡಿದ್ದರು ಎನ್ನಲಾಗಿದೆ. ಆ ಸಂದರ್ಭದಲ್ಲಿ ದೂರನ್ನು ಯಾರೂ ಗಂಭೀರವಾಗಿ ಪರಿಗಣಿಸಿಲ್ಲ. ಉದ್ದೇಶ ಪೂರ್ವಕವಾಗಿಯೇ ಉಪೇಕ್ಷಿಸುವ ಸಾಧ್ಯತೆಗಳಿವೆ. ದೂರು ನಿರ್ಲಕ್ಷಿಸಿದ ಪರಿಣಾಮ ಅಕ್ರಮ ಇಲ್ಲಿವರೆಗೆ ನಡೆದು ಬಂದಿದೆ' ಎಂದು ಉನ್ನತ ಮೂಲಗಳು ಮಾಹಿತಿ ನೀಡಿವೆ.

3 ವಿಶ್ವದಾಖಲೆ ನಿರ್ಮಿಸಿದ ಬಾಲೆ



ಮಡಿಕೇರಿ: ತಾಲ್ಲೂಕಿನ ಮದೆ ಗ್ರಾಮದ ಬಿಜಿಎಸ್ ಮದೆನಾಡು ಶಾಲೆಯ 5ನೇ ತರಗತಿ ವಿದ್ಯಾರ್ಥಿನಿ ಸಿಂಚನಾ ಬುಧವಾರ ಮೂರು ಯೋಗಾಸನ ಪ್ರದರ್ಶಿಸಿ, 'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್'ಗೆ ಸೇರ್ಪಡೆಗೊಂಡಳು.


ಮಧ್ಯಪ್ರದೇಶದಿಂದ ಬಂದಿದ್ದ ಸಂಸ್ಥೆಯ ಏಷ್ಯಾ ವಿಭಾಗದ ಮುಖ್ಯಸ್ಥ ಡಾ.ಮನೀಷ್ ಬಿಷ್ಣೋಯಿ ಸಮ್ಮುಖದಲ್ಲಿ ಆಕೆ, ಡಿಂಬಾಸನದಲ್ಲಿ 15 ಮೀಟರ್ ದೂರ ಹೆಜ್ಜೆ ಇಟ್ಟಳು. ನಂತರ, 1 ನಿಮಿಷ 4 ಸೆಕೆಂಡ್‌ಲ ಉರಬ್ರಾಸನದಲ್ಲಿ ಹಾಗೂ 1 ನಿಮಿಷ 45 ಸೆಕೆಂಡ್‌ಗಳ ಕಾಲ ಮೃಗಮುಖಾಸನದಲ್ಲಿದ್ದು ದಾಖಲೆ ನಿರ್ಮಿಸಿದಳು.

ಪ್ರಮಾಣಪತ್ರ ವಿತರಿಸಿ ಮಾತನಾಡಿದ ಮನೀಷ್ ಬಿಷ್ಣೋಯಿ, 'ಇದೇ ಮೊದಲ ಬಾರಿಗೆ 11 ವರ್ಷದ ಬಾಲಕಿ 3 ವಿಶ್ವದಾಖಲೆ ಮಾಡಿದ್ದನ್ನು ನೋಡಿದೆ. ನಿಜಕ್ಕೂ ಅಚ್ಚರಿ ತಂದಿದೆ' ಎಂದರು.

ಬಾಲಕಿಗೆ ಯೋಗ ಕಲಿಸಿದ ತಾಯಿ ರೇಣುಕಾ ಹಾಗೂ ಪ್ರೋತ್ಸಾಹ ನೀಡಿದ ತಂದೆ ಕೀರ್ತಿಕುಮಾರ ಅವರನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಮೈಸೂರು ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ಶ್ಲಾಘಿಸಿದರು.

ರವೀಂದ್ರ ಭಟ್ಟಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ರವೀಂದ್ರ ಭಟ್ಟ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 2025ನೇ ಸಾಲಿನ 'ನಾಗಡಿಕೆರೆ ಕಿಟ್ಟಪ್ಪಗೌಡ ರುಕ್ಮಿಣಿ ತೀರ್ಥಹಳ್ಳಿ ದತ್ತಿ ಪ್ರಶಸ್ತಿ'ಗೆ 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರನ್ನು ಆಯ್ಕೆ ಮಾಡಲಾಗಿದೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿಯು ಈ ಆಯ್ಕೆ ನಡೆಸಿದೆ. ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ.

ಯಾವುದೇ ಆಮಿಷಕ್ಕೆ ಒಳಗಾಗದೆ ದಿಟ್ಟತನದಿಂದ ಸಮಾಜದ ನ್ಯೂನತೆ ತೋರಿಸುವ, ಕನ್ನಡ ಪತ್ರಿಕೋದ್ಯಮದಲ್ಲಿ ಮಹತ್ವದ ಕೆಲಸ ಮಾಡಿದ ಪತ್ರಕರ್ತರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ ಎಂದು ಕಸಾಪ ಪ್ರಕಟಣೆ ತಿಳಿಸಿದೆ.

15ರಂದು ಕೆಪಿಸಿಸಿ ಸಭೆ

ಬೆಂಗಳೂರು: ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ಉದ್ದೇಶದಿಂದ ಇದೇ 15ರಂದು ಕೆಪಿಸಿಸಿ ಪದಾಧಿಕಾರಿಗಳು, ಮುಂಚೂಣಿ ಘಟಕಗಳು ಮತ್ತು ವಿವಿಧ ವಿಭಾಗಗಳ ಅಧ್ಯಕ್ಷರ ಸಭೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕರೆದಿದ್ದಾರೆ.

ಕೆಪಿಸಿಸಿಯ 'ಭಾರತ್ ಜೋಡೊ' ಸಭಾಭವನದಲ್ಲಿ ಅಂದು ಸಂಜೆ 4.30ಕ್ಕೆ ಈ ಸಭೆ ನಡೆಯಲಿದೆ ಎಂದು ಜಿ.ಸಿ. ಚಂದ್ರಶೇಖರ್ ತಿಳಿಸಿದ್ದಾರೆ.

ರಾಜ್ಯದಲ್ಲಿ 900ಕ್ಕೂ ಹೆಚ್ಚು ಹೊಸ ಅರಣ್ಯ ಒತ್ತುವರಿ ಪ್ರಕರಣ

ತಾಳೆಯಾಗದ ಇಲಾಖೆ ಮಾಹಿತಿ

• ಯತೀಶ್ ಕುಮಾರ್ ಜಿ.ಡಿ

ಬೆಂಗಳೂರು: ರಾಜ್ಯ ಅರಣ್ಯ ಇಲಾಖೆ ಇತ್ತೀಚೆಗೆ ಬಿಡುಗಡೆ ಮಾಡಿದ ವಾರ್ಷಿಕ ವರದಿಯ ಪ್ರಕಾರ ರಾಜ್ಯದಲ್ಲಿ 900ಕ್ಕೂ ಹೆಚ್ಚು ಹೊಸ ಅರಣ್ಯ ಒತ್ತುವರಿ ಪ್ರಕರಣ ನಡೆದಿದ್ದು, ಇಲ್ಲಿವರೆಗೆ 1,22,201 ಪ್ರಕರಣಗಳು ದಾಖಲಾಗಿ 2,15,393.53 ಎಕರೆ ಅರಣ್ಯ ಪ್ರದೇಶ ಒತ್ತುವರಿ ಆಗಿದೆ.

312 ಪ್ರಕರಣಗಳೊಂದಿಗೆ ಧಾರವಾಡ ವೃತ್ತ ಪ್ರಥಮ ಸ್ಥಾನ ಪಡೆದಿದ್ದರೆ, 125 ಹೊಸ ಪ್ರಕರಣಗಳೊಂದಿಗೆ ಧಾರವಾರ ವೃತ್ತ ಎರಡನೇ ಸ್ಥಾನದಲ್ಲಿದೆ. 121 ಹಾಗೂ 103 ಹೊಸ ಪ್ರಕರಣಗಳೊಂದಿಗೆ ಶಿವಮೊಗ್ಗ ಹಾಗೂ ಕೆನರಾ ವೃತ್ತಗಳು ಕ್ರಮವಾಗಿ ಮೂರನೇ ಹಾಗೂ ನಾಲ್ಕನೇ ಸ್ಥಾನದಲ್ಲಿವೆ. ಆದರೆ ಇದೇ ವರದಿಯಲ್ಲಿ ರಾಜ್ಯದ ಯಾವುದೇ ಭಾಗದಲ್ಲೂ ಹೊಸ ಒತ್ತುವರಿ ಪ್ರಕರಣ ದಾಖಲಾಗಿಲ್ಲ ಎಂದು ಉಲ್ಲೇಖಿಸಲಾಗಿದೆ.

ಕಳೆದ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗಿನ ಮಾಹಿತಿ ಆಧರಿಸಿದ ವಾರ್ಷಿಕ ವರದಿಗೂ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ನೀಡಿರುವ ಉತ್ತರಕ್ಕೂ ಭಾರಿ ವ್ಯತ್ಯಾಸವಿದೆ. ಖಂಡ್ರೆ ಅವರು ರಾಜ್ಯದಲ್ಲಿ 2,43,634 ಎಕರೆ ಅರಣ್ಯ ಪ್ರದೇಶ ಒತ್ತುವರಿ ಆಗಿದೆ ಎಂದು ಕಾಂಗ್ರೆಸ್‌ನ ರಿಜ್ವಾನ್ ಅರ್ಷದ್ ಅವರಿಗೆ ವಿಧಾನಸಭೆಯಲ್ಲಿ ಉತ್ತರಿಸಿದ್ದರು. ವಿಧಾನಸಭೆಯಲ್ಲಿ ನೀಡಿದ ಒತ್ತುವರಿ ಮಾಹಿತಿಗೂ ವಾರ್ಷಿಕ ವರದಿಗೂ ತಾಳೆಯಾಗುತ್ತಿಲ್ಲ.

ಕೇಂದ್ರದ ನಿರ್ದೇಶನ: ಅರಣ್ಯ ಒತ್ತುವರಿಯು ಗಂಭೀರ ಸಮಸ್ಯೆಯಾಗಿದ್ದು, ಅವನ್ನು ಆದ್ಯತೆಯ ಮೇಲೆ ತೆರವು ಮಾಡಬೇಕೆಂದು ಸುಪ್ರೀಂಕೋರ್ಟ್ ನವೆಂಬರ್ 2001ರಲ್ಲಿಯೇ ಆದೇಶಿಸಿತ್ತು. ಈ ಆದೇಶವನ್ನು ಇರಿಸಿಕೊಂಡು ಕೇಂದ್ರದ



ಪರಿಸರ ಹಾಗೂ ಅರಣ್ಯ ಸಚಿವಾಲಯವು 2002 ರಲ್ಲೇ ಒತ್ತುವರಿ ತೆರವು ಪ್ರಕರಣಗಳನ್ನು ನಿರಂತರವಾಗಿ ಮೇಲ್ವಿಚಾರಣೆ ನಡೆಸಲು ವೃತ್ತ ಮಟ್ಟದಲ್ಲಿ ಸಿಎಫ್ ನೇತೃತ್ವದಲ್ಲಿ ಡಿಸಿಎಫ್, ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠರನ್ನು ಒಳಗೊಂಡ ಸಮಿತಿಯನ್ನು ರಚಿಸಬೇಕು ಮತ್ತು ಈ ಸಮಿತಿಯು ತ್ರೈಮಾಸಿಕವಾಗಿ ಸಭೆ ಸೇರಿ ಒತ್ತುವರಿ ತೆರವುಗೊಳಿಸಲು ಕ್ರಮಕೈಗೊಳ್ಳಬೇಕು ಎಂದು ಸೂಚಿಸಿತ್ತು. ಅಲ್ಲದೇ, ಹೊಸದಾಗಿ ಅರಣ್ಯ ಒತ್ತುವರಿ ತಡೆಯಲು ವಿಫಲರಾದಲ್ಲಿ ಡಿಸಿಎಫ್, ಜಿಲ್ಲಾಧಿಕಾರಿ ಹಾಗೂ ಎಸ್ಪಿ ಅವರನ್ನೇ ಹೊಣೆಗಾರರನ್ನಾಗಿ ಮಾಡಬೇಕೆಂದು ರಾಜ್ಯ ಸರ್ಕಾರಗಳಿಗೆ ಕೇಂದ್ರ ಪರಿಸರ ಸಚಿವಾಲಯ ಫೆಬ್ರುವರಿ 2004 ರಲ್ಲಿ ತಾಕೀತು ಮಾಡಿತ್ತು.

ಈ ನಿರ್ದೇಶನದ ಮೇರೆಗೆ ರಾಜ್ಯ ಸರ್ಕಾರವು ಅರಣ್ಯ ಸಂರಕ್ಷಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೇಂದ್ರ ಸ್ಥಾನದ ವಿಭಾಗೀಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಸದಸ್ಯ ಕಾರ್ಯದರ್ಶಿಯಾಗಿ ಹಾಗೂ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳನ್ನು ಸದಸ್ಯರನ್ನಾಗಿ ನೇಮಿಸಿ ಜಿಲ್ಲಾ ಮಟ್ಟದ ಸಮಿತಿಗಳನ್ನು ಆಗಸ್ಟ್ 2002 ರಲ್ಲಿ ಆದೇಶ ಹೊರಡಿಸಿತ್ತು. ಈ ಸಮಿತಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ಸೇರಿ ಒತ್ತುವರಿ ತೆರವಿಗೆ ಕ್ರಮ ತೆಗೆದುಕೊಂಡು ವರದಿಯನ್ನು ಅರಣ್ಯ ಇಲಾಖೆಗೆ ಸಲ್ಲಿಸಬೇಕು ಎಂದು ಆದೇಶ ಹೊರಡಿಸಿತ್ತು. ಆದರೆ ಕೆಲ ವಿಭಾಗದ ಸಿಎಫ್‌ಗಳು ಸಭೆಯನ್ನೇ ನಡೆಸಿಲ್ಲ ಎನ್ನುವುದು ಆರ್‌ಟಿಐನಿಂದ ಬಹಿರಂಗವಾಗಿದೆ.

ಧಾರವಾಡ ವೃತ್ತದಲ್ಲಿ 2020 ಏಪ್ರಿಲ್‌ನಿಂದ 2024 ಸೆಪ್ಟೆಂಬರ್‌ವರೆಗೆ ಅರಣ್ಯ ಸಂರಕ್ಷಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದೇ ಒಂದು ಜಿಲ್ಲಾ ಮಟ್ಟದ ಸಮಿತಿ ಸಭೆ ನಡೆದಿಲ್ಲ. ಇನ್ನು ಕೆನರಾ ವೃತ್ತದಲ್ಲಿ ಕೇವಲ ಎರಡು ಸಭೆಗಳನ್ನು ನಡೆಸಲಾಗಿದೆ. ಬೆಳಗಾವಿ ವೃತ್ತದಲ್ಲಿ ಇಂತಹ ಸಭೆ ನಡೆದ ಬಗ್ಗೆ ಮಾಹಿತಿಯೇ ಇಲ್ಲವೆಂದು ಮಾಹಿತಿ ಹಕ್ಕು ಕಾರ್ಯಕರ್ತರೊಬ್ಬರಿಗೆ ಉತ್ತರಿಸಿದ್ದಾರೆ.

'ಒತ್ತುವರಿ ತೆರವಿಗೆ ಜಿಲ್ಲಾಧಿಕಾರಿ, ಎಸ್‌ಪಿಗಳ ಜೊತೆ ಸಭೆಯೇ ನಡೆಯದಿದ್ದರೆ ಒತ್ತುವರಿ ತೆರವು ಹೇಗೆ ನಡೆಯುತ್ತದೆ. ಇಂತಹ ಸಿಸಿಎಫ್‌ಗಳ ವಿರುದ್ಧ ಅರಣ್ಯ ಇಲಾಖೆ ಕ್ರಮ ತೆಗೆದುಕೊಳ್ಳಬೇಕು. ಸುಪ್ರೀಂಕೋರ್ಟ್‌ನ ನಿರ್ದೇಶನವನ್ನು ಪಾಲಿಸದ ಈ ಅಧಿಕಾರಿಗಳಿಗೆ ಬಡ್ತಿ ತಡೆಹಿಡಿಯಬೇಕು ಹಾಗೂ ಈಗಿರುವ ಸ್ಥಳದಿಂದ ವರ್ಗಾವಣೆ ಮಾಡಿ ಸ್ಥಳ ತೋರಿಸಬಾರದು' ಎಂದು ಹೆಸರೇಳಲು ಬಯಸದ ಆರ್‌ಟಿಐ ಕಾರ್ಯಕರ್ತರು ಆಗ್ರಹಿಸಿದ್ದಾರೆ.

ಕೇಂದ್ರದ ನಿರ್ದೇಶನಕ್ಕೆ ಕ್ಯಾರೇ ಅನ್ನದ ರಾಜ್ಯ

ಹೊಸ ಒತ್ತುವರಿ ಪ್ರಕರಣಗಳ ಕುರಿತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಪರಿಸರ ಕಾರ್ಯಕರ್ತರು ಹಲವು ದೂರು ಸಲ್ಲಿಸಿದ್ದರೂ ಸಹ ಇಲ್ಲಿಯವರೆಗೆ ಯಾವುದೇ ಕ್ರಮವಾಗಿಲ್ಲ.

ಉದಾಹರಣೆಗೆ 2022-23 ನೇ ಸಾಲಿನಲ್ಲಿ 993 ಹೊಸ ಒತ್ತುವರಿ ಪ್ರಕರಣಗಳು ದಾಖಲಾಗಿದ್ದವು. ಅತೀ ಹೆಚ್ಚಿನ ಪ್ರಕರಣಗಳು ಬೆಂಗಳೂರು, ಬೆಳಗಾವಿ, ಹಾಸನ ಹಾಗೂ ಶಿವಮೊಗ್ಗ ವೃತ್ತಗಳಲ್ಲಿ ಕಂಡುಬಂದಿತ್ತು. ಒತ್ತುವರಿ ತಡೆಗಟ್ಟಲು ವಿಫಲರಾದ ಅರಣ್ಯಾಧಿಕಾಗಳ ವಿರುದ್ಧ ಕ್ರಮ ಜರುಗಿಸುವಂತೆ ಕೆಲ ಪರಿಸರವಾದಿಗಳು ಕೇಂದ್ರ ಸರ್ಕಾರಕ್ಕೆ ದೂರನ್ನು ನೀಡಿದ್ದರು. ದೂರಿನ ಕುರಿತು ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆಗೆ ಕಳೆದ ವರ್ಷದ ಜುಲೈ ತಿಂಗಳಲ್ಲಿ ಕೇಂದ್ರ ಸರ್ಕಾರದ ಅರಣ್ಯ ಸಂರಕ್ಷಣಾ ವಿಭಾಗ ನಿರ್ದೇಶನ ನೀಡಿದೆ. ಆದರೆ ಒತ್ತುವರಿ ತೆರವು ಸಂಪೂರ್ಣವಾಗಲಿಲ್ಲ, ತಪ್ಪಿತಸ್ಥ ಅಧಿಕಾರಿಗಳನ್ನು ಅದೇ ಹುದ್ದೆಗಳಲ್ಲಿ ಮುಂದುವರೆಸಲಾಗಿದೆ.

ಬೆಳಗಾವಿ ಹಾಗೂ ಧಾರವಾಡ ಅರಣ್ಯ ವೃತ್ತಗಳಲ್ಲಿ ಹೊಸ ಒತ್ತುವರಿಗಳನ್ನು ತಡೆಗಟ್ಟಲು ವಿಫಲರಾದ ಸಿಸಿಎಫ್ ಹಾಗೂ ಇತರ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರನ್ನು ನೀಡಲಾಗಿತ್ತು. ದೂರಿನ ಕುರಿತು ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಕೇಂದ್ರದ ಅರಣ್ಯ ಸಂರಕ್ಷಣಾ ವಿಭಾಗ ಕಳೆದ ವರ್ಷದ ಅಕ್ಟೋಬರ್‌ನಲ್ಲಿ ನಿರ್ದೇಶನ ನೀಡಿದೆ. ಕಾಳಿ ಹುಲಿ ಮೀಸಲು ಅರಣ್ಯದಲ್ಲಿ 2017 ರಿಂದ 2023 ರ ವರೆಗೆ ನಲವತ್ತಕ್ಕೂ ಹೆಚ್ಚು ಹೊಸ ಅರಣ್ಯ ಒತ್ತುವರಿ ಪ್ರಕರಣಗಳು ದಾಖಲಾಗಿದ್ದು ಸಿಸಿಎಫ್ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರನ್ನು ನೀಡಲಾಗಿತ್ತು. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೇಂದ್ರದ ಅರಣ್ಯ ಸಂರಕ್ಷಣಾ ವಿಭಾಗವು ಕಳೆದ ವರ್ಷದ ಆಗಸ್ಟ್‌ನಲ್ಲಿ ನಿರ್ದೇಶನ ನೀಡಿದೆ. ಆದರೆ ಈ ಪ್ರಕರಣಗಳಲ್ಲಿ ಯಾವುದೇ ಕ್ರಮವಾಗಿಲ್ಲ ಎಂದು ಅಧಿಕೃತ ಮೂಲಗಳಿಂದ ತಿಳಿದುಬಂದಿದೆ.

ಇನ್ನು ಬಿಳಿಗಿರಿರಂಗನ ಬೆಟ್ಟದ ಹುಲಿ ಮೀಸಲಿನ ಸರ್ವೆ ಸಂಖ್ಯೆ 4 ರಲ್ಲಿ ಅರಣ್ಯ ಒತ್ತುವರಿ ಆಗಿರುವ ಕುರಿತ ದೂರಿನ ಮೇರೆಗೆ ಜಂಟಿ ಸರ್ವೆ ನಡೆಸುವಂತೆ ಉಪ ಲೋಕಾಯುಕ್ತರು ನೀಡಿದ ನಿರ್ದೇಶನ ನೀಡಿ ವರ್ಷಗಳೇ ಉರುಳಿದ್ದರೂ ಸರ್ವೆ ಪೂರ್ಣಗೊಂಡಿಲ್ಲ. ಸರ್ವೆಯನ್ನು ಶೀಘ್ರವೇ ಪೂರ್ಣಗೊಳಿಸಿ ಒತ್ತುವರಿ ತೆರವು ಮಾಡಬೇಕೆಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಸೂಚಿಸಿದ್ದರೂ ಇಲ್ಲಿಯವರೆಗೆ ಯಾವುದೇ ಕ್ರಮವಾಗಿಲ್ಲ.

ಕಕ್ಕಿಂಜೆ: ಆಲಿಕಲ್ಲು ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ನಗರ ಹಾಗೂ ಜಿಲ್ಲೆಯ ವಿವಿಧೆಡೆ ಬುಧವಾರ ಸಂಜೆ ಗುಡುಗು, ಮಿಂಚು ಸಹಿತ ಮಳೆಯಾಯಿತು. ಜಿಲ್ಲೆಯ ಬಂಟ್ವಾಳ, ಉಳ್ಳಾಲ ಸುತ್ತಮುತ್ತ ಮಂಗಳೂರು ನಗರದಲ್ಲಿ ರಾತ್ರಿ 8 ಗಂಟೆ ಸುಮಾರಿಗೆ ರಭಸದ ಮಳೆ ಸುರಿಯಿತು. ಗುಡುಗು, ಸಿಡಿಲಿನ ಅಬ್ಬರ ಜೋರಾಗಿತ್ತು.

ಪಶ್ಚಿಮ ಘಟ್ಟದ ತಪ್ಪಲಿನ ಕಕ್ಕಿಂಜೆಯಲ್ಲಿ ಆಲಿಕಲ್ಲಿನ ಮಳೆಯಾಗಿದೆ. ಪುತ್ತೂರು ತಾಲ್ಲೂಕಿನಲ್ಲಿ ಪುತ್ತೂರು, ಕುಂಬ್ರ, ಸಂಪ್ಯ ಪ್ರದೇಶಗಳಲ್ಲಿ ಸುಮಾರು ಅರ್ಧ ಗಂಟೆ ಕಾಲ ಸಾಧಾರಣ ಮಳೆಯಾಗಿದೆ. ಮೂಡುಬಿದಿರೆಯಲ್ಲೂ ತುಂತುರು ಮಳೆಯಾಗಿದೆ. ಜಿಲ್ಲೆಯಲ್ಲಿ ಬುಧವಾರ ದಿನವಿಡೀ ವಿಪರೀತ ಬಿಸಿಲಿನಿಂದ ಕೂಡಿದ ವಾತಾವರಣ ಇತ್ತು.

ಉಡುಪಿ ಜಿಲ್ಲೆಯ ಪಡುಬಿದ್ರಿ, ಕಾರ್ಕಳದಲ್ಲಿಯೂ ಮಳೆಯಾಗಿದೆ.

ಚಿಕ್ಕಮಗಳೂರು ವರದಿ: ಕಳಸ ತಾಲ್ಲೂಕಿನ ಹಲವೆಡೆ ಸಂಜೆ ಮಳೆ ಸುರಿಯಿತು. ಮೂಡಿಗೆರೆ ಪಟ್ಟಣ, ಬಿಳಗುಳ, ಬಾಪುನಗರ ಪ್ರದೇಶಗಳಲ್ಲಿ ಅಲ್ಪ ಮಳೆಯಾಗಿದೆ. ಕಾಫಿತೋಟ ಉಳಿಸಿಕೊಳ್ಳಲು ಪರದಾಡುತ್ತಿರುವ ಬೆಳೆಗಾರರು ಕೊಂಚ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ಹಾಸನ ವರದಿ: ಜಿಲ್ಲಾ ಕೇಂದ್ರ ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ, ಹಿರೀಸಾವೆ, ಅರಸೀಕೆರೆ ತಾಲ್ಲೂಕಿನ ಜಾವಗಲ್‌ನಲ್ಲಿ ಹಲವೆಡೆ ಬುಧವಾರ ಸಂಜೆ ಗುಡುಗು ಸಹಿತ ಮಳೆಯಾಗಿದೆ. ಹಾಸನ ನಗರದಲ್ಲಿ ಸಂಜೆ 20 ನಿಮಿಷ ಮಳೆ ಸುರಿಯಿತು.

ಹಳೇಬೀಡು, ಆಲೂರು, ಸಕಲೇಶಪುರ, ಮೈಸೂರು ಜಿಲ್ಲೆಯ ನಂಜನಗೂಡು, ಕೊಡಗು ಜಿಲ್ಲೆಯ ಕೇರಳ ಗಡಿಭಾಗ ಮುನ್ರೋಟ್ ಅರಣ್ಯ ಪ್ರದೇಶ ಹಾಗೂ ಸೋಮವಾರಪೇಟೆ ತಾಲ್ಲೂಕಿನ ಅಲ್ಲಲ್ಲಿ ಮಳೆಯಾಗಿದೆ. ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಬಂಡೀಪುರ ಅಭಯಾರಣ್ಯ ಸೇರಿದಂತೆ ಹಂಗಳ, ತೆರಕಣಾಂಬಿ ಹೋಬಳಿ ವ್ಯಾಪ್ತಿ ಹಾಗೂ ಪಟ್ಟಣದಲ್ಲಿ ಮಳೆಯಾಯಿತು.


ಬೆಳ್ತಂಗಡಿ ತಾಲ್ಲೂಕಿನ ಕಕ್ಕಿಂಜೆಯಲ್ಲಿ ಬುಧವಾರ ಸಂಜೆ ಆಲಿಕಲ್ಲು ಮಳೆ ಸುರಿಯಿತು

ಬೇಲೆಕೇರಿ: 4 ತಾಸಿಗೂ ಹೆಚ್ಚು ಹೊತ್ತು ಗುಂಪಾಗಿ ನಿಂತ ದೋಣಿಗಳು

ವಾಣಿಜ್ಯ ಬಂದರು ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕಾರವಾರ: ಅಂಕೋಲಾ ತಾಲ್ಲೂಕಿನ ಕೇಣಿಯಲ್ಲಿ ಗ್ರೀನ್‌ಫೀಲ್ಡ್ ವಾಣಿಜ್ಯ ಬಂದರು ನಿರ್ಮಾಣ ಯೋಜನೆ ವಿರೋಧಿಸಿ ಪ್ರತಿಭಟನೆಯಲ್ಲಿ ನಿರತರಾಗಿರುವ ಮೀನುಗಾರರು ಬುಧವಾರ ಸಮುದ್ರದಲ್ಲಿ ದೋಣಿಗಳಲ್ಲಿ ಗುಂಪುಗುಂಪಾಗಿ ಸಾಗಿ, ಪ್ರತಿಭಟನೆ ನಡೆಸಿದರು.

'ಯೋಜನೆ ವಿರೋಧಿಸಿ ಪ್ರತಿಭಟಿಸುವ ಹಕ್ಕು ಕಸಿಯಲು ಉತ್ತರ ಕನ್ನಡ ಜಿಲ್ಲಾಡಳಿತ ಭಾವಿಕೇರಿ ಗ್ರಾಮ ಪಂಚಾಯಿತಿ ಮತ್ತು ಕೇಣಿ ಗ್ರಾಮದ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದೆ. ಮೀನುಗಾರಿಕೆ ಚಟುವಟಿಕೆ ನಡೆಸಲು ಅಡ್ಡಿಪಡಿಸಿದೆ. ನೆಲದ ಮೇಲೆ ನಿಷೇಧಾಜ್ಞೆ ವಿಧಿಸಿದ್ದಕ್ಕೆ ಸಮುದ್ರದಲ್ಲಿ ಪ್ರತಿಭಟಿಸಿದ್ದೇವೆ' ಎಂದು ಹೋರಾಟಗಾರರಾದ ಶ್ರೀಕಾಂತ ದುರ್ಗೇಕರ ಮತ್ತು ಹುವಾ ಖಂಡೇಕರ ಹೇಳಿದರು.

'ಯೋಜನೆಯೊಂದನ್ನು ವಿರೋಧಿಸಿ ಸಮುದ್ರದಲ್ಲಿ ದೊಡ್ಡ ಮಟ್ಟದಲ್ಲಿ ಪ್ರತಿಭಟಿಸಿದ ಉದಾಹರಣೆ ರಾಜ್ಯದಲ್ಲಿ ಇಲ್ಲ. ಸರ್ಕಾರ ಈ ಪ್ರತಿಭಟನೆಯಿಂದಾದರೂ ಎಚ್ಚೆತ್ತು, ಮೀನುಗಾರರ ಸಂಕಷ್ಟ ಆಲಿಸಲಿ' ಎಂದರು.

ನಿಷೇಧಾಜ್ಞೆ ಹಿನ್ನೆಲೆಯಲ್ಲಿ ಕೇಣಿ ಗ್ರಾಮದಿಂದ 3 ಕಿ.ಮೀ ದೂರದ ಬೇಲೆಕೇರಿ ಸಮೀಪ ಸಮುದ್ರದಲ್ಲಿ ಪ್ರತಿಭಟಿಸಿದರು. 40ಕ್ಕೂ ಹೆಚ್ಚು ಪರ್ಸಿನ್, ನೂರಾರು ನಾಡದೋಣಿಗಳಲ್ಲಿ ಸಾಗಿದ್ದ ಮೀನುಗಾರರು ಸಮುದ್ರದಲ್ಲಿ 4 ಗಂಟೆ ಲಂಗರು ಹಾಕಿದರು. ಇದಕ್ಕೂ ಮುನ್ನ ಬೇಲೆಕೇರಿಯ ಸಮುದ್ರ ತೀರದಲ್ಲಿ ಮಹಿಳೆಯರು ಮಾನವ ಸರಪಳಿ ರಚಿಸಿದರು.

'ವಾಣಿಜ್ಯ ಬಂದರು ಯೋಜನೆ ಕೈಬಿಡಬೇಕು. ಸಮೀಕ್ಷೆ ಸ್ಥಗಿತಗೊಳಿಸಲು ಜೆಎಸ್‌ಡಬ್ಲ್ಯೂ ಕಂಪನಿಗೆ ಸೂಚಿಸಬೇಕು. ಇಲ್ಲದಿದ್ದರೆ ರಾಜ್ಯವ್ಯಾಪಿ ಮೀನುಗಾರ ಸಂಘಟನೆಗಳ ಬೆಂಬಲ ಪಡೆದು ಪ್ರತಿಭಟನೆ ತೀವ್ರಗೊಳಿಸುತ್ತೇವೆ' ಎಂದರು.

ಪ್ರತಿಭಟನಕಾರರ ಮನವೊಲಿಸಲು ಕುಮಟಾ ಉಪವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ ಅವರು ದೋಣಿಯಲ್ಲಿ ಸಾಗಿ ಸಮುದ್ರದಲ್ಲೇ ಮನವಿಪತ್ರ ಸ್ವೀಕರಿಸಿದರು. ಬೇಲೆಕೇರಿ ವ್ಯಾಪ್ತಿಯಿಂದ ಮೀನುಗಾರರು ಹೊರಹೋಗದಂತೆ ಪೊಲೀಸರು ದೋಣಿಗಳಲ್ಲಿ ಕಾವಲು ಕಾದಿದ್ದರು.


ಸಮುದ್ರದಲ್ಲಿ ಪ್ರತಿಭಟನೆಯಲ್ಲಿ ತೊಡಗಿದ್ದ ಮೀನುಗಾರರನ್ನು ನಿಯಂತ್ರಿಸಲು ಕರಾವಳಿ ಕಾವಲು ಪಡೆ ಪೊಲೀಸರು ಪ್ರಯತ್ನಿಸಿದರು

ಕಾರ್ಖಾನೆಗಳ ದೂಳಿಗೆ ಕಪ್ಪಾದ ಜನರ ಬದುಕು


ಕೊಪ್ಪಳ ತಾಲ್ಲೂಕಿನ ಕುಣಿಕೇರಿ ಗ್ರಾಮದಲ್ಲಿ ಬೆಳೆ ಮೇಲೆ ದೂಳು ಬಿದ್ದಿದ್ದನ್ನು ರೈತ ತೋರಿಸಿದರು – ಚಿತ್ರ/ಭರತ್ ಕಂದಕೂರ

• ಪ್ರಮೋದ ಕುಲಕರ್ಣಿ

ಆರೋಗ್ಯದ ಮೇಲೆ ಪರಿಣಾಮ

ಕೊಪ್ಪಳ: 'ಏಳು ಎಕರೆ ಕೆಂಪು ಮಣ್ಣಿನ ಫಲವತ್ತಾದ ನೀರಾವರಿ ಭೂಮಿಯಿದ್ದರೂ ಕಾರ್ಖಾನೆಗಳಿಂದ ಹೊರಬರುವ ದೂಳಿನಿಂದಾಗಿ ಬಿತ್ತನೆ ಮಾಡುವುದನ್ನೇ ಬಿಟ್ಟು 15 ವರ್ಷಗಳಾಗಿವೆ. ಕಣ್ಣೆದುರೇ ಸ್ವಂತ ಭೂಮಿಯಿದ್ದರೂ ಉಳುಮೆ ಮಾಡಲಾಗದ ಅಸಹಾಯಕ ಸ್ಥಿತಿ ನನ್ನದು...'

ಇದು ಕೊಪ್ಪಳ ತಾಲ್ಲೂಕಿನ ಕುಣಿಕೇರಿ ಗ್ರಾಮದ ರೈತ ರಮೇಶ ಡಂಬರಳ್ಳಿ ಅವರ ನೋವಿನ ಕಥೆ. ಇದೊಂದು ಉದಾಹರಣೆ ಯಷ್ಟೇ. ಇದೇ ರೀತಿ ಜಿಲ್ಲಾ ಕೇಂದ್ರದ ಸಮೀಪ ದಲ್ಲಿರುವ ಹಾಲವರ್ತಿ, ಅಲ್ಲಾನಗರ, ಚಿಕ್ಕಬಗನಾಳ, ಹಿರೇಬಗನಾಳ, ಕಾಸನಕಂಡಿ ಹೀಗೆ 20ಕ್ಕೂ ಹೆಚ್ಚು ಗ್ರಾಮಗಳ ಬಹಳಷ್ಟು ರೈತರ ಸಂಕಷ್ಟದ ಕಥೆಗಳು ಇದೇ ರೀತಿಯಿವೆ. ಹಿರಿಯರು ಮಾಡಿಟ್ಟ ಭೂಮಿಯಿದೆ. ಆದರೆ ಅದರಲ್ಲಿ ಕೃಷಿ ಮಾಡಲಾಗದ ಪರಿಸ್ಥಿತಿ ಇದೆ.

ಕೊಪ್ಪಳ ತಾಲ್ಲೂಕು ವ್ಯಾಪ್ತಿಯಲ್ಲಿ ಸಣ್ಣ, ಮಧ್ಯಮ ಮತ್ತು ಬೃಹತ್ ಪ್ರಮಾಣದ ಸೇರಿ ಒಟ್ಟು 202 ಕಾರ್ಖಾನೆಗಳು ಇವೆ. ಇವುಗಳಲ್ಲಿ ಬಹಳಷ್ಟು ಉಕ್ಕು ತಯಾರಿಕೆ ಮಾಡುತ್ತವೆ. ಅವೈಜ್ಞಾನಿಕವಾಗಿ ಮಾಡುವ ದೂಳು ವಿಲೇವಾರಿಯಿಂದಾಗಿ ಸುತ್ತಮುತ್ತಲಿನ ಗ್ರಾಮಗಳ ಭೂಮಿಯ ಫಲವತ್ತತೆ ಹಾಳಾಗಿ ಕೃಷಿ ಮತ್ತು ಜನರ ಆರೋಗ್ಯದ ಮೇಲೂ ಗಂಭೀರ ಪರಿಣಾಮ ಬೀರುತ್ತಿದೆ. ಕಾರ್ಖಾನೆಗಳಿಂದ ಉಸಿರಾಟದ ತೊಂದರೆ, ಅಸ್ತಮಾದಂಥ ಸಮಸ್ಯೆಗಳಾಗುತ್ತಿವೆ ಎನ್ನುತ್ತಾರೆ ಅಲ್ಲಾನಗರ ಗ್ರಾಮದ ನಿವಾಸಿ ಸರೋಜಮ್ಮ.

'ಗ್ರಾಮಗಳಲ್ಲಿ ಉಳಿದ ಭೂಮಿಯನ್ನಾದರೂ ಕಾರ್ಖಾನೆಯವರು ಖರೀದಿಸಿ ನಮ್ಮನ್ನು ಸ್ಥಳಾಂತರ ಮಾಡಿದರೆ ಒಳಿತು. ತೋಟದಲ್ಲಿ ಬೆಳೆ ಮೇಲೆ ಬೀಳುವ ಕಪ್ಪು ದೂಳು ಮೆತ್ತಿಕೊಂಡ ಫಸಲು ತಿಂದು ಜಾನುವಾರುಗಳು ಸಹ ಮೃತಪಟ್ಟಿವೆ.' ಎನ್ನುತ್ತಾರೆ ಹಿರೇಬಗನಾಳ ಗ್ರಾಮದ ನಿಂಗಪ್ಪ ಗೊಂದಿಹೊಸಳ್ಳಿ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಬಲ್ಡೋಟಾ ಸ್ಟೀಲ್ ಮತ್ತು ಪವರ್ ಲಿಮಿಟೆಡ್ (ಬಿಎಸ್‌ಪಿಎಲ್) ಸೇರಿದಂತೆ ಮೂರು ದೊಡ್ಡ ಕಂಪನಿಗಳ ಕಾರ್ಖಾನೆ ವಿಸ್ತರಣೆಗೆ ಸರ್ಕಾರದ ಜೊತೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಬಿಎಸ್‌ಪಿಎಲ್ ₹54 ಸಾವಿರ ಕೋಟಿ ವೆಚ್ಚದಲ್ಲಿ 1.50 ಕೋಟಿ ಟನ್ ಉತ್ಪಾದನಾ ಸಾಮರ್ಥ್ಯದ ಇಂಟಿಗ್ರೇಟೆಡ್ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಮುಂದಾಗಿದ್ದಕ್ಕೆ ಜನರ ವಿರೋಧ ವ್ಯಕ್ತವಾಗಿದೆ.

'ಇನ್ನಷ್ಟು ಕೈಗಾರಿಕೆಗಳು ಬಂದರೆ ಕೊಪ್ಪಳವನ್ನೇ ಸ್ಥಳಾಂತರ ಮಾಡಬೇಕಾಗುತ್ತದೆ. ಇರುವ ಕಾರ್ಖಾನೆಗಳು ಕಡ್ಡಾಯವಾಗಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮ ಪಾಲಿಸಬೇಕು' ಎಂದು ಚಿಕ್ಕಬಗನಾಳ ಗ್ರಾಮದ ರವಿಚಂದ್ರ ಹೇಳುತ್ತಾರೆ.

ಬಲ್ಡೋಟಾ ಕಾರ್ಖಾನೆ ವಿಸ್ತರಣೆ ವಿರೋಧಿಸಿ ಕೊಪ್ಪಳ ಹಿತರಕ್ಷಣಾ ವೇದಿಕೆ ಹಾಗೂ ಕೊಪ್ಪಳ ಬಚಾವೊ ಜನಾಂದೋಲನ ಸಮಿತಿ ವಿಚಾರ ಸಂಕಿರಣ ಹಾಗೂ ಹೋರಾಟಗಳನ್ನು ನಡೆಸುತ್ತಿವೆ.

ಕಾರ್ಖಾನೆಗಳಿಂದ ದೂಳು ಬರುತ್ತಿರುವ ಬಗ್ಗೆ ದೂರುಗಳು ಬಂದಿದ್ದವು. ಮೇಲಧಿಕಾರಿಗಳ ಗಮನಕ್ಕೆ ತರಲಾಗಿದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ತಂಡ ಕೈಗಾರಿಕೆಗಳಿಗೆ ಭೇಟಿ ನೀಡಿ ವರದಿ ಪಡೆದುಕೊಂಡಿದೆ

ವೈ.ಎಸ್. ಹರಿಶಂಕರ್, ಕೊಪ್ಪಳ ಪ್ರಾದೇಶಿಕ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ

ಭಾರತೀಯ ವೈದ್ಯಕೀಯ ಸಂಸ್ಥೆಯಿಂದ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಸಮಸ್ಯೆ ಅನುಭವಿಸುತ್ತಿರುವ ಗ್ರಾಮಗಳ ಜನರ ಆರೋಗ್ಯ ಸಮೀಕ್ಷೆ ಮಾಡಬೇಕು. ಜನರ ಆರೋಗ್ಯ ರಕ್ಷಣೆಗೆ ಮುಂದಾಗಬೇಕು

ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ ಜನಾಂದೋಲನ ಸಮಿತಿ ಪ್ರಧಾನ ಸಂಚಾಲಕ

'ಬೆಳೆಗಳ ಮೇಲೆ ಪರಿಣಾಮ'

'ಕಾರ್ಖಾನೆಗಳ ಕಪ್ಪು ದೂಳು ಎಲೆಗಳ ಮೇಲೆ ಬೀಳುವುದರಿಂದ ದ್ಯುತಿ ಸಂಶ್ಲೇಷಣೆ ಕ್ರಿಯೆ ಕುಂಠಿತವಾಗಿ ಉತ್ಪಾದನೆ ಮೇಲೆ ಪರಿಣಾಮ ಬೀಳುವ ಸಾಧ್ಯತೆಯಿರುತ್ತದೆ' ಎಂದು ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಶೋಧಕರ ತಂಡ ಹೇಳಿದೆ.

ಪಾಕ್ ಗಡಿ ಬಳಿ ಇಂಧನ ಪಾರ್ಕ್ ನಿರ್ಮಾಣ: ಅದಾನಿ ಸಮೂಹಕ್ಕೆ ಅನುಮತಿ ಪ್ರಶ್ನಿಸಿದ ವಿಪಕ್ಷಗಳು

ರಾಷ್ಟ್ರೀಯ ಭದ್ರತೆ ಜೊತೆ ರಾಜಿ: ಟೀಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಗುಜರಾತಿನ ಖಾಡ್ವಾ ಬಳಿ, ಪಾಕಿಸ್ತಾನಕ್ಕೆ ಹೊಂದಿಕೊಂಡಿರುವ ಗಡಿ ಸಮೀಪ ನವೀಕರಿಸಬಹುದಾದ ಇಂಧನ ಪಾರ್ಕ್ ನಿರ್ಮಾಣಕ್ಕೆ ಅದಾನಿ ಸಮೂಹಕ್ಕೆ ಅನುಮತಿ ನೀಡಿರುವ ವಿಚಾರ ಲೋಕಸಭೆಯಲ್ಲಿ ಬುಧವಾರ ಪ್ರತಿಧ್ವನಿಸಿತು.

ಈ ವಿಚಾರವಾಗಿ ಕೇಂದ್ರ ಸರ್ಕಾರ 'ತೃಪ್ತಿಕರ ಉತ್ತರ' ನೀಡುತ್ತಿಲ್ಲ ಹಾಗೂ ರಾಷ್ಟ್ರೀಯ ಭದ್ರತೆಯೊಂದಿಗೆ ರಾಜಿ ಮಾಡಿಕೊಂಡಿದೆ ಎಂದು ದೂರಿ ಕಾಂಗ್ರೆಸ್, ಡಿಎಂಕೆ ಸೇರಿದಂತೆ ವಿಪಕ್ಷಗಳ ಸಂಸದರು ಸಭಾತ್ಯಾಗ ಮಾಡಿದ್ದಕ್ಕೂ ಕಲಾಪವು ಸಾಕ್ಷಿಯಾಯಿತು.

ಇದಕ್ಕೂ ಮುನ್ನ, ಪ್ರಶ್ನೋತ್ತರ ಅವಧಿಯಲ್ಲಿ ಪೂರಕ ಪ್ರಶ್ನೆ ಕೇಳಿದ ಕಾಂಗ್ರೆಸ್‌ನ ಹಿರಿಯ ಸಂಸದ ಮನೀಶ್ ತಿವಾರಿ, 'ಪಾಕಿಸ್ತಾನಕ್ಕೆ ಹೊಂದಿಕೊಂಡಿರುವ ಅಂತರರಾಷ್ಟ್ರೀಯ ಗಡಿಯಿಂದ (ಐಬಿ) ಒಂದು ಕಿ.ಮೀ. ಅಂತರದಲ್ಲಿ ನವೀಕರಿಸಬಹುದಾದ ಇಂಧನ ಪ್ರಾಜೆಕ್ಟ್ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ. ಭದ್ರತೆಗೆ ಸಂಬಂಧಪಟ್ಟ ನಿಯಮಗಳ ಪ್ರಕಾರ, ಮೂಲಸೌಕರ್ಯಕ್ಕೆ ಸಂಬಂಧಿಸಿದ ಯಾವುದೇ ಬೃಹತ್ ಯೋಜನೆಯು ಅಂತರರಾಷ್ಟ್ರೀಯ ಗಡಿಯಿಂದ ಕನಿಷ್ಠ 10 ಕಿ.ಮೀ. ದೂರದಲ್ಲಿ ಇರಬೇಕು' ಎಂದು ಹೇಳಿದರು.

'ಉದ್ದೇಶಿತ ಈ ಪ್ರಾಜೆಕ್ಟ್‌ಗೆ ಏನಾದರೂ ವಿನಾಯಿತಿ ನೀಡಲಾಗಿದೆಯೇ' ಎಂದು ತಿವಾರಿ ಪ್ರಶ್ನಿಸಿದರು. ಈ ಮಾತಿಗೆ ದನಿಗೂಡಿಸಿದ ವಿಪಕ್ಷಗಳ ಸಂಸದರು, ನೂತನ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಮೇಲೆ ಮುಗಿಬಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಜೋಶಿ, 'ರಾಷ್ಟ್ರೀಯ ಭದ್ರತೆಯಂತಹ ವಿಚಾರ ಒಳಗೊಂಡ ಪ್ರಶ್ನೆಗಳಿಗೆ ನಾನು ಉತ್ತರಿಸುವುದಿಲ್ಲ' ಎಂದರು.

'ಇಂತಹ ಪ್ರಾಜೆಕ್ಟ್‌ಗಳಿಗೆ ಪರವಾನಗಿ ನೀಡುವುದಕ್ಕೂ ಮುನ್ನ ಕೇಂದ್ರ ಮತ್ತು ರಾಜ್ಯ ಸರ್ಕಾರ ಹಾಗೂ ಸಂಬಂಧಪಟ್ಟ ಸಂಸ್ಥೆಗಳಿಂದ ಅನುಮತಿ ಪಡೆಯಲಾಗುತ್ತದೆ' ಎಂದು ಜೋಷಿ ಹೇಳಿದರು.

ಸಚಿವರ ಉತ್ತರದಿಂದ ತೃಪ್ತರಾಗದ ಕಾಂಗ್ರೆಸ್ ಸದಸ್ಯರು, 'ರಾಷ್ಟ್ರೀಯ ಭದ್ರತೆ ಜೊತೆ ರಾಜಿ ಮಾಡಿಕೊಳ್ಳಲಾಗುತ್ತಿದೆ' ಎಂಬ ಘೋಷಣೆಗಳನ್ನು ಕೂಗುತ್ತಾ, ಸ್ಪೀಕರ್ ಮುಂದೆ ಬಂದು ಪ್ರತಿಭಟಿಸಿದರು. ಡಿಎಂಕೆ ಸದಸ್ಯರು ಕೂಡ ಪ್ರತಿಭಟನೆಗೆ ಸಾಥ್ ನೀಡಿದರು. ನಂತರ, ಕಾಂಗ್ರೆಸ್, ಡಿಎಂಕೆ ಹಾಗೂ ಇತರ ಕೆಲ ವಿಪಕ್ಷಗಳ ಸದಸ್ಯರು ಸದನದಿಂದ ಹೊರನಡೆದರು.

ಬಜೆಟ್ ಅಧಿವೇಶನ

ರಾಷ್ಟ್ರೀಯ ಭದ್ರತೆ ಹಾಗೂ ಇಂಧನ ಭದ್ರತೆ ಪ್ರಮುಖ ವಿಚಾರಗಳಾಗಿದ್ದು, ಒಂದಕ್ಕೊಂದು ಸಂಬಂಧ ಹೊಂದಿವೆ. ಇವುಗಳ ವಿಷಯದಲ್ಲಿ ನಿರ್ಲಕ್ಷ್ಯ ಸಲ್ಲ

ಮನೀಷ್ ತಿವಾರಿ, ಕಾಂಗ್ರೆಸ್ ಸಂಸದ

'ರಾಷ್ಟ್ರೀಯ ಭದ್ರತೆಗಿಂತಲೂ ಅದಾನಿ ಸಮೂಹ ಮಿಗಿಲೇ?'

ಸಭಾತ್ಯಾಗ ಮಾಡಿದ ಬಳಿಕ ಸಂಸತ್ ಭವನದ ಹೊರಗಡೆ ಸುದ್ದಿಗಾರರೊಂದಿಗೆ ಮಾತನಾಡಿದ ಕಾಂಗ್ರೆಸ್ ಸಂಸದರು, ಕೇಂದ್ರ ಸರ್ಕಾರ ಸಮರ್ಪಕ ಉತ್ತರ ನೀಡುತ್ತಿಲ್ಲ ಎಂದು ದೂರಿದರು.

ಲೋಕಸಭೆಯಲ್ಲಿ ಕಾಂಗ್ರೆಸ್ ಉಪನಾಯಕ ಗೌರವ್ ಗೊಗೊಯಿ,'ರಾಷ್ಟ್ರೀಯ ಭದ್ರತೆಗಿಂತಲೂ ಅದಾನಿ ಸಮೂಹ ಮಿಗಿಲೇ' ಎಂದು ಪ್ರಶ್ನಿಸಿದರು.

'ಗಡಿ ಸಮೀಪ ಯೋಜನೆಗೆ ಅನುಮತಿ ನೀಡುವುದಕ್ಕೆ ಸೇನೆ ಆತಂಕ ವ್ಯಕ್ತಪಡಿಸಿತ್ತು. ಆದರೆ, ಅದಾನಿ ಸಮೂಹಕ್ಕೆ ಲಾಭ ಮಾಡಿಕೊಡುವ ಉದ್ದೇಶದಿಂದ ಸೇನೆಯ ಮಾತನ್ನು ನಿರ್ಲಕ್ಷಿಸಲಾಗಿದೆ' ಎಂದು ಆರೋಪಿಸಿದರು.

'ರಾಷ್ಟ್ರೀಯ ಭದ್ರತೆ ಹೆಸರಿನಲ್ಲಿ ಮತ ಯಾಚನೆ ಮಾಡುವ ಪಕ್ಷವು, ಮೋದಿ ಅವರ ಆಪ್ತ ಸ್ನೇಹಿತನಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ರಾಷ್ಟ್ರೀಯ ಭದ್ರತೆಯೊಂದಿಗೇ ರಾಜಿ ಮಾಡಿಕೊಳ್ಳುತ್ತಿದೆ' ಎಂದರು.

'ರಾಷ್ಟ್ರೀಯ ಭದ್ರತೆ ಹಾಗೂ ಇಂಧನ ಭದ್ರತೆ ನಡುವೆ ಸಮತೋಲನ ಅಗತ್ಯ. ಗುಜರಾತ್‌ನ ಖಾವ್ಡಾ ಬಳಿ ನವೀಕರಿಸಬಹುದಾದ ದೊಡ್ಡ ಯೋಜನೆ ತಲೆ ಎತ್ತುತ್ತಿದೆ. ಈ ಸ್ಥಳವು ಪಾಕಿಸ್ತಾನ ಗಡಿಯಿಂದ ಕೇವಲ 1 ಕಿ.ಮೀ. ದೂರದಲ್ಲಿದೆ' ಎಂದು ಮನೀಷ್ ತಿವಾರಿ ಹೇಳಿದರು.

'ಈ ವಿಚಾರವಾಗಿ ನಾವು ಕೇಳಿದ ಪ್ರಶ್ನೆಗೆ ಕೇಂದ್ರ ಸರ್ಕಾರದಿಂದ ತೃಪ್ತಿಕರ ಉತ್ತರ ದೊರೆಯಲಿಲ್ಲ. ಹೀಗಾಗಿ, ಕಲಾಪವನ್ನು ಬಹಿಷ್ಕರಿಸಿದೆವು' ಎಂದರು.

'ದಿ ಗಾರ್ಡಿಯನ್'ನಲ್ಲಿ ವರದಿ

ಪಾಕಿಸ್ತಾನಕ್ಕೆ ಹೊಂದಿಕೊಂಡ ಗಡಿ ಸಮೀಪ ವಾಣಿಜ್ಯ ಉದ್ದೇಶದ ಯೋಜನೆ ಜಾರಿಗೆ ಅನುಮತಿ ನೀಡಿರುವ ಕುರಿತು 'ದಿ ಗಾರ್ಡಿಯನ್' ಪತ್ರಿಕೆ ಕಳೆದ ತಿಂಗಳು ವಿಶೇಷ ವರದಿ ಪ್ರಕಟಿಸಿತ್ತು.

ಕೆಲ ಖಾಸಗಿ ಸಂವಹನಗಳು ಹಾಗೂ ಗೋಪ್ಯ ದಾಖಲೆಗಳನ್ನು ಉಲ್ಲೇಖಿಸಿದ್ದ ಪತ್ರಿಕೆ,'ಭಾರತ–ಪಾಕಿಸ್ತಾನ ಗಡಿಯಲ್ಲಿನ ಸೂಕ್ಷ್ಮ ಪ್ರದೇಶವನ್ನು ವಾಣಿಜ್ಯ ಬಳಕೆಗೆ ಅನುವು ಮಾಡಿಕೊಡುವುದಕ್ಕಾಗಿ ರಕ್ಷಣಾ ಸಚಿವಾಲಯವು ಭದ್ರತೆಗೆ ಸಂಬಂಧಿಸಿದ ನಿಯಮಗಳಲ್ಲಿ ತಿದ್ದುಪಡಿ ತಂದಿದೆ' ಎಂದು ವರದಿ ಮಾಡಿತ್ತು.

ಕಳೆದ ತಿಂಗಳು ಈ ವಿಚಾರ ಪ್ರಸ್ತಾಪಿಸಿದ್ದ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಬಿಜೆಪಿಯ 'ಸುಳ್ಳು ರಾಷ್ಟ್ರೀಯವಾದದ ಮುಖವಾಡ' ಮತ್ತೊಮ್ಮೆ ಕಳಚಿ ಬಿದ್ದಿದೆ' ಎಂದಿದ್ದರು.

'ಭಾರತ–ಪಾಕಿಸ್ತಾನ ಗಡಿಯಲ್ಲಿ, ಸುಲಭವಾಗಿ ದಾಳಿಗೆ ತುತ್ತಾಗಬಹುದಾದ ಪ್ರದೇಶದ ವ್ಯಾಪ್ತಿಯಲ್ಲಿ ಖಾಸಗಿ ಕಂಪನಿಯೊಂದರ ಪ್ರಾಜೆಕ್ಟ್‌ಗೆ ಸರ್ಕಾರ ಏಕೆ ಅನುಮತಿ ನೀಡಬೇಕಿತ್ತು? ಗಡಿಯಲ್ಲಿ ರಕ್ಷಣಾ ಸಾಮರ್ಥ್ಯಗಳನ್ನು ಹೆಚ್ಚಿಸಬೇಕು ಹಾಗೂ ಶತ್ರು ರಾಷ್ಟ್ರಕ್ಕೆ ಅನುಕೂಲವಾಗುವುದನ್ನು ತಪ್ಪಿಸಬೇಕು' ಎಂದೂ ಖರ್ಗೆ ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

ವಿಷಯವಾರು ರ್‍ಯಾಂಕಿಂಗ್ ಪಟ್ಟಿಯಲ್ಲಿ ಐಐಎಂಬಿ, ಜೆಎನ್‌ಯು

ನವದೆಹಲಿ (ಪಿಟಿಐ): ಲಂಡನ್ ಮೂಲದ ಕ್ವಕ್ವರೆಲಿ ಸಿಮಂಡ್ಸ್ (ಕ್ಯೂಎಸ್) ಪ್ರಕಟಿಸಿರುವ ವಿಷಯವಾರು ರ್‍ಯಾಂಕ್ ಪಟ್ಟಿಯಲ್ಲಿ, ವಿಶ್ವದ ಟಾಪ್–50 ಸಂಸ್ಥೆಗಳ ಜೊತೆ ಭಾರತ ಒಂಬತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಸ್ಥಾನ ಪಡೆದಿವೆ. ಮೂರು ಐಐಟಿಗಳು, ಎರಡು ಐಐಎಂಗಳು ಮತ್ತು ಜೆಎನ್‌ಯು ಸ್ಥಾನವು ಇಳಿಕೆ ಆಗಿದೆ.

ಕ್ಯೂಎಸ್ ಸಂಸ್ಥೆಯು 'ಜಗತ್ತಿನ ವಿಶ್ವವಿದ್ಯಾಲಯಗಳ ವಿಷಯವಾರು ರ್‍ಯಾಂಕಿಂಗ್' ಪಟ್ಟಿಯ 15ನೆಯ ಆವೃತ್ತಿಯನ್ನು ಬುಧವಾರ ಬಿಡುಗಡೆ ಮಾಡಿದೆ. ರ್‍ಯಾಂಕ್ ಪಟ್ಟಿಗೆ ಭಾರತದ ಸಂಸ್ಥೆಗಳು ಹೆಚ್ಚಿನ ಪ್ರಮಾಣದಲ್ಲಿ ಹೊಸದಾಗಿ ಸೇರ್ಪಡೆ ಆಗಿರುವುದು ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ದೇಶವು ಬೆಳವಣಿಗೆ ಸಾಧಿಸುತ್ತಿರುವುದನ್ನು ಹೇಳುತ್ತಿದೆ ಎಂದು ಕ್ಯೂಎಸ್ ಸಂಸ್ಥೆಯ ಪ್ರಕಟಣೆ ಹೇಳಿದೆ.

ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ ಸಂಸ್ಥೆಗಳು: ಇಂಡಿಯನ್ ಸ್ಕೂಲ್ ಆಫ್ ಮೈನ್ಸ್ (ಧನಬಾದ್), ಐಐಟಿ ಬಾಂಬೆ, ಐಐಟಿ ಖರಗ್‌ಪುರ, ಐಐಟಿ ದೆಹಲಿ, ಐಐಟಿ ಬಾಂಬೆ, ಐಐಎಂ ಅಹಮದಾಬಾದ್, ಐಐಎಂ ಬೆಂಗಳೂರು, ಐಐಟಿ ಮದ್ರಾಸ್, ಜೆಎನ್‌ಯು

ಕೇಂದ್ರೀಯ ವಿ.ವಿಯಲ್ಲಿವೆ ಖಾಲಿ ಹುದ್ದೆಗಳು

ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ 2025ರ ಜ.1ರ ವರೆಗೆ ಇರುವ ಖಾಲಿ ಪ್ರಾಧ್ಯಾಪಕ ಹುದ್ದೆಗಳ ಮಾಹಿತಿಯನ್ನು ಶಿಕ್ಷಣ ಖಾತೆ ರಾಜ್ಯ ಸಚಿವ ಸುಖಂತ್ ಮಜುಂದಾರ್ ರಾಜ್ಯಸಭೆಗೆ ನೀಡಿದರು.

5,410 ಖಾಲಿ ಇರುವ ಒಟ್ಟು ಹುದ್ದೆಗಳು

788 ಪರಿಶಿಷ್ಟ ಜಾತಿಗೆ ಸೇರಿದ ಖಾಲಿ ಇರುವ ಮೀಸಲು ಹುದ್ದೆಗಳು

472 ಪರಿಶಿಷ್ಟ ವರ್ಗಕ್ಕೆ ಸೇರಿದ ಖಾಲಿ ಇರುವ ಮೀಸಲು ಹುದ್ದೆಗಳು

1,521 ಹಿಂದುಳಿದ ವರ್ಗಗಳಿಗೆ ಸೇರಿದ ಖಾಲಿ ಇರುವ ಮೀಸಲು ಹುದ್ದೆಗಳು

ಆಧಾರ: ಪಿಟಿಐ

ಮಣಿಪುರ: ಸಭೆ ವಿಫಲ

ಗುವಾಹಟಿ: ಮಣಿಪುರ ರಾಜ್ಯದಲ್ಲಿ ಜನರಿಗೆ ಮುಕ್ತ ಸಂಚಾರಕ್ಕೆ ಅವಕಾಶ ಇರಬೇಕು ಎಂದು ಕೇಂದ್ರ ಸರ್ಕಾರ ನೀಡಿರುವ ಸೂಚನೆಯ ವಿಚಾರವಾಗಿ ಕುಕಿ ಸಮುದಾಯದ ಸಂಘಟನೆಗಳು ಹಾಗೂ ಕೇಂದ್ರ ಗೃಹ ಸಚಿವಾಲಯದ ಪ್ರತಿನಿಧಿಗಳ ನಡುವೆ ನಡೆದ ಸಭೆಯು ಯಾವುದೇ ತೀರ್ಮಾನ ಕೈಗೊಳ್ಳಲು ವಿಫಲವಾಗಿದೆ.

ಚುರಾಚಾಂದ್‌ಪುರ ಜಿಲ್ಲಾಧಿಕಾರಿಯ ಕಚೇರಿಯಲ್ಲಿ ಮಂಗಳವಾರ ರಾತ್ರಿ ಮೂರು ತಾಸು ಸಭೆ ನಡೆಯಿತು ಎಂದು ಕುಕಿ ಸಂಘಟನೆಗಳ ಮೂಲಗಳು ಹೇಳಿವೆ. ಮಾರ್ಚ್ 8ರಂದು ಕಾಂಗ್‌ಪೋಕ್‌ಪಿ ಜಿಲ್ಲೆಯಲ್ಲಿ ಕುಕಿ ಸಮುದಾಯದ ಪ್ರತಿಭಟನಕಾರ ಮೃತಪಟ್ಟಿರುವ ವಿಚಾರವನ್ನು ಪ್ರಸ್ತಾಪಿಸಿ ಸಂಘಟನೆಗಳು, ಜಿಲ್ಲಾಧಿಕಾರಿಯ ಅಮಾನತಿಗೆ ಪಟ್ಟು ಹಿಡಿದವು.

ಮೈತೇಯಿ ಸಮುದಾಯದವರ ಜೊತೆಗಿನ ಸಂಘರ್ಷವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಪ್ರತ್ಯೇಕ ಆಡಳಿತ ವ್ಯವಸ್ಥೆಯನ್ನು ತಮಗೆ ಕಲ್ಪಿಸಬೇಕು ಎಂದು ಕೂಡ ಕುಕಿ ಪ್ರತಿನಿಧಿಗಳು ಒತ್ತಾಯಿಸಿದರು. ಮ್ಯಾನ್ಮಾರ್ ಜೊತೆಗೆ ಇದ್ದ ಮುಕ್ತ ಸಂಚಾರ ವ್ಯವಸ್ಥೆಯನ್ನು (ಎಫ್‌ಎಂಆರ್) ಮತ್ತೆ ಜಾರಿಗೆ ತರಬೇಕು ಎಂದು ಕೋರಿದರು.

ಸಭೆಯಲ್ಲಿ ಯಾವುದೇ ತೀರ್ಮಾನ ಆಗದ ಕಾರಣಕ್ಕೆ ಕುಕಿ ಸಂಘಟನೆಗಳು ಕೆಲವೆಡೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಸ್ತೆ ತಡೆ ಮುಂದುವರಿಸಿವೆ.

ಮಾನವ ಕಳ್ಳಸಾಗಣೆ ದಂಧೆ ಪತ್ತೆ: ಬಂಧನ

ಪ್ರಜಾವಾಣಿ ವಾರ್ತೆ

ಮುಂಬೈ: ಇಲ್ಲಿನ ಛತ್ರಪತಿ ಶಿವಾಜಿ ಮಹಾರಾಜ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸೋಮವಾರ ಬ್ರಿಟನ್‌ಗೆ ನಾಲ್ವರು ಪುರುಷರು ಮತ್ತು ಮೂವರು ಬಾಲಕಿಯರನ್ನು ಕಳ್ಳಸಾಗಣೆ ಮಾಡಲು ಯತ್ನಿಸಿದ ಆರೋಪದ ಮೇಲೆ ಹರಿಯಾಣದ 34 ವರ್ಷದ ವ್ಯಕ್ತಿಯನ್ನು ಸಿಐಡಿ ಪೊಲೀಸರು ಬಂಧಿಸಿದ್ದಾರೆ.

ಬಂಧಿತನನ್ನು ವಿರೇಂದ್ರ ಪ್ರೇಮ್ ಚಂದ್ ಎಂದು ಗುರುತಿಸಲಾಗಿದೆ. ಸಂತ್ರಸ್ತರನ್ನು ಹರಿಯಾಣ ಮತ್ತು ಪಂಜಾಬ್‌ನಲ್ಲಿರುವ ಅವರವರ ಮನೆಗಳಿಗೆ ಸುರಕ್ಷಿತವಾಗಿ ಸೇರಿಸಲಾಗಿದೆ.

ಬಂಧಿತ ಆರೋಪಿ ಪ್ರಾಧ್ಯಾಪಕನ ಸೋಗಿನಲ್ಲಿದ್ದ. ಸಂತ್ರಸ್ತರು, ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಸೋಗಿನಲ್ಲಿದ್ದರು. ಈ ತಂಡವು ಜಿದ್ದಾ ಮೂಲಕ ಲಂಡನ್‌ಗೆ ಪ್ರಯಾಣಿಸಲಿತ್ತು. ಇವರಲ್ಲಿ ಇಬ್ಬರು ಪ್ರವಾಸಿ ವೀಸಾದಡಿ ಲಂಡನ್‌ಗೆ ಪ್ರಯಾಣಿಸುತ್ತಿರುವುದು ಕಂಡು ಬಂದಿತು. ಇವರನ್ನು ವಲಸೆ ಅಧಿಕಾರಿಗಳು ಮೊದಲು ಬಂಧಿಸಿದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಯೋಧ್ಯೆ: ವಿವಿಧ ಮುನ್ನೆಚ್ಚರಿಕೆ ಕ್ರಮಗಳಿಗೆ ಮೊರೆ

ಹೋಳಿ: ನಮಾಜ್ ಸಮಯ ಬದಲು

ಅಯೋಧ್ಯಾ (ಪಿಟಿಐ): ಅಯೋಧ್ಯೆಯಲ್ಲಿ ನಡೆಯುವ ಹೋಳಿ ಆಚರಣೆ ಗಮನದಲ್ಲಿಟ್ಟುಕೊಂಡು, ಎಲ್ಲ ಮಸೀದಿಗಳಲ್ಲಿ ಶುಕ್ರವಾರದ ಪ್ರಾರ್ಥನೆಯನ್ನು ಮಧ್ಯಾಹ್ನ 2ರ ನಂತರ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಮುಸ್ಲಿಂ ಧರ್ಮದ ಪ್ರಮುಖ ಮುಖಂಡ ಮೊಹಮ್ಮದ್ ಹನೀಫ್ ಹೇಳಿದ್ದಾರೆ.

ಅಯೋಧ್ಯೆಯ ಮಸೀದಿ ಸರಾಯ್‌ನ ಮುಖ್ಯಸ್ಥರಾದ ಹನೀಫ್, 'ಹೋಳಿ ಆಚರಣೆಗೆ ಅಡ್ಡಿಯಾಗದ ರೀತಿಯಲ್ಲಿ ಶುಕ್ರವಾರದ ಪ್ರಾರ್ಥನೆಯನ್ನು ಮಧ್ಯಾಹ್ನ 2ರಿಂದ 4.30 ವರೆಗೆ ನಡೆಸಲು ಸಮಯ ನಿಗದಿ ಮಾಡುವಂತೆ ಎಲ್ಲ ಮಸೀದಿಗಳಿಗೆ ನಿರ್ದೇಶನ ನೀಡಲಾಗಿದೆ' ಎಂದಿದ್ದಾರೆ.

'ಹೋಳಿ ಹಬ್ಬ ಹಾಗೂ ಶುಕ್ರವಾರದ ಪ್ರಾರ್ಥನೆ ಒಟ್ಟೊಟ್ಟಿಗೆ ಬರುವುದು ಇದೇ ಮೊದಲ ಬಾರಿ ಏನಲ್ಲ. ವಿವಿಧ ಸಮುದಾಯಗಳ ನಡುವಿನ ಒಗ್ಗಟ್ಟನ್ನು ಗಟ್ಟಿಗೊಳಿಸಲು ಇಂತಹ ಸಂದರ್ಭಗಳು ನಮಗೆ ಅವಕಾಶ ಒದಗಿಸುತ್ತವೆ' ಎಂದೂ ಹನೀಫ್ ಹೇಳಿದ್ದಾರೆ.

ಮಾ.14ರಂದು ಹೋಳಿ ಆಚರಿಸಲಾಗುತ್ತದೆ. ಮಸೀದಿಗಳಲ್ಲಿನ ಪ್ರಾರ್ಥನೆ ಹಾಗೂ ಹೋಳಿ ಆಚರಣೆ ಒಂದೇ ಸಮಯದಲ್ಲಿ ನಡೆಯುವ ಕಾರಣ, ನಗರದಲ್ಲಿ ನಮಾಜ್ ಸಮಯ ಬದಲಾಯಿಸುವ ಕುರಿತು ಚರ್ಚೆಗಳು ನಡೆಯುತ್ತಿವೆ.

'ಹೋಳಿ ಅಂಗವಾಗಿ ನಗರದಲ್ಲಿ ವ್ಯಾಪಕ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿದೆ. ಕೋಮು ಗಲಭೆಗಳನ್ನು ತಡೆಯುವುದಕ್ಕಾಗಿ ಶಾಂತಿ ಸಭೆಗಳನ್ನು ಸಹ ನಡೆಸಲಾಗಿದೆ' ಎಂದು ಜಿಲ್ಲಾಧಿಕಾರಿ ಚಂದ್ರವಿಜಯ ಸಿಂಗ್ ಹೇಳಿದ್ದಾರೆ.

ಮಸೀದಿಗಳಿಗೆ ಟಾರ್ಪಾಲಿನ್ ಹೊದಿಕೆ


ಶಹಜಹಾನ್‌ಪುರದಲ್ಲಿ ಮಸೀದಿಯೊಂದಕ್ಕೆ ಟಾರ್ಪಲಿನ್ ಹೊದಿಸಲಾಗಿದೆ – ಪಿಟಿಐ ಚಿತ್ರ

ಶಹಜಹಾನ್‌ಪುರ: ನಗರದಲ್ಲಿ ಹೋಳಿ ಹಬ್ಬದ ಅಂಗವಾಗಿ ಹಮ್ಮಿಕೊಳ್ಳಲಾಗುವ ಐತಿಹಾಸಿಕ 'ಲಾಟ್ ಸಾಹೇಬ್' ಮೆರವಣಿಗೆ ಸಾಗುವ ಮಾರ್ಗದಲ್ಲಿನ ಮಸೀದಿಗಳನ್ನು ಟಾರ್ಪಾಲಿನ್‌ನಿಂದ ಮುಚ್ಚಲು ನಗರ ಪಾಲಿಕೆ ನಿರ್ಧರಿಸಿದೆ.

'ಲಾಟ್ ಸಾಹೇಬ್' ಮೆರವಣಿಗೆ ಸಾಗುವ ಮಾರ್ಗದಲ್ಲಿನ 20 ಮಸೀದಿಗಳಿಗೆ ಟಾರ್ಪಾಲಿನ್ ಹೊದಿಸಲಾಗುವುದು. ಈ ಮಾರ್ಗದುದ್ದಕ್ಕೂ 350 ಸಿ.ಸಿ.ಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ' ಎಂದು ಪಾಲಿಕೆ ಆಯುಕ್ತ ವಿಪಿನ್ ಕುಮಾರ್ ಮಿಶ್ರಾ ಹೇಳಿದ್ದಾರೆ.

'ಸುರಕ್ಷತೆ ದೃಷ್ಟಿಯಿಂದ ಮಸೀದಿಗಳು ಹಾಗೂ ಟ್ರಾನ್ಸ್‌ಫಾರ್ಮರ್‌ಗಳ ಬಳಿ ತಡೆಗೋಡೆಗಳನ್ನು ನಿರ್ಮಿಸಲಾಗಿದೆ' ಎಂದೂ ಹೇಳಿದ್ದಾರೆ.

'ಲಾಟ್ ಸಾಹೇಬ್' ಮೆರವಣಿಗೆ 18ನೇ ಶತಮಾನದಿಂದ ನಡೆದುಕೊಂಡು ಬರುತ್ತಿರುವ ಸಂಪ್ರದಾಯ. ಬ್ರಿಟಿಷ್ ಅಧಿಕಾರಿಯಂತೆ ವೇಷ ತೊಟ್ಟ ವ್ಯಕ್ತಿ ಎತ್ತಿನ ಗಾಡಿಯಲ್ಲಿ ಕುಳಿತುಕೊಂಡಿರುತ್ತಾನೆ. ಈ ಗಾಡಿ ಸಾಗುವಾಗ, ಜನರು ಈ ವ್ಯಕ್ತಿಯತ್ತ ಪಾದರಕ್ಷೆಗಳನ್ನು ಎಸೆಯುತ್ತಾರೆ. ಈ ವಿಧಿಯೊಂದಿಗೆ, ಹೋಳಿ ಆಚರಣೆಗೆ ಚಾಲನೆ ಸಿಗುತ್ತದೆ.

ಹೋಳಿ ವೇಳೆ ಸಮಾಧಾನದಿಂದ ಇರುವಂತೆ ಹೇಳಿದ್ದೇವೆ. ಯಾರಾದರೂ ಬಣ್ಣ ಎರಚಿದಲ್ಲಿ, ಮುಗುಳ್ನಕ್ಕು, 'ಹೋಳಿ ಮುಬಾರಕ್' ಎಂದು ಪ್ರತಿಕ್ರಿಯಿಸುವಂತೆ ಸೂಚಿಸಿದ್ದೇವೆ

ಮೊಹಮ್ಮದ್ ಹನೀಫ್, ಮುಸ್ಲಿಂ ಧರ್ಮಗುರು, ಅಯೋಧ್ಯೆ

ಕೆಪಿಎಸ್‌ಸಿ ಲೋಪ: ತಪ್ಪಿತಸ್ಥರಿಗೆ ಶಿಕ್ಷೆ – ಮುಖ್ಯಮಂತ್ರಿ

ಒಂದನೇ ಪುಟದಿಂದ...

'ಡಿ.29ರಂದು ಎರಡನೇ ಬಾರಿಗೆ ಪ್ರಾಥಮಿಕ ಪರೀಕ್ಷೆ ನಡೆಸಲಾಯಿತು. ಆ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲೂ ತಪ್ಪುಗಳಿರುವ ದೂರುಗಳಿವೆ. ಆರು ಪ್ರಶ್ನೆಗಳಲ್ಲಿ ತಪ್ಪುಗಳಾಗಿವೆ ಎಂದು ಆಯೋಗದ ವಿಷಯ ತಜ್ಞರ ಸಮಿತಿ ವರದಿ ನೀಡಿದೆ' ಎಂದರು.

ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದನ್ನು ತಪ್ಪಿಸಲು ಮೊದಲು ಕನ್ನಡದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಿ, ಬಳಿಕ ಇಂಗ್ಲಿಷ್‌ಗೆ ಭಾಷಾಂತರ ಮಾಡುವಂತೆ ಆಯೋಗಕ್ಕೆ ಸೂಚಿಸಲಾಗುವುದು ಎಂದು ಸಿದ್ದರಾಮಯ್ಯ ಪ್ರಕಟಿಸಿದರು.

ಪ್ರಶ್ನೆ ಪತ್ರಿಕೆಯಲ್ಲಿನ ಕನ್ನಡ ಭಾಷಾಂತರದಲ್ಲಿ ತಪ್ಪುಗಳಾಗುವುದನ್ನು ತಡೆಯಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೆಪಿಎಸ್‌ಸಿ ಸಹಯೋಗದಲ್ಲಿ ಕನ್ನಡ ಭಾಷಾ ತಜ್ಞರ ತಂಡವನ್ನು ರಚಿಸುವ ಪ್ರಸ್ತಾವವಿದೆ ಎಂದರು.

ಸುಧಾರಣೆಗೆ ಕ್ರಮ: 'ಕೆಪಿಎಸ್‌ಸಿ ದಕ್ಷ ಮತ್ತು ಪ್ರಾಮಾಣಿಕವಾಗಿ ನೇಮಕಾತಿ ಪರೀಕ್ಷೆಗಳನ್ನು ನಡೆಸಬೇಕು ಎಂಬುದು ನಮ್ಮ ಉದ್ದೇಶ. ಈ ಕಾರಣಕ್ಕಾಗಿಯೇ ಆಯೋಗದಲ್ಲಿ ಸುಧಾರಣೆ ತರುವ ಕುರಿತು ಅಧ್ಯಯನ ನಡೆಸಿ, ಸಲಹೆ ನೀಡಲು 2013ರಲ್ಲಿ ನಮ್ಮ ಸರ್ಕಾರವೇ ಪಿ.ಸಿ. ಹೋಟಾ ಸಮಿತಿಯನ್ನು ನೇಮಿಸಿತ್ತು. ಸಮಿತಿಯ ಶಿಫಾರಸಿನಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಈಗಲೂ ಕೆಪಿಎಸ್‌ಸಿಯಲ್ಲಿ ಸುಧಾರಣೆ ತರಲು ನಮ್ಮ ಸರ್ಕಾರ ಬದ್ಧವಾಗಿದೆ' ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

'ಕೆಪಿಎಸ್‌ಸಿ ಸ್ವಾಯತ್ತ ಸಾಂವಿಧಾನಿಕ ಸಂಸ್ಥೆ. ಸದಸ್ಯರನ್ನು ನೇಮಕ ಮಾಡುವ ಅಧಿಕಾರವಷ್ಟೇ ನಮ್ಮ ಬಳಿ ಇದೆ. ತೆಗೆದು ಹಾಕುವ ಅಧಿಕಾರ ಇಲ್ಲ. ಈಗ ಕೆಪಿಎಸ್‌ಸಿಯಲ್ಲಿ 16 ಸದಸ್ಯರಿದ್ದಾರೆ, ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡುವ ಬಗ್ಗೆ ಪರಿಶೀಲಿಸಿ, ನಿರ್ಧಾರ ಮಾಡಲಾಗುವುದು. ಕೇಂದ್ರ ಲೋಕಸೇವಾ ಆಯೋಗದ ಮಾದರಿಯ ಪರೀಕ್ಷಾ ಕ್ರಮ ಅಳವಡಿಸಲಾಗುವುದು' ಎಂದರು.

'ಕೆಪಿಎಸ್‌ಸಿ ಸದಸ್ಯರಾಗಲು ಶಿಫಾರಸು ಪತ್ರ ಹಿಡಿದು ಬರುವವರು ಪ್ರಾಮಾಣಿಕರಂತೆ ನಟಿಸುತ್ತಾರೆ. ಸಾಧ್ಯವಾದಷ್ಟೂ ಪ್ರಾಮಾಣಿಕವಾಗಿರುವವರನ್ನು ನೇಮಿಸಬೇಕು. ಸದಸ್ಯರ ನೇಮಕಕ್ಕೆ ಶೋಧನಾ ಸಮಿತಿ ರಚಿಸುವ ಬಗ್ಗೆಯೂ ಪರಿಶೀಲಿಸಿ, ನಿರ್ಧಾರ ಮಾಡಲಾಗುವುದು' ಎಂದು ಹೇಳಿದರು.

ತೀರ್ಪಿನ ಬಳಿಕ ಮುಂದಿನ ನಿರ್ಧಾರ: ಸಿ.ಎಂ

'ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಮುಖ್ಯ ಪರೀಕ್ಷೆ ನಡೆಸಲು ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿದೆ. ಅದನ್ನು ಪ್ರಶ್ನಿಸಿ ಅಭ್ಯರ್ಥಿಯೊಬ್ಬರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಹೀಗಾಗಿ ಮತ್ತೊಮ್ಮೆ ಪ್ರಾಥಮಿಕ ಪರೀಕ್ಷೆ ನಡೆಸುವ ಕುರಿತು ಈಗಲೇ ಹೇಳಲಾಗದು. ನ್ಯಾಯಾಲಯದ ತೀರ್ಪಿನ ಬಳಿಕ ಈ ಬಗ್ಗೆ ನಿರ್ಧಾರಕ್ಕೆ ಬರಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ಮರು ಪರೀಕ್ಷೆ ನಡೆಸುವಂತೆ ನ್ಯಾಯಾಲಯ ಆದೇಶಿಸಿದರೆ ಅದನ್ನು ಪಾಲಿಸುತ್ತೇವೆ. ಮರು ಪರೀಕ್ಷೆ ಬೇಡ ಎಂಬರ್ಥದಲ್ಲಿ ಆದೇಶ ನೀಡಿದರೆ ಸರ್ವ ಪಕ್ಷಗಳ ಸಭೆ ನಡೆಸಿ ನಿರ್ಧಾರ ಕೈಗೊಳ್ಳುತ್ತೇವೆ' ಎಂದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗಳ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ನಡೆಸಿದ ಪರೀಕ್ಷೆಯಲ್ಲಿ ಅಕ್ರಮ ಎಸಗಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣವೂ ನ್ಯಾಯಾಲಯದಲ್ಲಿದೆ. ಈ ಕುರಿತು ನ್ಯಾಯಾಲಯದ ತೀರ್ಪು ಪ್ರಕಟವಾದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

'ಯುಪಿಎಸ್‌ಸಿ ಮಾದರಿ ಪರೀಕ್ಷೆಗೆ ಕ್ರಮ'


ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪರೀಕ್ಷಾ ಲೋಪ ಕುರಿತು ವಿಧಾನಪರಿಷತ್‌ನಲ್ಲೂ ಉತ್ತರ ನೀಡಿದ ಸಿದ್ದರಾಮಯ್ಯ, ಯುಪಿಎಸ್‌ಸಿ ಮಾದರಿಯಲ್ಲಿ ಕೆಪಿಎಸ್‌ಸಿ ಪರೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಪರೀಕ್ಷಾ ಅವಾಂತರ, ಅಕ್ರಮಗಳಿಗೆ ಕೆಪಿಎಸ್‌ಸಿ ಕುಖ್ಯಾತಿ ಪಡೆದಿದೆ. ಸುಧಾರಣೆ ಮಾಡದಿದ್ದರೆ ರಾಜ್ಯದ ಆಡಳಿತ ಸೇವೆಯ ದಕ್ಷತೆ ಕುಸಿಯಲಿದೆ ಎಂದರು. ಬಿಜೆಪಿಯ ಸಿ.ಟಿ. ರವಿ ಮಾತನಾಡಿ, ಕೆಪಿಎಸ್‌ಸಿ ಪೂರ್ವಭಾವಿ ಪರೀಕ್ಷೆಯ ಒಎಂಆರ್ ಶೀಟ್ ಬದಲಾದ ಪ್ರಕರಣ ಕುರಿತೂ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

'ಮರು ಪರೀಕ್ಷೆ ನಡೆಸಿ'

'ಕೆಪಿಎಸ್‌ಸಿ ನಡೆಸಿದ ಮೊದಲ ಪ್ರಾಥಮಿಕ ಪರೀಕ್ಷೆಯಲ್ಲಿ ಕನ್ನಡ ಪ್ರಶ್ನೆ ಪತ್ರಿಕೆಯಲ್ಲಿ 59 ತಪ್ಪುಗಳಿದ್ದವು. ಎರಡನೇ ಪ್ರಾಥಮಿಕ ಪರೀಕ್ಷೆಯಲ್ಲಿನ ಪ್ರಶ್ನೆ ಪತ್ರಿಕೆಯಲ್ಲಿ 79 ತಪ್ಪುಗಳಿದ್ದವು. ಈ ವಿಚಾರದಲ್ಲಿ ಆಯೋಗದ ವಿಷಯ ತಜ್ಞರು ಸರ್ಕಾರಕ್ಕೆ ತಪ್ಪು ವರದಿ ನೀಡಿದ್ದಾರೆ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ದೂರಿದರು.

'ಎರಡು ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳ ಭವಿಷ್ಯ ಈ ಪರೀಕ್ಷೆಯಲ್ಲಿ ಅಡಗಿದೆ. ಮತ್ತೊಮ್ಮೆ ಪ್ರಾಥಮಿಕ ಪರೀಕ್ಷೆ ನಡೆಸಬೇಕು. ಅಭ್ಯರ್ಥಿಗಳಿಗೆ ವಯೋಮಿತಿ ಸಡಿಲಿಕೆಯನ್ನೂ ನೀಡಬೇಕು' ಎಂದು ಆಗ್ರಹಿಸಿದರು.

ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರು ಒಕ್ಕೊರಲಿನಿಂದ ಕೆಪಿಎಸ್‌ಸಿ ಕಾರ್ಯವೈಖರಿ ಕುರಿತು ಅಸಮಾಧಾನ ಹೊರಹಾಕಿದರು.



❦ ಸುಭಾಷಿತ ❦

ಬೊಗಳುವ ಎಲ್ಲ ನಾಯಿಗಳ ಬಳಿಯೂ ನಿಂತು, ನೀವು ಅವುಗಳಿಗೆ ಕಲ್ಲೆಸೆಯುತ್ತಾ ಸಾಗಿದರೆ ಎಂದಿಗೂ ಗುರಿ ಮುಟ್ಟಲಾರಿರಿ. ಬಿಸ್ಕತ್ತುಗಳನ್ನು ಜೊತೆಗಿಟ್ಟುಕೊಂಡು ಮುಂದೆ ಸಾಗುವುದು ಒಳ್ಳೆಯದು.

–ಧೀರೂಭಾಯಿ ಅಂಬಾನಿ

ರಾಜ್ಯಗಳ ವರಮಾನಕ್ಕೆ ಕತ್ತರಿ ಪ್ರತಿಗಾಮಿ ನಡೆ, ಅನುಚಿತ ಆಲೋಚನೆ

ಒಕ್ಕೂಟದ ತೆರಿಗೆ ವರಮಾನದಲ್ಲಿ ರಾಜ್ಯಗಳಿಗೆ ಕೊಡುವ ಪಾಲನ್ನು ಕಡಿಮೆ ಮಾಡುವಂತೆ ಕೇಂದ್ರ ಸರ್ಕಾರವು ಹಣಕಾಸು ಆಯೋಗಕ್ಕೆ ಹೇಳಲಿದೆ ಎಂಬ ವರದಿಗಳು ರಾಜ್ಯ ಸರ್ಕಾರಗಳ ತಲೆಬಿಸಿಗೆ ಕಾರಣವಾಗಿವೆ. ಈಗಿರುವ ನಿಯಮಗಳ ಪ್ರಕಾರ, ರಾಜ್ಯ ಸರ್ಕಾರಗಳಿಗೆ ಒಕ್ಕೂಟದ ತೆರಿಗೆ ಸಂಗ್ರಹದಲ್ಲಿ ಶೇಕಡ 41ರಷ್ಟು ಪಾಲು ಸಿಗುತ್ತಿದೆ. ಈ ಪಾಲನ್ನು ಶೇ 40ಕ್ಕೆ ತಗ್ಗಿಸಬೇಕು ಎಂದು ಕೇಂದ್ರವು ಆಯೋಗಕ್ಕೆ ಹೇಳಲಿದೆ ಎಂಬುದಾಗಿ ವರದಿಯಾಗಿದೆ. ಸಾಂವಿಧಾನಿಕವಾಗಿ ರಚನೆಯಾಗಿರುವ ಹಣಕಾಸು ಆಯೋಗವು ತೆರಿಗೆ ವರಮಾನವನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದ ನಡುವೆ ಹೇಗೆ, ಯಾವ ಪ್ರಮಾಣದಲ್ಲಿ ಹಂಚಿಕೊಳ್ಳಬೇಕು ಎಂಬುದರ ಬಗ್ಗೆ ಶಿಫಾರಸು ಮಾಡುತ್ತದೆ. ಅರವಿಂದ ಪನಗರಿಯಾ ನೇತೃತ್ವದ 16ನೇ ಹಣಕಾಸು ಆಯೋಗವು ಈಗ ತೆರಿಗೆ ವರಮಾನ ಹಂಚಿಕೆ ವಿಚಾರವಾಗಿ ಸಮಾಲೋಚನೆಗಳನ್ನು ನಡೆಸುತ್ತಿದೆ. ಆಯೋಗವು ತನ್ನ ಶಿಫಾರಸುಗಳನ್ನು ಅಕ್ಟೋಬರ್ 31ಕ್ಕೆ ಮೊದಲು ಸಲ್ಲಿಸಲಿದೆ. ಈ ಶಿಫಾರಸುಗಳು 2026-27ನೇ ಆರ್ಥಿಕ ವರ್ಷದಿಂದ ಜಾರಿಗೆ ಬರಲಿವೆ. ಒಕ್ಕೂಟದ ತೆರಿಗೆ ವರಮಾನದಲ್ಲಿ ರಾಜ್ಯಗಳ ಪಾಲು 1980ರಲ್ಲಿ ಶೇಕಡ 20ರಷ್ಟು ಇದ್ದಿದ್ದು ಈಗ ಶೇ 41ಕ್ಕೆ ಬಂದಿದೆ. ಅಂದರೆ ಇದು ಕಾಲ ಕಳೆದಂತೆಲ್ಲ ಹೆಚ್ಚುತ್ತಾ ಸಾಗಿದೆ. ತೆರಿಗೆ ವರಮಾನದಲ್ಲಿ ರಾಜ್ಯಗಳ ಪಾಲು ಶೇ 40ರಷ್ಟು ಇದ್ದಿದ್ದನ್ನು 15ನೇ ಹಣಕಾಸು ಆಯೋಗವು ಶೇ 41ಕ್ಕೆ ಹೆಚ್ಚು ಮಾಡಿತ್ತು.



ರಾಜ್ಯ ಸರ್ಕಾರಗಳು ಗಂಭೀರವಾದ ಹಣಕಾಸಿನ ಸಮಸ್ಯೆಗಳನ್ನು ಎದುರಿಸುತ್ತಿರುವ ಹೊತ್ತಿನಲ್ಲಿ ಇಂತಹ ಕ್ರಮಕ್ಕೆ ಮುಂದಾಗುವುದು, ಒಕ್ಕೂಟ ವ್ಯವಸ್ಥೆಯಲ್ಲಿನ ಸಂಬಂಧಕ್ಕೆ ಇನ್ನಷ್ಟು ಧಕ್ಕೆ ತರುತ್ತದೆ

ಕೇಂದ್ರ ಸರ್ಕಾರದ ವೆಚ್ಚಗಳು ಹೆಚ್ಚಾಗಿರುವುದರ ಪರಿಣಾಮವಾಗಿ, ಅದರಲ್ಲೂ ಮುಖ್ಯವಾಗಿ ಆರ್ಥಿಕ ಬೆಳವಣಿಗೆ ದರವು ತಗ್ಗಿರುವ ಈ ಸಂದರ್ಭದಲ್ಲಿ, ರಾಜ್ಯಗಳ ತೆರಿಗೆ ವರಮಾನದ ಪಾಲನ್ನು ಕಡಿಮೆ ಮಾಡುವಂತೆ ಆಯೋಗವನ್ನು ಕೋರಲಾಗುತ್ತದೆ ಎಂದು ವರದಿಗಳು ಹೇಳುತ್ತವೆ. 2024–25ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಶೇ 4.8ರಷ್ಟು ಇದೆ. ಇದೇ ಸಂದರ್ಭದಲ್ಲಿ ರಾಜ್ಯಗಳ ವಿತ್ತೀಯ ಕೊರತೆಯು ದೇಶದ ಜಿಡಿಪಿಯ ಶೇ 3.2ರಷ್ಟು ಇದೆ. ರಾಜ್ಯ ಸರ್ಕಾರಗಳು ಕೂಡ ಗಂಭೀರವಾದ ಹಣಕಾಸಿನ ಸಮಸ್ಯೆಗಳನ್ನು ಎದುರಿಸುತ್ತಿರುವ ಹೊತ್ತಿನಲ್ಲಿ ಅವುಗಳ ತೆರಿಗೆ ವರಮಾನದ ಪಾಲನ್ನು ಕಡಿಮೆ ಮಾಡುವಂತೆ ಹೇಳಲು ವಿತ್ತೀಯ ಕೊರತೆಯ ಪ್ರಮಾಣವು ಸರಿಯಾದ ಕಾರಣ ಆಗುವುದಿಲ್ಲ. 2017ರಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಜಾರಿಗೆ ಬಂದ ನಂತರದಲ್ಲಿ ತಮ್ಮ ವರಮಾನವನ್ನು ಹೆಚ್ಚು ಮಾಡಿಕೊಳ್ಳುವ ವಿಚಾರದಲ್ಲಿ ರಾಜ್ಯ ಸರ್ಕಾರಗಳ ಅಧಿಕಾರವು ಬಹಳ ಸೀಮಿತವಾಗಿದೆ. ತೆರಿಗೆ ವರಮಾನದಲ್ಲಿ ರಾಜ್ಯಗಳ ಪಾಲು ಶೇ 41ರಷ್ಟು ಇರುವುದನ್ನು ಶೇ 40ಕ್ಕೆ ಕಡಿಮೆ ಮಾಡಿದರೆ, ಕೇಂದ್ರ ಸರ್ಕಾರಕ್ಕೆ ಹೆಚ್ಚುವರಿಯಾಗಿ ₹ 35 ಸಾವಿರ ಕೋಟಿ ಸಿಗುತ್ತದೆ. ಆದರೆ, ರಾಜ್ಯಗಳ ವರಮಾನ ತಗ್ಗಿ ಅವುಗಳ ಪಾಲಿಗೆ ಸಮಸ್ಯೆ ಎದುರಾಗುತ್ತದೆ. ವಿವಿಧ ಸೆಸ್ ಹಾಗೂ ಸರ್ಚಾರ್ಜ್‌ಗಳ ಮೂಲಕ ತಾನು ಪಡೆಯುವ ವರಮಾನವನ್ನು ಕೇಂದ್ರ ಸರ್ಕಾರವು ರಾಜ್ಯಗಳ ಜೊತೆ ಹಂಚಿಕೊಳ್ಳುವುದಿಲ್ಲ. ಇಂತಹ ವರಮಾನವು ಕೇಂದ್ರದ ಒಟ್ಟು ವರಮಾನದ ಶೇಕಡ 15ರಷ್ಟು ಇದೆ. ಈ ವರಮಾನವನ್ನು ಕೂಡ ಲೆಕ್ಕಕ್ಕೆ ತೆಗೆದುಕೊಂಡರೆ, ರಾಜ್ಯಗಳ ಪಾಲಿಗೆ ಸಿಗುವುದು ಶೇ 41ಕ್ಕಿಂತ ಕಡಿಮೆ ಎಂಬ ಅಂದಾಜು ಇದೆ.

ಹಲವು ರಾಜ್ಯಗಳು ವರಮಾನ ಹಂಚಿಕೆಯ ಪ್ರಮಾಣವನ್ನು ಶೇ 41ರ ಬದಲು ಶೇ 50ಕ್ಕೆ ಹೆಚ್ಚಿಸಬೇಕು ಎಂಬ ಆಗ್ರಹ ಮಂಡಿಸಿವೆ. ವೆಚ್ಚಗಳು ಹೆಚ್ಚಾಗುತ್ತಿದ್ದರೂ ತಮಗೆ ವರಮಾನ ಹೆಚ್ಚಿಸಿಕೊಳ್ಳಲು ಮಾರ್ಗೋಪಾಯ ಇಲ್ಲದಿರುವುದನ್ನು ರಾಜ್ಯಗಳು ತಮ್ಮ ಆಗ್ರಹಕ್ಕೆ ಕಾರಣವನ್ನಾಗಿ ಉಲ್ಲೇಖಿಸಿವೆ. ಅರ್ಥ ವ್ಯವಸ್ಥೆಯಲ್ಲಿ ಸರ್ಕಾರಗಳಿಂದ ಆಗುವ ವೆಚ್ಚದಲ್ಲಿ ರಾಜ್ಯ ಸರ್ಕಾರಗಳ ಪಾಲು ಶೇ 60ಕ್ಕಿಂತ ಹೆಚ್ಚಿದೆ. ರಾಷ್ಟ್ರೀಯ ವರಮಾನಕ್ಕೆ ತಾವು ನೀಡುವ ಕೊಡುಗೆಗೆ ಹೋಲಿಸಿದರೆ ತಮಗೆ ಸಿಗುವ ಮೊತ್ತ ಬಹಳ ಕಡಿಮೆ ಎಂಬ ಅಸಮಾಧಾನವು ದಕ್ಷಿಣದ ರಾಜ್ಯಗಳಲ್ಲಿ ಈಗಾಗಲೇ ಇದೆ. ರಾಜ್ಯಗಳ ತೆರಿಗೆ ವರಮಾನದ ಪಾಲನ್ನು ತಗ್ಗಿಸುವ ಆಲೋಚನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ. ಹಣಕಾಸು ಆಯೋಗವನ್ನು ರಾಜ್ಯಗಳ ಹಕ್ಕು ಹತ್ತಿಕ್ಕುವ ಅಸ್ತ್ರವನ್ನಾಗಿ ಬಳಸಿಕೊಳ್ಳಲು ಕೇಂದ್ರ ಯತ್ನಿಸುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೇಂದ್ರದ ಆಲೋಚನೆಯು ಪ್ರತಿಗಾಮಿ. ಇದು ಒಕ್ಕೂಟ ವ್ಯವಸ್ಥೆಯಲ್ಲಿನ ಸಂಬಂಧವನ್ನು ಇನ್ನಷ್ಟು ಹಾಳು ಮಾಡುತ್ತದೆ.

ದಿನದ ಟ್ವೀಟ್

ಜಾಣತನದ ನಡೆ



ಬೆಂಗಳೂರಿನ ಬಿಎಂಟಿಸಿ ಬಸ್‌ನಲ್ಲಿ ಇಬ್ಬರು ಮಹಿಳೆಯರು ಕಳ್ಳತನ ಮಾಡುತ್ತಿದ್ದುದನ್ನು ಮಹಿಳಾ ಕಂಡಕ್ಟರ್ ಗಮನಿಸಿದರು. ಆದರೂ ಮೌನವಾಗಿಯೇ ಇದ್ದ ಅವರು, ಕಳ್ಳಿಯರು ಬಸ್‌ನಿಂದ ಇಳಿಯುವುದಕ್ಕೆ ಮುನ್ನ ಪೊಲೀಸರನ್ನು ಕರೆಸುವಲ್ಲಿ ಯಶಸ್ವಿಯಾದರು. ಯಲಹಂಕ ಬಸ್ ನಿಲ್ದಾಣದಲ್ಲಿ ಬಸ್ ಬಳಿ ಬಂದ ಪೊಲೀಸರು ಕಳ್ಳಿಯರನ್ನು ಬಂಧಿಸಿದರು.

ವಿನಯ್ ಭರತ್‌ರಾಜ್

ಕಿಡಿನುಡಿ

ಆಟೊರಿಕ್ಷಾ ಚಾಲಕರು ಪ್ರಯಾಣಿಕಸ್ನೇಹಿ ಆಗುವವರೆಗೆ ಮತ್ತು ಮೀಟರ್ ದರಕ್ಕೆ ಬದ್ಧರಾಗುವವರೆಗೆ ಅವರ ಯಾವ ಬೇಡಿಕೆಯನ್ನೂ ಪರಿಗಣಿಸಬಾರದು... ಅವರೊಂದಿಗಿನ ಎಲ್ಲ ಮಾತುಕತೆಯೂ ಷರತ್ತುಬದ್ಧವಾಗಿ ಇರಬೇಕು. ಹೆಚ್ಚುವರಿ ಹಣ ಕೇಳಿದರೆ ಅಥವಾ ಪ್ರಯಾಣಿಕರನ್ನು ಕರೆದೊಯ್ಯಲು ನಿರಾಕರಿಸಿದರೆ ಅವರ ಆಟೊ ಪರವಾನಗಿಯನ್ನು ಅಮಾನತುಗೊಳಿಸಬೇಕು.

(ಬೆಂಗಳೂರಿನಲ್ಲಿ ಆಟೊರಿಕ್ಷಾ ಚಾಲಕರ ಒಕ್ಕೂಟಗಳು ಕನಿಷ್ಠ ಪ್ರಯಾಣ ದರವನ್ನು ₹ 40ಕ್ಕೆ ಏರಿಸುವಂತೆ ಸರ್ಕಾರದ ಮುಂದೆ ಬೇಡಿಕೆ ಇರಿಸಿರುವುದಕ್ಕೆ ಪ್ರತಿಕ್ರಿಯೆ)

ವಾಸುದೇವ್

25 ವರ್ಷಗಳ ಹಿಂದೆ

ಸೋಮವಾರ, 13-3-2000

• **ಚಿಂತಾಮಣಿ ಬಳಿ 7 ಮಂದಿ ದಲಿತರ ಸಜೀವ ದಹನ**

ಕಂಬಾಲಪಲ್ಲಿ (ಚಿಂತಾಮಣಿ ತಾಲ್ಲೂಕು), ಮಾರ್ಚ್ 12 – ಸವರ್ಣೀಯರು ಹಾಗೂ ದಲಿತರ ನಡುವಿನ ಹಳೇ ವೈಷಮ್ಯ ಸ್ಫೋಟಗೊಂಡು ಮೂವರು ಮಹಿಳೆಯರೂ ಸೇರಿದಂತೆ ಏಳು ಮಂದಿ ದಲಿತರನ್ನು, ಮನೆಗೆ ಬೆಂಕಿ ಹಚ್ಚಿ ಸಜೀವ ದಹನ ಮಾಡಿರುವ ಅಮಾನುಷ ಘಟನೆ ಶನಿವಾರ ರಾತ್ರಿ ನಡೆದಿದೆ.

ಕೋಲಾರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಚಿಂತಾಮಣಿಯಿಂದ ಸುಮಾರು 30 ಕಿ.ಮೀ. ದೂರದ ಕಂಬಾಲಪಲ್ಲಿಯಲ್ಲಿ ಶನಿವಾರ ರಾತ್ರಿ ಸುಮಾರು ಎಂಟು ಗಂಟೆ ವೇಳೆಯಲ್ಲಿ ರೆಡ್ಡಿ ಸಮುದಾಯಕ್ಕೆ ಸೇರಿದ ಸುಮಾರು 200 ಜನರ ಗುಂಪು ಈ ದುಷ್ಕೃತ್ಯ ಎಸಗಿದೆ.

• **ಧಾರವಾಡ, ಹುಬ್ಬಳ್ಳಿಯಲ್ಲಿ ಲಘು ಭೂಕಂಪ**

ಹುಬ್ಬಳ್ಳಿ, ಮಾರ್ಚ್ 12– ಇಂದು ರಾತ್ರಿ 11.38ರ ಸುಮಾರಿಗೆ ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರದಲ್ಲಿ ಲಘು ಭೂಕಂಪವಾದ ಕಾರಣ ಜನಸಾಮಾನ್ಯರು ಭಯಭೀತರಾಗಿದ್ದಾರೆ.

ಸುಮಾರು ಐದರಿಂದ ಹತ್ತು ಸೆಕೆಂಡುಗಳವರೆಗೆ ಈ ಅನುಭವವಾಯಿತು.

ಇದ್ದಕ್ಕಿದ್ದಂತೆ ಕಟ್ಟಡಗಳು ನಡುಗಿದವು. ಪಾತ್ರೆಗಳು ಶಬ್ದ ಮಾಡಿದವು. ಟಿ.ವಿ.ಗಳು ಅಲ್ಲಾಡತೊಡಗಿದವು. ಭಯಭೀತರಾದ ಜನಸಾಮಾನ್ಯರು ಮನೆಯಿಂದ ಹೊರ ಬಂದು ನೆರೆಹೊರೆಯವರೊಂದಿಗೆ ವಿಚಾರಿಸತೊಡಗಿದರು. ಬಹುಮಹಡಿ ಕಟ್ಟಡಗಳಲ್ಲಿ ವಾಸವಾಗಿರುವವರಿಗೆ ಇದರ ಅನುಭವ ಹೆಚ್ಚಾಗಿ ಆಗಿದೆ.

50 ವರ್ಷಗಳ ಹಿಂದೆ

ಗುರುವಾರ, 13-3-1975

• **ನಗರದ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ ಉತ್ತರ– ದಕ್ಷಿಣ ಭೇದಭಾವ?**

ಬೆಂಗಳೂರು, ಮಾರ್ಚ್ 12– ಖ್ಯಾತ ಕೃಷಿ ತಜ್ಞರಿಂದ ಕೂಡಿದ, ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ ಉತ್ತರದವರು– ದಕ್ಷಿಣ ಭಾರತದವರು ಎಂಬ ಭೇದಭಾವವಿದೆಯೇ?

ಈ ಪ್ರಶ್ನೆಗೆ ಅವಕಾಶ ಕೊಡುವ ಕೆಲವು ವಿದ್ಯಮಾನಗಳು ಆ ಸಂಸ್ಥೆಯಲ್ಲಿ ಇತ್ತೀಚೆಗೆ ಕಾಣಿಸಿಕೊಂಡಿವೆ.

ಹಿರಿಯ ಅಧಿಕಾರಿಯೊಬ್ಬರು ಆ ಬಗ್ಗೆ ಪರಿಶೀಲನೆ ನಡೆಸಿದರೆಂದೂ ಹೇಳಲಾಗಿದೆ. ನೊಂದ ದಕ್ಷಿಣ ಭಾರತದ ಅಧಿಕಾರಿಗಳು ಕೆಲವರಿಗೆ ಅವರ ಪರಿಶೀಲನೆಯಿಂದ ತೃಪ್ತಿ ಆದಂತೆ ಕಾಣಲಿಲ್ಲ.

ಈ ಮಧ್ಯೆ ಸಂಸ್ಥೆಯಲ್ಲಿ ಎಲ್ಲವೂ ಸರಿಯಾಗಿಲ್ಲವೆಂದು ಆಪಾದಿಸಿ ಕೆಲವರು ದೂರು ನೀಡಿದ್ದಾರೆ.

• **ಲಿಂಗಭೇದವಿಲ್ಲದೆ ಕೆಲಸಕ್ಕೆ ತಕ್ಕ ವೇತನ ಶೀಘ್ರವೇ ಮಸೂದೆ**

ನವದೆಹಲಿ, ಮಾರ್ಚ್ 12– ಲಿಂಗಭೇದವಿಲ್ಲದೆ ಕೆಲಸಕ್ಕೆ ಸಮವಾದ ವೇತನ ನೀಡುವ ಮಸೂದೆಯೊಂದನ್ನು ಶೀಘ್ರವೇ ಸಂಸತ್ತಿನಲ್ಲಿ ಮಂಡಿಸಲಾಗುವುದು ಎಂದು ಕೇಂದ್ರ ಕಾರ್ಮಿಕ ಸಚಿವ ರಘುನಾಥ ರೆಡ್ಡಿ ಅವರು ಸಂಸದೀಯ ಕಾಂಗ್ರೆಸ್ ಪಕ್ಷದ ಕಾರ್ಯನಿರ್ವಾಹಕ ಸಮಿತಿಗೆ ಇಂದು ತಿಳಿಸಿದರು.

ಸಮಾಜದಲ್ಲಿ ಸ್ತ್ರೀಯರ ಬಗೆಗಿರುವ ತಾರತಮ್ಯವನ್ನು ಹೋಗಲಾಡಿಸಲು ಹಿಂದೂ ವಿವಾಹ ಶಾಸನ, ಹಿಂದೂ ಉತ್ತರಾಧಿಕಾರಿ ಶಾಸನ ಮತ್ತು ಮುಸ್ಲಿಮರ ವೈಯಕ್ತಿಕ ಶಾಸನವನ್ನು ತಿದ್ದುಪಡಿ ಮಾಡುವುದರ ಅಗತ್ಯವನ್ನು ಅನೇಕ ಸದಸ್ಯರು ಹೇಳಿದರು.

ನಶಿಸಿ, ನಿರ್ವಂಶವಾದ ಜೀವಿಗಳ ಮರುಸೃಷ್ಟಿ ಸರಿಯೇ, ಸಾಧುವೇ?

ಹಿಮಗಜಗಳ ಮರುಸೃಷ್ಟಿಯ ಹೊಸಜಗಳ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಚಿನ್ನದ ಬಣ್ಣದ ಉದ್ದುದ್ದ ಕೂದಲಿನ ಮುದ್ದಾದ ಮೂರು ಇಲಿಮರಿಗಳು ಕಳೆದ ವಾರ ಜಗತ್ತಿನಾದ್ಯಂತ ವಿಜ್ಞಾನ ರಂಗದಲ್ಲಿ ಭಾರೀ ಸುದ್ದಿ ಮಾಡಿದವು. ಹಿಂದೆಂದೋ ನಿರ್ವಂಶವಾದ ಜೀವಿಗಳು ಮತ್ತೆ ಅವತಾರ ಎತ್ತುವಂತೆ ಮಾಡುವ ದಿಸೆಯಲ್ಲಿ ಇದು ಯಶಸ್ವಿ ಹೆಜ್ಜೆ ಎಂದು ಅಮೆರಿಕದ ವಿಜ್ಞಾನಿಗಳು ಘೋಷಿಸಿದರು. ಅದೊಂದು 'ಅನಪೇಕ್ಷಿತ, ಎಡವಟ್ಟು ಹೆಜ್ಜೆ' ಎಂದು ಇನ್ನು ಕೆಲವು ವಿಜ್ಞಾನಿಗಳು ಬೈದರು.

ಹದಿನೈದು ಸಾವಿರ ವರ್ಷಗಳ ಹಿಂದೆ ಜಗತ್ತಿಗೆಲ್ಲ ದಟ್ಟ ಹಿಮ ಆವರಿಸಿದ್ದಾಗ ಉತ್ತರ ಭೂಭಾಗದಲ್ಲಿ ಉದ್ದುದ್ದ ಕೂದಲಿನ ಭಾರೀ ಉದ್ದ ಕೊಂಬುಗಳ ದಪ್ಪನ್ನ ಆನೆಗಳು ಓಡಾಡುತ್ತಿದ್ದವು. ಚಳಿಬಾಧೆ ತಗುಲದಂತೆ ಅವುಗಳ ಮೈತುಂಬ ಉಣ್ಣೆಯ ರಗ್ಗಿನಂಥ ಚರ್ಮದ ಮೇಲೆ ಮೀಟರ್ ಉದ್ದದ ದಟ್ಟ ಕೂದಲುಗಳಿದ್ದವು. ತ್ವಚೆಯ ಕೆಳಗೆ ಹತ್ತು ಸೆಂಟಿಮೀಟರ್ ದಪ್ಪದ ಕೊಬ್ಬಿನ ಪದರವಿತ್ತು. ಭೂಮಿಯ ಮೇಲೆ ಕ್ರಮೇಣ ಸೆಕೆ ಹೆಚ್ಚುತ್ತ, ಹಿಮ ಕರಗುತ್ತ ಹೋದ ಹಾಗೆ ಇಂಥ 'ಹಿಮಗಜ'ಗಳ ಬದುಕು ಕಷ್ಟದ್ದಾಯಿತು. ಸಾಲದ್ದಕ್ಕೆ ಆದಿಮಾನವರು ಗುಂಪು ಕಟ್ಟಿಕೊಂಡು ಈ 'ವೂಲೀ ಮ್ಯಾಮತ್'ಗಳನ್ನು ಬೇಟೆಯಾಡಿದರು. ನಾಲ್ಕು ಸಾವಿರ ವರ್ಷಗಳ ಹಿಂದೆ ಅವೆಲ್ಲ ಗತಿಸಿದವು. ಒಂದರ್ಥದಲ್ಲಿ ಅವು ಆಗಿನ ಆ ತಾಪಮಾನ ಏರಿಕೆಗೆ ಹೊಂದಿಕೊಳ್ಳಲಾಗದೇ ಗತಿಸಿದವು.

ಹಿಮದ ರಾಶಿಯಲ್ಲಿ ಈಗಲೂ ಅಲ್ಲಲ್ಲಿ ಅವುಗಳ ಗಜಗಾತ್ರದ ಅಸ್ಥಿಪಂಜರ ಬಹಳಷ್ಟು ಸುಸ್ಥಿತಿಯಲ್ಲೇ ಪತ್ತೆಯಾಗುತ್ತಿದೆ. ಅಮೆರಿಕ ಮತ್ತು ಯುರೋಪ್‌ನ ಅನೇಕ ಮ್ಯೂಸಿಯಂಗಳಲ್ಲಿ ಅಂಥವನ್ನು ಇಡಿಯಾಗಿ ಪ್ರದರ್ಶನಕ್ಕೆ ಇಡಲಾಗಿದೆ. ಅವುಗಳ ಡಿಎನ್‌ಎಯನ್ನು ಈಗಿರುವ ಆನೆಗಳ ಭ್ರೂಣ ಕೋಶಗಳಿಗೆ ಸೇರಿಸಿ ಹೊಸ ರೋಮದೈತ್ಯರನ್ನು ಮತ್ತೆ ಸೃಷ್ಟಿ ಮಾಡಲು ಸಾಧ್ಯವಿದೆ. ಅಂಥ ಮರುಸೃಷ್ಟಿಯ ಮೊದಲ ಯಶಸ್ವಿ ಹೆಜ್ಜೆಯೇ ಈಗಿನ ಈ ಬಂಗಾರದ ಇಲಿಮರಿಗಳು.

ಇಂಥದ್ದೊಂದು ರೋಮಾಂಚಕ ಸಾಧ್ಯತೆಯನ್ನು 'ಜುರಾಸಿಕ್ ಪಾರ್ಕ್' ಹೆಸರಿನ ಸಿನಿಮಾದಲ್ಲಿ ನಾವೆಲ್ಲ ನೋಡಿದ್ದೇವೆ. ಅದು ಬರೀ ಕಪೋಲಕಲ್ಪಿತ ಕತೆ. ಆರು ಕೋಟಿ ವರ್ಷಗಳ ಹಿಂದಿನ ಡೈನೊಸಾರ್ ಪ್ರಾಣಿಯ ಎಲ್ಲ ಮೂಳೆಗಳೂ ಶಿಲೆಯಾಗಿ ಬದಲಾಗಿದ್ದು ಅವುಗಳ ಡಿಎನ್‌ಎ ಸಿಗುವ ಸಾಧ್ಯತೆಯೇ ಇಲ್ಲ. ಆದರೂ ವಿಜ್ಞಾನ ಕತೆಗಾರ ಮೈಕೆಲ್ ಕ್ರಿಕ್ಟನ್ ಒಂದು ಚಾಣಾಕ್ಷ ಉಪಾಯವನ್ನು ಕಲ್ಪಿಸಿದ್ದ. ಆಗಿನ ಕಾಲದ ಸೊಳ್ಳೆಯೊಂದು ಡೈನೊಸಾರ್ ಪ್ರಾಣಿಯ ರಕ್ತವನ್ನು ಹೀರುತ್ತದೆ. ಹೀರಿ, ದೂರ ಹಾರಲಾರದೆ ಮರದ ಬೊಡ್ಡೆಯ ಮೇಲೆ ಕೂರುತ್ತದೆ. ಆ ಮರದಿಂದ ಸ್ರವಿಸುತ್ತಿದ್ದ ಅಂಟಿನ ಮುದ್ದೆಯಲ್ಲಿ ಸೊಳ್ಳೆ ಸಿಲುಕುತ್ತದೆ. ಅಂಟು ಒಣಗಿ ಶಿಲಾರಾಳವಾಗಿ ಬದಲಾಗಿ ಕೋಟಿಗಟ್ಟಲೆ ವರ್ಷ ಕಳೆದರೂ ಗಾಜಿನಂತೆ ರಾಳ ಹಾಳಾಗದೇ ಉಳಿದಿರುತ್ತದೆ. ಅದರೊಳಗಿನ ಸೊಳ್ಳೆಯ ರಕ್ತದ ಒಣಕಣಗಳಿಂದ ಡೈನೊಸಾರ್ ಡಿಎನ್‌ಎಯನ್ನು ವಿಜ್ಞಾನಿಗಳು ಎತ್ತಿ ತಂದು ಈಗಿನ ಉಡದಂಥ ಪ್ರಾಣಿಗಳ ಭ್ರೂಣಕ್ಕೆ ಸೇರಿಸಿ ಹೊಸ ದೈತ್ಯಜೀವಿಗಳನ್ನು ಸೃಷ್ಟಿಸುತ್ತಾರೆ.

ನಶಿಸಿಹೋದ ಜೀವಿಗಳನ್ನು ಮತ್ತೆ ಸೃಷ್ಟಿ ಮಾಡಲೆಂದು ಈಗಂತೂ ಅನೇಕ ಸಂಶೋಧನಾ ಸಂಸ್ಥೆಗಳು ಪೈಪೋಟಿ ನಡೆಸುತ್ತಿವೆ. ಮರುಸೃಷ್ಟಿ ಮಾಡಬೇಕಾದ ಜೀವಿಗಳ ಪಟ್ಟಿಯೂ ಸಾಕಷ್ಟು ಉದ್ದವಿದೆ. ಮಾರಿಷಸ್ ದ್ವೀಪದ ಡೋಡೋ ಪಕ್ಷಿ, ಅಮೆರಿಕದ ಪ್ಯಾಸೆಂಜರ್ ಪಿಜನ್, ಆಸ್ಟ್ರೇಲಿಯಾದ ತಾಸ್ಮಾನಿಯನ್ ಟೈಗರ್... ಹೀಗೆ. ಇವುಗಳಲ್ಲಿ ಹಿಮಗಜಗಳಿಗೇ ಮೊದಲ ಪ್ರಾಶಸ್ತ್ಯ. ಏಕೆಂದರೆ, ಇವು ಮತ್ತೆ ಜೀವಿಸಿ ಬಂದು ಉತ್ತರ ಧ್ರುವದ ಬಳಿ ಹಿಂಡು ಹಿಂಡಾಗಿ ಓಡಾಡತೊಡಗಿದರೆ ಹಿಮದ ಹಾಸುಗಳು ಮತ್ತಷ್ಟು ಕರಗುವುದನ್ನು ತಡೆಯಬಹುದು ಎಂಬುದು ವಿಜ್ಞಾನಿಗಳ ಕನಸು.

ಹಿಮಗಜಗಳ ಅಸ್ಥಿಗಳಿಂದ ಡಿಎನ್‌ಎಯನ್ನು ಕಷ್ಟಪಟ್ಟು ಸಂಗ್ರಹಿಸಿದ ವಿಜ್ಞಾನಿಗಳು ಅವನ್ನು ಏಷ್ಯಾದ ಆನೆಗಳ ಡಿಎನ್‌ಎ ಜೊತೆ ಹೋಲಿಸಿ ನೋಡಿದರು. ಹಿಮಗಜದ ವಿಶೇಷ ಲಕ್ಷಣಗಳನ್ನು (ಉದ್ದ ಕೂದಲು, ಕೊಬ್ಬಿನ ದಪ್ಪ ತುಪ್ಪಳ, ಉಣ್ಣೆಯ ಚರ್ಮ ಇವನ್ನೆಲ್ಲ) ಪ್ರತಿನಿಧಿಸುವ ಜೀನ್‌ಗಳು ನಮ್ಮ ಈಗಿನ ಆನೆಗಳಲ್ಲಿ ಎಲ್ಲಿ ಮಾಯವಾಗಿವೆ ಎಂಬುದನ್ನು ಕಂಡುಕೊಂಡರು. ಹಿಮಗಜದ ಡಿಎನ್‌ಎಯಲ್ಲಿ ಆ ಜೀನ್‌ಗಳು ಎಲ್ಲಿವೆ ಎಂಬುದು ಗೊತ್ತಾಯಿತು. ಇನ್ನೇನು, ಏಷ್ಯಾದ ಆನೆಗಳ ಭ್ರೂಣದಲ್ಲಿನ ಜೀವಕೋಶವನ್ನು ಹೊರಕ್ಕೆಳೆದು ಅದರಲ್ಲಿನ ವರ್ಣತಂತುವಿನಲ್ಲಿ ಹಿಮಗಜದ ವಿಶೇಷ ಜೀನ್‌ಗಳನ್ನು ಸೇರಿಸಬೇಕು. ನಂತರ (ಈ ಹಿಂದೆ ಡಾಲಿ ಕುರಿಮರಿಯನ್ನು ಸೃಷ್ಟಿಸಿದ ಹಾಗೆ) ಬೇರೊಂದು ಆನೆಯ ಗರ್ಭಕೋಶದಲ್ಲಿ ಹೀಗೆ ತಿದ್ದುಪಡಿ ಮಾಡಿದ ವರ್ಣತಂತುವನ್ನು ಸೇರಿಸಬೇಕು. ಆದರೆ ಹೇಳಿಕೇಳಿ ಅದು ಗಜಪ್ರಸವವಾಗುತ್ತದೆ! ಹೊಸ ಸಂತಾನ ಪಡೆಯಲು ಕನಿಷ್ಠ 18 ತಿಂಗಳು ಬೇಕು.

2028ರೊಳಗೆ ಹಿಮಗಜವನ್ನು ಸೃಷ್ಟಿ ಮಾಡಿಯೇ ತೀರುತ್ತೇನೆಂದು ಅಮೆರಿಕದ ಡಾಲ್ಲಸ್ ನಗರದ 'ಕೊಲೊಸಸ್' ಹೆಸರಿನ ಕಂಪನಿ ಸಾರ್ವಜನಿಕರಿಂದ ಬಂಡವಾಳ ಸಂಗ್ರಹಿಸಿತ್ತು. ಆನೆಯ ಗರ್ಭದಲ್ಲೇ ಹಿಮಗಜಕ್ಕೆ ಜನ್ಮ ಕೊಡುವಷ್ಟು ವ್ಯವಧಾನ ಇಲ್ಲವಲ್ಲ? ಹಾಗಾಗಿ ತುಸು ತುರ್ತಾಗಿ ಇಲಿಯ ಭ್ರೂಣದಲ್ಲಿರುವ ಜೀವಕೋಶಗಳ ಡಿಎನ್‌ಎಗೇ ಹಿಮಗಜದ ವಿಶೇಷ ಜೀನ್‌ಗಳನ್ನು ಜೋಡಿಸಿ ಹೊಲಿಗೆ ಹಾಕಿತು (ಇದಕ್ಕೆ 'ಜೀನ್ ಎಡಿಟಿಂಗ್' ಎನ್ನುತ್ತಾರೆ. ಪತ್ರಗಳ ಎಡಿಟ್ ಮಾಡುವವರು ಒಂದು ವಾಕ್ಯದ ಕೆಲವು ಪದಗಳನ್ನು ತೆಗೆದು ಬೇರೆ ಪದಗಳನ್ನು ಜೋಡಿಸಿದ ಹಾಗೆ; ಇದು ಕುಲಾಂತರಿ ತಂತ್ರಜ್ಞಾನಕ್ಕಿಂತ ಭಿನ್ನ ಹೇಗೆಂದರೆ- ಕುಲಾಂತರಿಯಲ್ಲಿ ಎರಡು ವಿಭಿನ್ನ ಜೀವಿಗಳ ವರ್ಣತಂತುವಿನ ಮೇಲೆ ಕತ್ತಲಲ್ಲಿ ಕತ್ತರಿ ಆಡಿಸಿದಂತೆ ಅಂದಾಜಿನ ಹೊಲಿಗೆ ಹಾಕುವುದು. ಜೀನ್ ಎಡಿಟಿಂಗ್ ಅಂದರೆ ಹಾಗಲ್ಲ; ಕೆಲವು ಗುಣಗಳನ್ನು ನಿಖರವಾಗಿ ಬದಲಿಸುವುದು; ಒಂದೇ ಜೀವಿಯದ್ದಾದರೂ ಅತ್ತ ಇತ್ತ ಮಾಡುವುದು). ಹಿಮಗಜದ ಉದ್ದ ಕೂದಲನ್ನು 'ಮಾತ್ರ' ಪ್ರತಿನಿಧಿಸುವ ಜೀನ್‌ಗಳು ಇಲಿಮರಿಗಳಲ್ಲಿ ವ್ಯಕ್ತವಾಗುವಂತೆ ಮಾಡಿ ತಾನು ಅಂತಿಮ ಗುರಿಯತ್ತ ಯಶಸ್ಸಿನ ಹಾದಿಯಲ್ಲಿದ್ದೇನೆ ಎಂದು ಕೊಲೊಸಸ್ ಕಂಪನಿ ಷೇರುದಾರರಿಗೆ ತುರ್ತಾಗಿ ತೋರಿಸಬೇಕಿತ್ತು. ಹೊಸ ಇಲಿಮರಿಗಳು ಜನಿಸಿದಾಗ ಕಂಪನಿಯ ಖುಷಿಗೆ ಪಾರವೇ ಇರಲಿಲ್ಲ. ತಾನು ನಿರೀಕ್ಷಿಸಿರದಿದ್ದ ಬಂಗಾರದ ಬಣ್ಣದ ಉದ್ದ ಕೂದಲುಗಳುಳ್ಳ ಇಲಿಮರಿಗಳೇ ಜನಿಸಿದವು.

ತಳಿಗುಣಗಳ ತಿದ್ದುಪಡಿ ಮಾಡುವ ತಂತ್ರಜ್ಞಾನ ಈಗಾಗಲೇ ಅನೇಕ ಬಗೆಯ ಸಸ್ಯಗಳಲ್ಲಿ, ಪ್ರಾಣಿಗಳಲ್ಲಿ ಅಷ್ಟೇಕೆ ಮನುಷ್ಯರಲ್ಲೂ ಯಶಸ್ವಿಯಾಗಿ ಬಳಕೆಗೆ ಬರುತ್ತಿದೆ. ರೋಗನಿರೋಧಕ, ಬರ ನಿರೋಧಕ, ಕಳೆನಿರೋಧಕ ಸಸ್ಯಗಳು ಸೃಷ್ಟಿಯಾಗಿವೆ. ಕೋಡುಗಳೇ ಮೂಡದ ದನಗಳ ತಳಿಯನ್ನು ಸೃಷ್ಟಿಸಲಾಗಿದೆ. ಮನುಷ್ಯರಿಗೆ ಜೋಡಿಸಬಲ್ಲ ಅಂಗಾಂಗ ದಾನಕ್ಕೆಂದೇ ವಿಶೇಷ ತಳಿಯ ಹಂದಿಗಳನ್ನು ರೂಪಿಸಲಾಗಿದೆ. ಹಾಗಿರುವಾಗ ನಿರ್ವಂಶವಾದ ಜೀವಿಗಳ ಮರುಸೃಷ್ಟಿಗೆ ಯಾರಾದರೂ ಯಾಕೆ ತಕರಾರು ಎತ್ತಬೇಕು?

ಎತ್ತಲು ನೂರೊಂದು ಕಾರಣಗಳಿವೆ: ನಿಸರ್ಗದಲ್ಲಿ ಇಲ್ಲದ ಅದೆಷ್ಟೊ ಬಗೆಯ ವಿಷದ್ರವ್ಯಗಳನ್ನು ವಿಜ್ಞಾನಿಗಳು ಸೃಷ್ಟಿಸಿದ್ದಾರೆ. ಅದರಲ್ಲಿ ಲಾಭಕ್ಕಿಂತ ಹೆಚ್ಚು ಅಪಾಯಗಳೇ ಇವೆ ಎಂದು ಗೊತ್ತಾದಾಗ, ಹೇಗೋ ನಿಯಂತ್ರಣ, ನಿಷೇಧ ಹಾಕಿ ಅಂಥ ಅಸ್ತ್ರಗಳನ್ನು ಹಿಂದಕ್ಕೆ ಪಡೆಯಬಹುದು. ಆದರೆ ಅಪಾಯಕಾರಿ ಜೀವಿಯನ್ನು ಸೃಷ್ಟಿಸಿದರೆ ಅದರ ನಿಯಂತ್ರಣ ನಮ್ಮ ಕೈಮೀರಬಹುದು. ಸಂಕೀರ್ಣ ಜೀವಜಾಲದಲ್ಲಿ ಏನೆಲ್ಲ ಏರುಪೇರು ಆಗಬಹುದು. ಅದೂ ಅಲ್ಲದೆ, ಹಿಮಗಜದಂಥ ದೈತ್ಯಜೀವಿಗಳ ಸೃಷ್ಟಿಕ್ರಿಯೆಯಲ್ಲಿ ಅನೇಕ ತೊಡಕುಗಳಿವೆ. ಈಗಿನ ಚಿನ್ನದ ಇಲಿಗಳನ್ನು ಸೃಷ್ಟಿಸುವ ಮೊದಲು ಅನೇಕ ವಿಕಾರ ಭ್ರೂಣಗಳನ್ನು ಹೊಸಕಿ ಹಾಕಲಾಗಿದೆ. ಅದೆಷ್ಟೊ ವಿಕಲಾಂಗ ಇಲಿಮರಿಗಳನ್ನು ಕೊಲ್ಲಲಾಗಿದೆ. ಈಗ ಉಳಿದಿರುವ ಈ ಚಂದದ ಜೀವಿಗಳು ಮುಂದೆ ಏನೇನು ಸಂಕಟ ಅನುಭವಿಸುತ್ತವೊ ಗೊತ್ತಿಲ್ಲ. ಆನೆಗಳ ಮೇಲಿನ ಪ್ರಯೋಗ ಎಡವಟ್ಟಾದರೆ ಅವುಗಳ ಗರ್ಭದಿಂದ ಹೊರಬರುವ ಹಿಮಗಜಗಳ ಮರಿಗಳ ಗತಿ ಏನು, ತಾಯಿಯ ಗತಿ ಏನು? ಇಂಥ ನೈತಿಕ ಪ್ರಶ್ನೆ ಹೇಗೂ ಇರಲಿ; ಹಿಂದಿನ ಪರಿಸರಕ್ಕೆ ಹೊಂದಿಕೊಳ್ಳದೇ ಗತಿಸಿದ್ದ ಜೀವಿಗಳು ಇಂದಿನ ಪರಿಸರಕ್ಕೆ ಹೊಸ ಸಮಸ್ಯೆ ಒಡ್ಡಿದರೆ ಏನಾದೀತು?

ಎಲ್ಲಕ್ಕಿಂತ ಮುಖ್ಯವಾದ ಪ್ರಶ್ನೆ ಏನೆಂದರೆ, ಮನುಷ್ಯನ ಕೃತ್ಯಗಳಿಂದಾಗಿಯೇ ಅನೇಕ ಜೀವಿಗಳು ನಿರ್ವಂಶವಾಗುವ ಹಂತಕ್ಕೆ ಬಂದಿವೆ. ಅವುಗಳನ್ನು ರಕ್ಷಿಸುವ ಕಡೆ ವಿಜ್ಞಾನದ ಆದ್ಯತೆ ಇರಬೇಕೆ ವಿನಾ, ರೋಚಕತೆಯೇ ಪ್ರಧಾನವಾದರೆ ಹೇಗೆ?



ಚುರುಮುರಿ



ನೀವು ಯಾರ ಪರ?

• ಗುರು ಪಿ.ಎಸ್.

'ನೀನು ಮಾಯೆಯೊಳಗೊ, ಮಾಯೆ ನಿನ್ನೊಳಗೋ...' ಎಂಬ ಕನಕದಾಸರ ಕೀರ್ತನೆ ಹಾಡುತ್ತಿದ್ದಳು ಹೆಂಡತಿ.

'ಏನಮ್ಮ ಇದು, ಬೆಳ್‌ಬೆಳಿಗ್ಗೆಯೇ ವೇದಾಂತಿ ಆಗಿಬಿಟ್ಟಿದ್ದೀಯಾ...?' ಕಾಲೆಳೆದೆ.

'ಏನಿಲ್ಲ ರೀ, ಮೊನ್ನೆ ಗುಜರಾತ್‌ನಲ್ಲಿ ರಾಹುಲ್ ಗಾಂಧಿ ಮಾತನಾಡಿದ್ದನ್ನ ಕೇಳ್ತಿದ್ದಾ, ಹಾಗೇ ಈ ಸಾಲು ನೆನಪಿಗೆ ಬಂತು, ಗುನುಗ್ತಿದ್ದೆ'.

'ಹೌದಾ, ಅಂಥದ್ದೇನು ಮಾತನಾಡಿದ್ರು' ಕುತೂಹಲದಿಂದ ಕೇಳಿದೆ.

'ಕಾಂಗ್ರೆಸ್ ಪಕ್ಷದಲ್ಲಿ ಇದ್ದುಕೊಂಡೇ ಕೆಲವರು ಬಿಜೆಪಿ ಪರ ಕೆಲಸ ಮಾಡ್ತಿದ್ದಾರೆ. ಅಂಥವರನ್ನ ಹೊರ ಹಾಕೋ ಕೆಲಸ ಮಾಡಬೇಕಾಗುತ್ತೆ ಅಂತ ರಾಹುಲ್ ಎಚ್ಚರಿಕೆ ಕೊಟ್ಟರಂತೆ' ನಕ್ಕಳು ಹೆಂಡತಿ.

'ಹೌದು, ನಾನೂ ಆ ನ್ಯೂಸ್ ನೋಡಿದ್ದೆ. ಇದರಲ್ಲಿ ನಗುವಂಥದ್ದು ಏನಿದೆ?'

'ಕಾಂಗ್ರೆಸ್‌ನಲ್ಲಿ ಬಿಜೆಪಿ ಪರ ಕೆಲಸ ಮಾಡೋರಿದ್ದಾರೆ ಅಂತ ಅವರಿಗೆ ಇಷ್ಟ್ ವರ್ಷಗಳಾದ ಮೇಲೆ ಗೊತ್ತಾಯ್ತಲ್ಲ, ಅದಕ್ಕೆ ನಗು ಬಂತು'.

'ಅದರಲ್ಲಿ ಹೊಸದೇನಿದೆ, ಬಿಜೆಪಿಯಲ್ಲೂ ಕಾಂಗ್ರೆಸ್ ಪರ ಕೆಲಸ ಮಾಡೋರಿದಾರಲ್ವ. ಅಷ್ಟೇ ಅಲ್ಲ, ಕರ್ನಾಟಕದಲ್ಲಿದ್ದೂ ಬೇರೆ ರಾಜ್ಯದ ಪರವಾಗಿ ಇರೋರೂ ಇದ್ದಾರೆ. ಕನ್ನಡದವರಾಗಿದ್ದೂ ಪರಭಾಷಾ ಪ್ರೇಮಿಗಳೂ ಇದ್ದಾರೆ. ಬೆಂಗಳೂರಿನಲ್ಲೇ ಇದ್ದೂ ಬೆಂಗಳೂರಿಗೇ ಬೈಯೋರು ಇದ್ದಾರೆ... ಎಲ್ಲ ನಿನ್ನ ಹಂಗೆ' ಎಂದೆ.

'ನನ್ನ ಹಂಗೆ ಅಂದ್ರೆ ಏನ್ರೀ ಅರ್ಥ' ಸಿಟ್ಟು ಮಾಡಿಕೊಂಡಳು ಪತ್ನಿ.

'ಅಂದ್ರೆ, ನನ್ನ ಸ್ಯಾಲರಿ ಆಗಿದ್ದ ದಿನ, ರೂಲಿಂಗ್ ಪಾರ್ಟಿ ಎಮ್ಮೆಲ್ಲೆ ಥರ ಸಾಫ್ಟ್ ಆಗಿ ಮಾತನಾಡಿಸ್ತೀಯ. ದುಡ್ಡೆಲ್ಲ ಇಸ್ಕೊಂಡ ಮೇಲೆ ಆಪೋಸಿಷನ್ ಪಾರ್ಟಿ ಲೀಡರ್ ಥರ ಆಡಲ್ವ, ಹಂಗೆ'.

'ಹಂಗೇ ಇರಬೇಕು ರೀ... ನಮ್ಮ ಅನುಕೂಲ ನಾವು ನೋಡಿಕೊಳ್ಳಬೇಕು. ಇದನ್ನೆಲ್ಲ ನಮ್ಮ ಎಮ್ಮೆಲ್ಲೆಗಳನ್ನೇ ನೋಡಿ ಕಲೀರಿ'.

'ಅವರನ್ನ ನೋಡಿ ಏನು ಕಲಿಯಬೇಕು?'

'ಎಷ್ಟೇ ಬೈದಾಡಿಕೊಂಡರೂ ತಮ್ಮ ತಮ್ಮ ಸಂಬಳ ಜಾಸ್ತಿ ಮಾಡಿಕೊಳ್ಳುವಾಗ ಮಾತ್ರ ಎಲ್ಲ ಪಕ್ಷಗಳ ಶಾಸಕರೂ ಒಗ್ಗಟ್ಟಿನಿಂದ ಓಕೆ ಮಾಡಿಕೊಳ್ಳಲ್ವ, ಹಾಗೇ ಇರಬೇಕು' ಎಂದು ನಕ್ಕಳು.

ಸಂಗತ

ನಟ್ಟು, ಬೋಲ್ಟ್‌ನಿಂದಾಚೆ...

ಚಲನಚಿತ್ರೋದ್ಯಮವನ್ನು ಒಂದು ಕೈಗಾರಿಕೆ ಎಂದು ಪರಿಗಣಿಸಿದರಷ್ಟೇ ಸಾಲದು

• ಎಚ್.ಎಸ್.ಮಂಜುನಾಥ

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗದ ಕಲಾವಿದರು, ಚಿತ್ರೋದ್ಯಮಿಗಳನ್ನು ಉದ್ದೇಶಿಸಿ, 'ನಮ್ಮ ಜೊತೆ ಕೈಜೋಡಿಸದವರ ಬೋಲ್ಟು, ನಟ್‌ಗಳನ್ನು ಎಲ್ಲಿ ಟೈಟ್ ಮಾಡಬೇಕೆಂಬುದು ತಿಳಿದಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದು, ಇದಕ್ಕೆ ಚಿತ್ರರಂಗದವರಷ್ಟೇ ಅಲ್ಲದೆ ಹೊರಗಿನ ಕೆಲವರು ಸಹ ಪ್ರತಿಕ್ರಿಯಿಸಿದ್ದು ಆಯಿತು. ವಾಸ್ತವವಾಗಿ ಇಂಗ್ಲಿಷ್‌ನಲ್ಲಿ ನಟ್ಸ್ ಆ್ಯಂಡ್ ಬೋಲ್ಟ್ಸ್ ಎಂದರೆ ಯಾವುದೇ ವಿಷಯದ ಮೂಲಭೂತ, ಪ್ರಾಯೋಗಿಕ ವಿವರ. ಶಿವಕುಮಾರ್ ಅವರ 'ಭಾಷೆ'ಯನ್ನು ಪಕ್ಕಕ್ಕಿಟ್ಟು, ಕನ್ನಡ ಚಿತ್ರೋದ್ಯಮದ ಸ್ಥಿತಿ ಸುಧಾರಿಸಲು ಕಾರ್ಯತಃ ಕೈಗೊಳ್ಳಬೇಕಾದ ಕ್ರಮಗಳೇನು ಎಂದು ಯೋಚಿಸಬೇಕು.

ಚಿತ್ರೋತ್ಸವದಿಂದ ಕನ್ನಡ ಚಿತ್ರರಂಗಕ್ಕೆ ಅಷ್ಟೇನೂ ನೇರ ಉಪಯೋಗ ಇಲ್ಲ. ಆದರೆ ನಿರ್ಮಾಪಕರು, ಹಂಚಿಕೆದಾರರು ಚಿತ್ರೋತ್ಸವದ ಸಂವಾದಗಳಲ್ಲಿ ಹಾಜರಿದ್ದಿದ್ದರೆ ಉಪಯುಕ್ತವಾಗುತ್ತಿತ್ತು. 'ಪ್ರಾದೇಶಿಕ ಚಿತ್ರ ಹಂಚಿಕೆಯಲ್ಲಿನ ಸವಾಲುಗಳು, ಅವಕಾಶಗಳು' ಕುರಿತ ಸಂವಾದ ಇದೇ 7ರಂದು ನಡೆಯಿತು. ಮುಕೇಶ್ ಮೆಹ್ತಾ ('ದೃಶ್ಯಂ' 1, 2 ಚಿತ್ರಗಳ ಹಂಚಿಕೆ ಮಾಡಿದವರು) ಹಾಗೂ ಬಲವಂತ್ ಸಿಂಗ್ (ತೆಲಂಗಾಣ, ಆಂಧ್ರಪ್ರದೇಶದಲ್ಲಿ ಹಂಚಿಕೆದಾರರು) ಸ್ವಂತ ಅನುಭವಗಳನ್ನು ಯಾವುದೇ ಭಿಡೆ ಇಲ್ಲದೆ ಪ್ರೇಕ್ಷಕರೊಡನೆ ಹಂಚಿಕೊಂಡರು. ಜತೆಗಿದ್ದ ಗಿರೀಶ್ ಜೌಹರ್, ಸಿನಿಮಾ ವೀಕ್ಷಕರ ಆದ್ಯತೆಗಳಲ್ಲಾದ ಸಂಪೂರ್ಣ ಬದಲಾವಣೆಯ ಬಗ್ಗೆ ಪ್ರಸ್ತಾಪಿಸಿದರು. ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ, ಅದರಲ್ಲೂ ಏಕತೆರೆ ಥಿಯೇಟರ್‌ಗಳಿಗೆ ಆಕರ್ಷಿಸುವ ಅಗತ್ಯದ ಬಗೆಗೆ ಮೂವರೂ ಒತ್ತಿ ಹೇಳಿದರು. ಒಟಿಟಿ ಬಗೆಗೆ ಅತಿ ಆಸೆ ಇಟ್ಟುಕೊಳ್ಳಬಾರದು ಎಂಬ ಅಭಿಪ್ರಾಯವೂ ವ್ಯಕ್ತವಾಯಿತು.

ಅಮೆರಿಕದಲ್ಲಿ ಯಾವ ಪ್ರದೇಶದಲ್ಲಿ ಥಿಯೇಟರ್ ಮೂಲಕ ಚಿತ್ರ ಬಿಡುಗಡೆ ಸಾಧ್ಯವಿಲ್ಲವೋ ಅಲ್ಲಿ ಒಟಿಟಿ ಮಾರ್ಗ ಹಿಡಿಯಲಾಗುತ್ತದೆ. 'ಚಿತ್ರವೊಂದು ಮೊದಲು ಥಿಯೇಟರ್‌ಗಳಲ್ಲಿ ಬಂದರೆ ಅದಕ್ಕೆ ಗೋಚರತೆ (ವಿಸಿಬಿಲಿಟಿ) ಸಿಗುತ್ತದೆ. ಮುಂದೆ ಒಟಿಟಿಗೆ ಹೋದಾಗ ಇದು ಸಹಾಯಕವಾಗಬಹುದು' ಎಂಬ ಮಾತು ಸರಿಯೆನಿಸುತ್ತದೆ. ನಟ ಅಮೀರ್ ಖಾನ್ 'ಬಾಲಿವುಡ್‌ನ ಬಿಸಿನೆಸ್ ಮಾಡೆಲ್ಲೇ ಸರಿಯಿಲ್ಲ. ಕೆಲವು ದಿನಗಳ ನಂತರ ಒಟಿಟಿಯಲ್ಲಿ ಬರುತ್ತದೆ ಎಂದು ಮೊದಲೇ ಹೇಳಿದರೆ ಥಿಯೇಟರ್‌ಗೆ ಜನ ಬರುತ್ತಾರಾ?' ಎಂದಿರುವುದು ಗಮನಾರ್ಹ. ಒಟಿಟಿ ಸ್ಟಾರ್‌ಗಳನ್ನು ಸೃಷ್ಟಿಸಲಾರದು ಎಂಬ ಬಲವಂತ್ ಅವರ ಮಾತಿನಲ್ಲೂ ಸತ್ವ ಇದೆ. ಸಾವಿರ ಚಿತ್ರಗಳಲ್ಲಿ ಐವತ್ತು ಒಟಿಟಿ ಅಥವಾ ಡಿಜಿಟಲ್ ಮೂಲಕ ಪ್ರದರ್ಶನಗೊಳ್ಳುತ್ತಿವೆ, ಅಲ್ಲಿ ಮೆಗಾ ಚಿತ್ರಗಳಿಗೆ ಮೊದಲ ಮಣೆ ಹಾಕಲಾಗುತ್ತಿದೆ, ಕನ್ನಡ ಚಿತ್ರಗಳಿಗೆ ಬೇಡಿಕೆಯೇ ಇಲ್ಲ- ಇವೂ ವಾಸ್ತವಿಕ ಅಂಶಗಳೇ.

ಮಲ್ಟಿಪ್ಲೆಕ್ಸ್ ಬಂದಾಗ ದೊಡ್ಡ ನಿರೀಕ್ಷೆ ಇತ್ತು. ಕೆಲವರು 'ಮಲ್ಟಿಪ್ಲೆಕ್ಸ್ ಚಿತ್ರ ಮಾಡಿದ್ದೇವೆ' ಎಂದು ಹೇಳಿಕೊಂಡಿದ್ದೂ ಉಂಟು. ಈಗ ಟಿಕೆಟ್ ದರ, ಜನ ಬರುವುದು, ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಸೂಕ್ತ ಸಮಯ ನೀಡದಿರುವುದು... ಹೀಗೆ ಹಲವು ಸಮಸ್ಯೆಗಳು ಕಂಡುಬಂದಿವೆ. ಎರಡು ಮತ್ತು ಮೂರನೇ ಶ್ರೇಣಿಯ ಊರುಗಳಲ್ಲಿ ಮಾಲ್ ನಿರ್ಮಿಸುವುದು ಕಷ್ಟ. ಅಲ್ಲಿ ಈಗಿರುವ ಚಿತ್ರಮಂದಿರಗಳ ಭೌತಿಕ ಸ್ಥಿತಿ ಚೆನ್ನಾಗಿಲ್ಲ. ಏಕಪರದೆಗಳ ನಿರ್ವಹಣೆ ತೆಲಂಗಾಣದಲ್ಲಿ ಚೆನ್ನಾಗಿದೆ ಎನ್ನಲಾಗಿದೆ. ಕೇರಳದ ತಿರುವನಂತಪುರದಲ್ಲೂ ಕೆಲವು ಚಿತ್ರಮಂದಿರಗಳನ್ನು ಉತ್ತಮಪಡಿಸಲಾಗಿದೆ. 'ದಕ್ಷಿಣ ಭಾರತದ ಚಿತ್ರೋದ್ಯಮಿಗಳು ಏಕತೆರೆ ಪ್ರೇಕ್ಷಕರನ್ನೇ ಹೆಚ್ಚು ನಂಬಿದರು, ಕೆಲವರು ಗೆದ್ದರು. ಆದರೆ ಹಿಂದಿಯವರು ಮಲ್ಟಿಪ್ಲೆಕ್ಸ್ ಕಲೆಕ್ಷನ್ ಅನ್ನು ಹೆಚ್ಚು ಅವಲಂಬಿಸಿ ಸೋತರು' ಎಂಬ ತುಲನೆಯನ್ನೂ ವಿಶ್ಲೇಷಿಸಬೇಕಾಗಿದೆ.

ಆದಾಯ ಹಂಚಿಕೆಯು ಒಂದು ಬಹು ಚರ್ಚಿತ ವಿಷಯ. ನಿರ್ಮಾಪಕರು ಈ ಬಗೆಗೆ ದೂರುತ್ತಲೇ ಇರುತ್ತಾರೆ. ಮೊದಲ ಒಂದು ವಾರದ ನಂತರ ಇದರ ಶೇಕಡ ಪ್ರಮಾಣ ಎಷ್ಟಿರಬೇಕು ಎಂಬ ವಿಷಯ ಕಗ್ಗಂಟಾಗುತ್ತದೆ. ಪ್ರದರ್ಶಕರು ಹೆಚ್ಚಿನ ಆದಾಯದ ಮಾರ್ಗಗಳನ್ನು ಹುಡುಕಿಕೊಂಡಿದ್ದಾರೆ. ಆಂಧ್ರ, ತೆಲಂಗಾಣದಲ್ಲಿ ಗುತ್ತಿಗೆಯ ಮಾದರಿ ನಡೆಯುತ್ತಿದೆ.



ಈಗ ಮನರಂಜನೆಗೆ ಹಲವಾರು ಮಾರ್ಗಗಳಿವೆ, ಚಿತ್ರಮಂದಿರಕ್ಕೇ ಹೋಗಬೇಕೆಂದಿಲ್ಲ. ಈ ಬದಲಾದ ಪರಿಸ್ಥಿತಿಯಲ್ಲಿ ಕಡಿಮೆ ಬಜೆಟ್‌ನ ಚಿತ್ರ ನಿರ್ಮಿಸುವವರನ್ನು, ಏಕಪರದೆ ಚಿತ್ರಮಂದಿರಗಳನ್ನು ರಕ್ಷಿಸುವುದು ಹೇಗೆ? ಚಿತ್ರೋದ್ಯಮಕ್ಕೆ ಸಂಬಂಧಿಸಿದಂತೆ ರಾಜ್ಯ ಬಜೆಟ್‌ನಲ್ಲಿ ಘೋಷಿಸಿರುವ ಕ್ರಮಗಳು ತತ್‌ಕ್ಷಣದ ಪರಿಣಾಮವನ್ನೇನೂ ಬೀರುವುದಿಲ್ಲ. ಗರಿಷ್ಠ ಟಿಕೆಟ್ ದರ ನಿಗದಿಯನ್ನು ಮಲ್ಟಿಪ್ಲೆಕ್ಸ್ ಮಾಲೀಕರು ವಿರೋಧಿಸಬಹುದು. ಉದ್ದೇಶಿತ ಫಿಲಂ ಸಿಟಿ ಚಟುವಟಿಕೆಗಳಿಗೆ ತೆರೆದುಕೊಳ್ಳಲು ವರ್ಷಗಳೇ ಹಿಡಿಯಬಹುದು. ಚಲನಚಿತ್ರ ಅಕಾಡೆಮಿಗೆ ಸೇರಿದ ಜಾಗದಲ್ಲಿ ಬಹುಪರದೆಗಳಿರುವ ಚಿತ್ರಮಂದಿರ ಸಮುಚ್ಚಯವನ್ನು ನಿರ್ಮಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ ಎಷ್ಟು ಜನ ಅತ್ತ ಹೋಗುತ್ತಾರೆ? ಸಾಮಾಜಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬಿಂಬಿಸುವ ಚಲನಚಿತ್ರಗಳ ಸಂರಕ್ಷಣೆಗೆ ಚಲನಚಿತ್ರ ಭಂಡಾರ ಸ್ಥಾಪಿಸುವ ಇರಾದೆ ಸರ್ಕಾರಕ್ಕಿದೆ. ಇಲ್ಲಿ ಆಯ್ಕೆ ತುಂಬ ಮುಖ್ಯ.

ಈಗಾಗಲೇ ಕೆಲಮಟ್ಟಿಗೆ ರೋಗಗ್ರಸ್ತವಾಗಿರುವ ಚಿತ್ರರಂಗದಲ್ಲಿ ಚಿತ್ರ ನಿರ್ಮಾಣ ಸ್ವಲ್ಪಮಟ್ಟಿಗಾದರೂ ಲಾಭ ತರುವ ಚಟುವಟಿಕೆ ಆಗಬೇಕು. ಮುಖ್ಯ ಸಮಸ್ಯೆ ಎಂದರೆ, ವಾಣಿಜ್ಯ ಮಂಡಳಿಯಲ್ಲಿ ಬೌದ್ಧಿಕ ಬಂಡವಾಳ ಇರುವವರ ಕೊರತೆ ಇದೆ. ಆರ್ಥಿಕ ವಿಷಯಗಳ ಬಗೆಗೆ ಚಿಂತಿಸಿದರಷ್ಟೇ ಸಾಲದು. ನಿರ್ದೇಶಕರ ಸಂಘದಲ್ಲಿ ಕೆಲವರಿಗೆ ವಾಣಿಜ್ಯೇತರ ಆಯಾಮಗಳ ಬಗ್ಗೆ ಆಸಕ್ತಿ ಇರಬಹುದು. ಅವರ ಮಾತಿಗೆ ಬೆಲೆ ಸಿಗಬೇಕು.

ವಾಚಕರ ವಾಣಿ

ಯೋಜನೆಗಳಿಗೆ ನಾಮಕರಣ: ವಿವೇಚನೆ ಇರಲಿ

ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಯ ರಾಜ್ಯ ನಾಯಕರು ತಮ್ಮ ಅಧಿಕಾರಾವಧಿಯಲ್ಲಿ ಹೈಕಮಾಂಡ್ ಅನ್ನು ಓಲೈಸುವ ಸಲುವಾಗಿ ರಾಜ್ಯದ ಯೋಜನೆಗಳಿಗೆ ತಮ್ಮ ಪಕ್ಷದ ರಾಷ್ಟ್ರ ಮುಖಂಡರ ಹೆಸರಿಡುವ ಚಾಳಿಯ ಕುರಿತು ಕಲ್ಯಾಣ ರಾಮನ್ ಚಂದ್ರಶೇಖರನ್ ಅವರು ವ್ಯಕ್ತಪಡಿಸಿರುವ ಅಭಿಪ್ರಾಯ (ವಾ.ವಾ., ಮಾರ್ಚ್ 12) ಅರ್ಥಪೂರ್ಣವಾಗಿದೆ. ಪಕ್ಷ ಯಾವುದೇ ಇರಲಿ ನಮ್ಮ ದೇಶದ ರಾಜಕಾರಣಿಗಳ ಮನಃಸ್ಥಿತಿ ಒಂದೇ. ರಾಜ್ಯದ ಕಾಂಗ್ರೆಸ್ ನಾಯಕರು ತಮ್ಮ ಪಕ್ಷದ ನಾಯಕರ ಹೆಸರನ್ನು ಊರು-ಕೇರಿ ಹಾಗೂ ಯೋಜನೆಗಳಿಗೆ ಇರಿಸಿದರು. ಹೈಕಮಾಂಡ್ ಸಂಸ್ಕೃತಿಯನ್ನು ಕಟುವಾಗಿ ಟೀಕಿಸುತ್ತಿದ್ದ ಬಿಜೆಪಿಯವರೂ ತಮ್ಮ ಅಧಿಕಾರಾವಧಿಯಲ್ಲಿ ಅದನ್ನೇ ಮುಂದುವರಿಸಿದರು. ಪಕ್ಷಗಳು ಭಿನ್ನವಾದರೂ ನಾಯಕರ ನಡವಳಿಕೆ ಮಾತ್ರ ಭಿನ್ನವಾಗಿಲ್ಲ. ಫಲಕಗಳಲ್ಲಿ ರಾರಾಜಿಸುವ ಕೆಲವು ನಾಯಕರ ಸಾಧನೆ ಏನು ಎಂಬುದು ರಾಜ್ಯದ ಜನರಿಗಿರಲಿ ಆ ಪಕ್ಷಗಳ ಬಹುತೇಕ ಕಾರ್ಯಕರ್ತರಿಗೇ ತಿಳಿದಿರುವುದಿಲ್ಲ ಎಂಬುದು ಸೂರ್ಯನ ಬೆಳಕಿನಷ್ಟೇ ಸತ್ಯ.

ಮತ್ತೊಂದೆಡೆ, ವಿದೇಶಿ, ವಸಾಹತುಶಾಹಿ ನಾಯಕರಾದರೂ ಕಬ್ಬನ್, ಬೌರಿಂಗ್, ಆರ್.ಎಸ್.ಡಾಬ್ಸ್, ಕನ್ನಿಂಗ್‌ಹ್ಯಾಮ್ ಅವರಂತಹ ಕೆಲವು ಬ್ರಿಟಿಷ್ ಆಡಳಿತಗಾರರು ರಾಜ್ಯಕ್ಕೆ ನೀಡಿದ ಕೊಡುಗೆ ಅಪಾರ. ಮಹಿಳೆಯರಿಗೆ ಶಿಕ್ಷಣ ಸೇರಿದಂತೆ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತಂದರು. ರೈಲು ಮಾರ್ಗ ನಿರ್ಮಾಣ, ವಿವಿಧ ಇಲಾಖೆಗಳ ವರ್ಗೀಕರಣ, ರಸ್ತೆ, ಸೇತುವೆ ನಿರ್ಮಾಣ, ಜನರನ್ನು ಸುಲಿಗೆ ಮಾಡುತ್ತಿದ್ದ ಅನೇಕ ತೆರಿಗೆ ಪದ್ಧತಿಗಳ ವಜಾ, ಬಾಲಬ್ರೂಯಿ ವಸತಿಗೃಹ, ನಂದಿಬೆಟ್ಟದ ಬ್ರಿಟಿಷ್ ಬಂಗಲೆ, ದೇವರಾಯನದುರ್ಗ ಬೆಟ್ಟದ ಮೇಲಿನ ಬಂಗಲೆ, ಬೆಂಗಳೂರಿನಿಂದ ಹರಿಹರದವರೆಗೆ ಹೆದ್ದಾರಿ ಹಾಗೂ ಹಿರಿಯೂರಿನಿಂದ ಬಳ್ಳಾರಿಯವರೆಗೆ ಹೆದ್ದಾರಿ ನಿರ್ಮಾಣ, ಹಿರಿಯೂರು, ಮದ್ದೂರು, ಶ್ರೀರಂಗಪಟ್ಟಣ, ಶಿವಮೊಗ್ಗದಲ್ಲಿ ಸೇತುವೆ ನಿರ್ಮಾಣ ಆದುದು ಕಬ್ಬನ್ ಅವಧಿಯಲ್ಲಿ. ಆದಾಗ್ಯೂ ಬ್ರಿಟಿಷ್ ಅಧಿಕಾರಿ ಎಂಬ ಕಾರಣಕ್ಕೆ ಕಬ್ಬನ್ ಪ್ರತಿಮೆಯನ್ನು ಮೂರು ಬಾರಿ ಸ್ಥಳಾಂತರ ಮಾಡಲಾಗಿದೆ. ಆರ್.ಎಸ್. ಡಾಬ್ಸ್ ಹೆಸರಾಗಲಿ, ಪ್ರತಿಮೆಯಾಗಲಿ ಎಲ್ಲೂ ಇಲ್ಲ. ಚಿತ್ರದುರ್ಗದಲ್ಲಿ ಬ್ರಿಟಿಷರು ನಿರ್ಮಿಸಿದ್ದ ಕಟ್ಟಡದಲ್ಲೇ ಇಂದಿಗೂ ಜಿಲ್ಲಾಧಿಕಾರಿ ಕಚೇರಿ ಇದೆ. ಚಿತ್ರದುರ್ಗ ವಿಭಾಗದ ಕಮಿಷನರ್ ಆಗಿದ್ದ ಡಾಬ್ಸ್ ನಿರ್ಮಿಸಿದ ಸೇತುವೆಗಳು ಹಿರಿಯೂರು ತಾಲ್ಲೂಕಿನಲ್ಲಿ ಈಗಲೂ ಬಳಕೆಯಲ್ಲಿವೆ. ರಾಜ್ಯದ ರಸ್ತೆ, ಊರು– ಕೇರಿಗೆ ಹೆಸರು ಇಡಲಾಗಿರುವ ನಮ್ಮ ದೇಶದ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ರಾಜ್ಯಕ್ಕೆ ನೀಡಿದ ಕೊಡುಗೆ ಏನು ಎಂಬ ಪ್ರಶ್ನೆ ನಿಜಕ್ಕೂ ಪ್ರಜ್ಞಾವಂತರನ್ನು ಕಾಡದೇ ಇರದು.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಸಂದೇಶದ ಕಿರಿಕಿರಿಯಿಂದ ಮುಕ್ತಿ ಎಂದು?

'ಈಗಿರುವ 2ಜಿ, 3ಜಿ ಸಿಮ್ಮನ್ನು ಬದಲಾಯಿಸಿ 4ಜಿ ಸೌಕರ್ಯ ಪಡೆಯಲು ಈಗಲೇ ಬಿಎಸ್‌ಎನ್‌ಎಲ್ ಗ್ರಾಹಕ ಕೇಂದ್ರವನ್ನು ಸಂಪರ್ಕಿಸಿ' ಎಂಬ ಸಂದೇಶ ಹಲವು ತಿಂಗಳಿಂದ ಬಿಎಸ್‌ಎನ್‌ಎಲ್ ಗ್ರಾಹಕರ ಮೊಬೈಲಿಗೆ ಬರುತ್ತಲೇ ಇದೆ. ಅದರ ಅನುಸಾರ ಹಲವರು ಗ್ರಾಹಕ ಕೇಂದ್ರಕ್ಕೆ ತೆರಳಿ 4ಜಿ ಸಿಮ್ಮನ್ನು ಪಡೆದೂ ಆಗಿದೆ. ಆದರೂ ಫೋನ್ ಮಾಡುವಾಗ ಆ ಸಂದೇಶದ ಕಿರಿಕಿರಿ ದನಿ ಈಗಲೂ ಬರುತ್ತದೆ. ತುರ್ತಾಗಿ ಯಾರಿಗಾದರೂ ಫೋನ್ ಮಾಡಿದಾಗಲಂತೂ ಈ ಸಂದೇಶವು ನಮ್ಮ ಸಹನೆಯನ್ನು ಪರೀಕ್ಷಿಸುತ್ತದೆ. ಧ್ವನಿ ಸಂದೇಶ ಮಾತ್ರವಲ್ಲ ಎಸ್‌ಎಂಎಸ್ ಮೂಲಕವೂ ಪದೇಪದೇ ಇಂಥ ಸಂದೇಶ ಬರುತ್ತದೆ. 'ಶೀಘ್ರದಲ್ಲೇ 4ಜಿ ಸೇವೆಯನ್ನು ಕರ್ನಾಟಕದಲ್ಲಿ ವಿಸ್ತರಿಸಲಾಗುವುದು' ಎಂದು ಆರು ತಿಂಗಳಿನಿಂದಲೂ ಭರವಸೆ ನೀಡಲಾಗುತ್ತಲೇ ಇದೆ.

ವಿಪರ್ಯಾಸವೆಂದರೆ, ಬಿಎಸ್‌ಎನ್‌ಎಲ್ ಕಚೇರಿಗಳು ಬಹುತೇಕ ಮುಚ್ಚಿರುತ್ತವೆ. ಆ ಕಚೇರಿಗಳ ಗೇಟುಗಳಲ್ಲಿ ಒಬ್ಬ ಹುಡುಗ ಮಾಹಿತಿ ನೀಡಲು ಕೂತಿರುತ್ತಾನೆ. 'ಅಣ್ಣ, ನೀನು ಬಿಎಸ್‌ಎನ್‌ಎಲ್ ನೌಕರನಾ?' ಎಂದು ಕೇಳಿದರೆ 'ಅಲ್ಲ' ಅನ್ನುತ್ತಾನೆ. ಫೋನ್ ಬಿಲ್ ಕಟ್ಟಿಸಿಕೊಳ್ಳುತ್ತಾನೆ, ಆದರೆ ರಸೀದಿ ನೀಡುವುದಿಲ್ಲ. 'ನಿಮ್ಮ ಮೊಬೈಲ್ ಫೋನಿನಲ್ಲಿ ಮೆಸೇಜ್ ಬರುತ್ತೆ ಸರ್' ಅನ್ನುತ್ತಾನೆ. ಈ ಸಂಸ್ಥೆಯನ್ನು ಇಂತಹ ದುಃಸ್ಥಿತಿಗೆ ತಂದು ನಿಲ್ಲಿಸಲಾಗಿದೆ. ಗ್ರಾಹಕರಾದ ನಾವು ಈ ಬಗ್ಗೆ ಯಾರಲ್ಲಿ ಕೇಳಬೇಕು, ಗೊತ್ತಾಗುತ್ತಿಲ್ಲ.

ಟಿ.ಸುರೇಂದ್ರ ರಾವ್, ಬೆಂಗಳೂರು

ನೈತಿಕ ಶಿಕ್ಷಣ: ಗಂಭೀರವಾಗಿ ಪರಿಗಣಿಸಿ

ಶಿಕ್ಷಣ ವ್ಯವಸ್ಥೆಯಲ್ಲಿ ಇತ್ತೀಚೆಗೆ ತುಂಬಾ ಪರಿವರ್ತನೆ ಆಗಿದೆ. ಹಿಂದೆ ನೈತಿಕ ಪಾಠಗಳು ಪಠ್ಯದಲ್ಲಿ ಸೇರಿಕೊಂಡಿರುತ್ತಿದ್ದವು. ವಿದ್ಯಾರ್ಥಿಗಳ ಮಾನಸಿಕ, ಬೌದ್ಧಿಕ ಬೆಳವಣಿಗೆಯಲ್ಲಿ ನೈತಿಕ ಶಿಕ್ಷಣ ತುಂಬಾ ಸಹಕಾರಿ. ಈಗ ನೈತಿಕ ಶಿಕ್ಷಣದ ಪಾಠ ಮತ್ತೊಮ್ಮೆ ಮುನ್ನೆಲೆಗೆ ಬರುತ್ತಿರುವುದು ನಿಜಕ್ಕೂ ಶ್ಲಾಘನೀಯ. ಹದಿಹರೆಯದ ಮಕ್ಕಳ ಮನಸ್ಸು ಚಂಚಲವಾಗಿರುತ್ತದೆ. ಈ ವಯಸ್ಸಿನಲ್ಲಿ ಅವರ ಮೇಲೆ ಸೂಕ್ಷ್ಮ ನಿಗಾ ವಹಿಸುವ ಅಗತ್ಯವಿದೆ. ಅವರ ದುರ್ಬಲ ಮನಸ್ಸನ್ನು ಬೌದ್ಧಿಕವಾಗಿ, ದೈಹಿಕವಾಗಿ ಪ್ರಬಲಗೊಳಿಸಲು ನೈತಿಕ ಶಿಕ್ಷಣ ತುಂಬಾ ಸಹಕಾರಿ. ಇದನ್ನು ಶಿಕ್ಷಣ ಇಲಾಖೆ ಗಂಭೀರವಾಗಿ ಪರಿಗಣಿಸಿ, ಚಿಂತನೆ ನಡೆಸಿ ಪರಿಹಾರ ಕಂಡುಕೊಳ್ಳಬೇಕು.

ಎಚ್.ಎಸ್.ಟಿ.ಸ್ವಾಮಿ, ಚಿತ್ರದುರ್ಗ

ಬೇಡ ಎ.ಐ. ಶಿಕ್ಷಕ!

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದ ಮೂಲಕ ಅಗಾಧ ಪ್ರಗತಿ ಸಾಧಿಸಬಹುದು ಎಂದು ವಸಂತ ಶೆಟ್ಟಿ ಅಭಿಪ್ರಾಯಪಟ್ಟಿದ್ದಾರೆ (ಪ್ರ.ವಾ., ಮಾರ್ಚ್ 12). ನಾವು ಆಧುನಿಕ ವೈಜ್ಞಾನಿಕ ಯುಗದಲ್ಲಿ ಇದ್ದೇವಾದ್ದರಿಂದ ಎ.ಐನ ಬಳಕೆಯನ್ನು ನಮ್ಮ ದೇಶದಲ್ಲಿ ಯೋಗ್ಯ ಸ್ಥಳಗಳಲ್ಲಿ ಪ್ರಯೋಗಿಸೋಣ ಎನ್ನುವುದು ಸಮ್ಮತವಾದದ್ದೇ. ಆದರೆ ಎಲ್ಲಿ ಪ್ರಯೋಗಿಸಬೇಕು ಎನ್ನುವುದನ್ನು ಯೋಚಿಸಬೇಕಾದ ಸಂದರ್ಭ ಇದು!

ಇಂದಿನ ಯುಗದಲ್ಲಿ ನಾವು ಕಂಡುಕೊಂಡಂತೆ ಮಾನವೀಯ ಸಂಬಂಧಗಳು ಅಳಿಯುತ್ತಾ ನಡೆದಿವೆ. ಹೀಗಾಗಿ, ಈ ಜಗತ್ತಿಗೆ ಅನಿವಾರ್ಯವಾದ ಮಾನವೀಯ ಸಂಬಂಧಗಳನ್ನು ಉಳಿಸಿಕೊಳ್ಳುವ ಬಗ್ಗೆ ಚಿಂತಿಸಬೇಕಾಗಿದೆ. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣದ ಹಂತಗಳಲ್ಲಿ ಎ.ಐ. ಗುರುಗಳನ್ನು ನೇಮಿಸಬೇಕು ಎನ್ನುವುದು ಸರಿಯಲ್ಲ. ಶಾಲೆಗಳಲ್ಲಿ ಶಿಕ್ಷಕರೇ ಇರಬೇಕಾದದ್ದು ಅತ್ಯವಶ್ಯ. ಶಿಕ್ಷಣದ ಜೊತೆಯಲ್ಲಿ ಮಾನವೀಯ ಸಂಬಂಧಗಳ ಮಹತ್ವದ ಬಗ್ಗೆಯೂ ಮನವರಿಕೆ ಮಾಡಿಕೊಡಬೇಕಾದ ಅನಿವಾರ್ಯ ಇದೆ. ಆದ್ದರಿಂದ ಶಾಲೆಗಳಲ್ಲಿ ಶಿಕ್ಷಕರೇ ಇರಬೇಕು. ಇವರ ಮಮತೆ, ಕಾಳಜಿಯ ಮಾರ್ಗದರ್ಶನವು ಮಕ್ಕಳಿಗೆ ಬೇಕೇ ಬೇಕು. ಎ.ಐ. ವ್ಯವಸ್ಥೆಯನ್ನು ಏನಿದ್ದರೂ ಮಕ್ಕಳು 18 ವರ್ಷ ದಾಟಿದ ನಂತರವಷ್ಟೇ ಒದಗಿಸುವುದು ಒಳ್ಳೆಯದು.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮರ್ಯಾದೆಗೇಡು ಹತ್ಯೆ ಕೊನೆಯಾಗಲಿ ಕ್ರೌರ್ಯ



ತೆಲಂಗಾಣದಲ್ಲಿ 2018ರಲ್ಲಿ ನಡೆದಿದ್ದ ಮರ್ಯಾದೆಗೇಡು ಹತ್ಯೆಯ ಪ್ರಮುಖ ಆರೋಪಿಗೆ ಅಲ್ಲಿನ ನ್ಯಾಯಾಲಯ ಗಲ್ಲು ಶಿಕ್ಷೆ ವಿಧಿಸಿದೆ. ತಮಿಳುನಾಡಿನ ಮೆಟ್ಟುಪಾಳ್ಯಂನಲ್ಲಿಯೂ ಮರ್ಯಾದೆಗೇಡು ಹತ್ಯೆ ಪ್ರಕರಣದ ಆರೋಪಿಗೆ ಇದೇ ಜನವರಿಯಲ್ಲಿ ಮರಣ ದಂಡನೆ ವಿಧಿಸಲಾಗಿತ್ತು. ಇಂಥ ಪ್ರಕರಣಗಳ ವಿರಳ ತೀರ್ಪುಗಳ ಹೊರತಾಗಿ ಮರ್ಯಾದೆಯ ಹೆಸರಿನಲ್ಲಿ ಪ್ರಬಲ ಜಾತಿಗಳು ದಲಿತರೂ ಸೇರಿದಂತೆ ಇತರ ದುರ್ಬಲ ಜಾತಿಗಳ ಜನರ ಮೇಲೆ ಎಸಗುತ್ತಿರುವ ಕ್ರೌರ್ಯದ ವಿಚಾರದಲ್ಲಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಆಗುತ್ತಿಲ್ಲ ಎನ್ನುವ ದೂರು ವ್ಯಾಪಕವಾಗಿದೆ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ತೆಲಂಗಾಣದ ನಲ್ಗೊಂಡ ಜಿಲ್ಲೆಯಲ್ಲಿ 2018ರಲ್ಲಿ ನಡೆದಿದ್ದ ಮರ್ಯಾದೆಗೇಡು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಲ್ಲಿನ ಎಸ್‌ಸಿ/ಎಸ್‌ಟಿ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು ಪ್ರಮುಖ ಆರೋಪಿಗೆ ಮೂರು ದಿನಗಳ ಹಿಂದೆ ಮರಣ ದಂಡನೆ ಶಿಕ್ಷೆ ವಿಧಿಸಿದ್ದು, ಇತರೆ ಆರು ಮಂದಿಗೆ ಜೀವಾವಧಿ ಶಿಕ್ಷೆ ನೀಡಿದೆ. ಬುಧವಾರ (ಮಾರ್ಚ್ 12) ಉತ್ತರ ಪ್ರದೇಶದ ಸಹಾರನ್‌ಪುರ ಜಿಲ್ಲೆಯಲ್ಲಿ 24 ವರ್ಷದ ಯುವಕ ಮತ್ತು 17 ವರ್ಷದ ಬಾಲಕಿಯ ಶವಗಳು ಸೇತುವೆಯೊಂದರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಇದು ಮರ್ಯಾದೆಗೇಡು ಹತ್ಯೆ ಎಂದು ಅಲ್ಲಿನ ಪೊಲೀಸರು ಶಂಕಿಸಿದ್ದಾರೆ. ತೆಲಂಗಾಣದ ಕೋರ್ಟ್ ಹೊರಡಿಸಿರುವ ಆದೇಶದ ಬೆನ್ನಲ್ಲೇ, ಜಾತಿ, ಕುಟುಂಬದ ಮರ್ಯಾದೆಯ ಹೆಸರಿನಲ್ಲಿ ನಡೆಯುತ್ತಿದ್ದ ಹತ್ಯೆಗಳು ಮತ್ತು ಇಂಥ ಹೇಯ ಕೃತ್ಯ ಎಸಗಿದವರಿಗೆ ಶಿಕ್ಷೆ ನೀಡುವ ವಿಚಾರವು ಮತ್ತೆ ಮುನ್ನೆಲೆಗೆ ಬಂದಿದೆ.

ಮರ್ಯಾದೆಯ ಹೆಸರಿನಲ್ಲಿ ಪ್ರತಿವರ್ಷ ಜಗತ್ತಿನಲ್ಲಿ 5,000 ಮಹಿಳೆಯರ ಹತ್ಯೆಗಳು ನಡೆಯುತ್ತಿವೆ ಎಂದು ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿ (ಯುಎನ್‌ಎಫ್‌ಪಿಎ) ಹೇಳಿದೆ. ಜಗತ್ತಿನ ಬಹುತೇಕ ಎಲ್ಲ ಧರ್ಮ ಮತ್ತು ಪ್ರದೇಶಗಳಲ್ಲಿಯೂ ಈ ಅಮಾನವೀಯ ನಡವಳಿಕೆ ಜಾರಿಯಲ್ಲಿದೆ ಎಂದೂ ಅದು ವರದಿಯಲ್ಲಿ ಉಲ್ಲೇಖಿಸಿದೆ. ಅದರ ಪ್ರಕಾರ, ಜಗತ್ತಿನಲ್ಲಿಯೇ ಅತಿ ಹೆಚ್ಚು ಮರ್ಯಾದೆಗೇಡು ಹತ್ಯೆಗಳು ಭಾರತ ಮತ್ತು ಪಾಕಿಸ್ತಾನದಲ್ಲಿ ನಡೆಯುತ್ತಿವೆ.

ಭಾರತದಲ್ಲಿ ತಮ್ಮ ಇಷ್ಟಕ್ಕೆ ವಿರುದ್ಧವಾಗಿ, ಸಾಮಾಜಿಕವಾಗಿ ಕೆಳಜಾತಿಯ, ಭಿನ್ನ ಧರ್ಮದ ಯುವಕ/ಯುವತಿಯನ್ನು ಪ್ರೀತಿಸುವ/ಮದುವೆಯಾಗುವವರನ್ನು ಹತ್ಯೆ ಮಾಡುವ ಕೆಟ್ಟ ನಡವಳಿಕೆ ಬಹಳ ಹಿಂದಿನಿಂದಲೂ ಇದೆ. ಜಾತಿ, ಮನೆತನದ ಮರ್ಯಾದೆಗೆ ಕುತ್ತು ತಂದರು ಎಂದು ಮಹಿಳೆಯರ ಮೇಲೆ ಹಲ್ಲೆ ಮಾಡುವುದು, ಸುಡುವುದು, ನೇಣಿಗೆ ಹಾಕುವುದು, ಗುಂಡು ಹಾರಿಸುವುದು ಹೀಗೆ ಹಲವು ರೀತಿಯಲ್ಲಿ ಹಿಂಸೆಗೀಡುಮಾಡಿ ಕೊಲ್ಲಲಾಗುತ್ತಿದೆ. ಪ್ರಬಲ ಜಾತಿ/ ಧರ್ಮಗಳ ಜನರು ತಮ್ಮ ಜಾತಿ, ಕುಟುಂಬದ ಮರ್ಯಾದೆಯ ನೆಪದಲ್ಲಿ ದಲಿತ ಮತ್ತು ಹಿಂದುಳಿದ ಹಾಗೂ ದುರ್ಬಲ ಜಾತಿಗಳ ಮೇಲೆ ಕ್ರೌರ್ಯ ನಡೆಸಿರುವುದು ಅನೇಕ ಪ್ರಕರಣಗಳ ಮೂಲಕ ಸಾಬೀತಾಗಿದೆ.

ಜೋರ್ಡನ್‌ನಂಥ ಕೆಲವು ರಾಷ್ಟ್ರಗಳಲ್ಲಿ ಮರ್ಯಾದೆಗೇಡು ಹತ್ಯೆಗಳನ್ನು ಎಸಗುವುದು ಗುರುತರ ಅಪರಾಧವೇನಲ್ಲ. ಹೆಚ್ಚಿನ ಸಲ ಅವರನ್ನು ತಪ್ಪಿತಸ್ಥರು ಎಂದೇ ಪರಿಗಣಿಸಲಾಗುವುದಿಲ್ಲ. ಕೆಲವೊಮ್ಮೆ ಮಾತ್ರ ಅವರಿಗೆ ಸಣ್ಣಪುಟ್ಟ ಶಿಕ್ಷೆ ವಿಧಿಸಲಾಗುತ್ತದೆ. ಆದರೆ, ಭಾರತದ ಸಂವಿಧಾನದ ಪ್ರಕಾರ, ಮರ್ಯಾದೆಯ ಹೆಸರಿನಲ್ಲಿ ನಡೆಯುವ ಹತ್ಯೆಗಳು ಸೇರಿದಂತೆ ಎಲ್ಲ ಹತ್ಯೆಗಳೂ ಶಿಕ್ಷಾರ್ಹಅಪರಾಧ.

ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಪ್ರದಾಯಿಕ ಆಚರಣೆ/ ಪದ್ಧತಿಗಳ ಉಲ್ಲಂಘನೆಯ ಕಾರಣಕ್ಕೆ ನಡೆಸಲಾಗುವ ಯಾವುದೇ ರೀತಿಯ ಹಿಂಸೆ, ಒತ್ತಾಯ, ಹಲ್ಲೆ, ಕೊಲೆಯನ್ನು ಅಪರಾಧ ಎಂದೇ ಭಾರತದಲ್ಲಿ ಪರಿಗಣಿಸಲಾಗುತ್ತದೆ. ದೇಶದ ಪ್ರತಿಯೊಬ್ಬ ವಯಸ್ಕ ಹೆಣ್ಣು/ಗಂಡು ಜಾತಿ, ಧರ್ಮ, ಪ್ರಾಂತ್ಯ ಭೇದ ಇಲ್ಲದೇ ತಮಗೆ ಇಷ್ಟವಾದವರನ್ನು ಪ್ರೀತಿಸುವ, ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ, ಮದುವೆಯಾಗುವ ಹಕ್ಕು ಸಂವಿಧಾನದ 19 ಮತ್ತು 20ನೇ ವಿಧಿಗಳಲ್ಲಿ ಇದೆ.

ಹಿಂದೂ ವಿವಾಹ ಕಾಯ್ದೆಯ ಅನ್ವಯ ಅಂತರ್‌ಜಾತೀಯ ಮದುವೆಗಳು ನಿಷಿದ್ಧವಲ್ಲ ಎಂದು ಲತಾ ಸಿಂಗ್ ಮತ್ತು ಉತ್ತರ ಪ್ರದೇಶ ರಾಜ್ಯ ಹಾಗೂ ಇತರರ ಪ್ರಕರಣದಲ್ಲಿ (2006ರ ಜುಲೈ 7) ಪುನರುಚ್ಚರಿಸಿದ್ದ ಸುಪ್ರೀಂ ಕೋರ್ಟ್, ದೇಶದಲ್ಲಿ ಜಾತಿ ಮೀರಿ ಮದುವೆಯಾಗುವ ದಂಪತಿಗೆ ರಕ್ಷಣೆ ಒದಗಿಸುವಂತೆ ಪೊಲೀಸರಿಗೆ ಸೂಚಿಸಿತ್ತು.

ಆದರೆ, ಕರ್ನಾಟಕವೂ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿ ಮರ್ಯಾದೆಗೇಡು ಹತ್ಯೆಗಳು ವರದಿಯಾಗುತ್ತಲೇ ಇವೆ. ಉತ್ತರ ಭಾರತದ ರಾಜ್ಯಗಳಲ್ಲಿ ಖಾಪ್ ಪಂಚಾಯತ್‌ಗಳು, ದಕ್ಷಿಣದಲ್ಲಿ ಜಾತಿ ಸಂಘಟನೆ/ಗುಂಪುಗಳು ಪ್ರಬಲವಾಗಿರುವುದು ಕೂಡ ಇದಕ್ಕೆ ಕಾರಣವಾಗಿದೆ. ಈ ಪ್ರಕರಣಗಳಲ್ಲಿ ಆರೋಪಿಗಳಿಗೆ ಸರಿಯಾದ ಶಿಕ್ಷೆ ಆಗದಿರುವುದು ಕೂಡ ಪ್ರಕರಣಗಳು ಹೆಚ್ಚಾಗಲು ಕಾರಣ ಎನ್ನುವ ಅಭಿಪ್ರಾಯ ಕಾನೂನು ತಜ್ಞರಲ್ಲಿದೆ.


ಬೇಕಿದೆ ಪ್ರತ್ಯೇಕ ಕಾನೂನು: ಮರ್ಯಾದೆಗೇಡು ಹತ್ಯೆಗಳನ್ನು ತಡೆಯಲು ಪ್ರತ್ಯೇಕ ಕಾಯ್ದೆಯನ್ನು ತರಬೇಕು ಎನ್ನುವ ಒತ್ತಾಯ ಬಹಳ ವರ್ಷಗಳಿಂದಲೂ ಕೇಳಿಬರುತ್ತಿದ್ದರೂ ಈ ದಿಕ್ಕಿನಲ್ಲಿ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರಗಳಾಗಲಿ ದೃಢವಾದ ಹೆಜ್ಜೆ ಇಟ್ಟಿಲ್ಲ. ಮರ್ಯಾದೆಗೇಡು ಹತ್ಯೆಯ ಪ್ರವೃತ್ತಿ ಇರುವ ಜಿಲ್ಲೆಗಳನ್ನು ಗುರುತಿಸುವುದು, ಜಾತಿ ಮೀರಿ ಮದುವೆಯಾದ ದಂಪತಿಗೆ ರಕ್ಷಣೆ ನೀಡುವುದು, ಅಕ್ರಮವಾಗಿ ಗುಂಪು ಸೇರುವುದನ್ನು ನಿಷೇಧಿಸುವುದು, 24/7 ಸಹಾಯವಾಣಿ ಸ್ಥಾಪನೆ ಮಾಡುವುದು, ಕಾನೂನಿನ ಬಗ್ಗೆ ಅರಿವು ಮೂಡಿಸುವುದು ಮಾಡಬೇಕು ಎಂದು ಸುಪ್ರಿಂ ಕೋರ್ಟ್ ಶಕ್ತಿವಾಹಿನಿ ಮತ್ತು ಭಾರತ ಸರ್ಕಾರ, ಇತರರ (2018) ಪ್ರಕರಣದಲ್ಲಿ ಮಾರ್ಗಸೂಚಿ ಪ್ರಕಟಿಸಿತ್ತು.

ಮರ್ಯಾದೆಗೇಡು ಹತ್ಯೆಗಳನ್ನು ತಡೆಯುವ ಸಂಬಂಧ ಪ್ರತ್ಯೇಕ ಕಾಯ್ದೆ ತರುವ ವಿಚಾರದ ಬಗ್ಗೆ ಆಗಲಿ, ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿಗಳ ಪಾಲನೆಯ ವಿಚಾರದ ಬಗ್ಗೆ ಆಗಲಿ, ರಾಜ್ಯಗಳು ಹೆಚ್ಚು ಆಸಕ್ತಿ ವಹಿಸುತ್ತಿಲ್ಲ. ಇದರಿಂದ ಮರ್ಯಾದೆಗೇಡು ಪ್ರಕರಣಗಳು ವರದಿಯಾದ ಪ್ರಮಾಣದಲ್ಲಿಯೇ ಅವುಗಳ ಆರೋಪಿಗಳಿಗೆ ಶಿಕ್ಷೆ ಆಗುತ್ತಿಲ್ಲ ಎನ್ನುವ ದೂರು ವ್ಯಾಪಕವಾಗಿದೆ.

ಆಧಾರ: ಪಿಟಿಐ, ಸೆಂಟರ್ ಫಾರ್ ಲಾ ಆ್ಯಂಡ್ ಪಾಲಿಸಿ ರಿಸರ್ಚ್, ಸಂಸತ್ತಿನಲ್ಲಿ ಸಚಿವರ ಉತ್ತರಗಳು, ಎನ್‌ಸಿಆರ್‌ಬಿ ವರದಿಗಳು


ಪೊಲೀಸರು ಮರ್ಯಾದೆಗೇಡು ಹತ್ಯೆ ಪ್ರಕರಣಗಳ ತನಿಖೆಯನ್ನೂ ಕೊಲೆ ಪ್ರಕರಣದ ಸೆಕ್ಷನ್ ಅಡಿಯೇ ನಡೆಸುತ್ತಾರೆ. ಭಾರತೀಯ ನ್ಯಾಯ ಸಂಹಿತೆ ಅಥವಾ ಹಿಂದಿನ ಐಪಿಸಿಯಲ್ಲೂ ಈ ಪ್ರಕರಣಗಳಿಗೆ ಪ್ರತ್ಯೇಕ ಸೆಕ್ಷನ್ ಇಲ್ಲ. ತನಿಖೆ ನಡೆಸುವ ಪೊಲೀಸರು ಕೋರ್ಟ್‌ಗೆ ಸಲ್ಲಿಸುವ ಆರೋಪಪಟ್ಟಿಯಲ್ಲಿ ಯಾವ ಕಾರಣಕ್ಕೆ ಕೊಲೆ ನಡೆದಿದೆ ಎಂಬುದನ್ನು ಉಲ್ಲೇಖಿಸುತ್ತಾರೆ. ಮರ್ಯಾದೆಗೇಡು ಹತ್ಯೆ ಪ್ರಕರಣವು ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 103ರ (ಹಿಂದಿನ ಐಪಿಸಿ ಸೆಕ್ಷನ್ 302) ವ್ಯಾಪ್ತಿಗೆ ಬರುತ್ತದೆ. ಎನ್‌ಸಿಆರ್‌ಬಿಯು 2014ರಿಂದ ಮರ್ಯಾದೆಗೇಡು ಹತ್ಯೆ ಪ್ರಕರಣಗಳನ್ನು ತನ್ನ ವರದಿಯಲ್ಲಿ ಪ್ರತ್ಯೇಕವಾಗಿ ಉಲ್ಲೇಖಿಸುತ್ತಿದೆ.

ದೇಶದಲ್ಲಿ ದಾಖಲಾದ ಪ್ರಕರಣಗಳು



ಯಾವ ರಾಜ್ಯದಲ್ಲಿ ಹೆಚ್ಚು?

(2017ರಿಂದ 2022ವರೆಗೆ)



* ಜಾರ್ಖಂಡ್‌ನಲ್ಲಿ 2017ರಲ್ಲಿ 41 ಮರ್ಯಾದೆಗೇಡು ಹತ್ಯೆ ಪ್ರಕರಣ ನಡೆದಿವೆ

** ಮಹಾರಾಷ್ಟ್ರದಲ್ಲಿ 2017ರಲ್ಲಿ ಒಂದೇ ವರ್ಷ 16 ಮರ್ಯಾದೆಗೇಡು ಹತ್ಯೆಗಳು ದಾಖಲಾಗಿವೆ

ಪಾಠವಾಗಲಿ ಮಿರ್ಯಾಲಗೂಡದ ಪ್ರಕರಣ

ತೆಲಂಗಾಣದ ನಲ್ಗೊಂಡ ಜಿಲ್ಲೆಯ ಮಿರ್ಯಾಲಗೂಡದ ದಲಿತ ಪ್ರಣಯ್ ಕುಮಾರ್ ಮತ್ತು ಆರ್ಯ ವೈಶ್ಯ ಸಮುದಾಯಕ್ಕೆ ಸೇರಿದ ಅಮೃತ ವರ್ಷಿಣಿ ಚಿಕ್ಕಂದಿನಿಂದಲೂ ಸ್ನೇಹಿತರಾಗಿದ್ದರು. ತಾರುಣ್ಯಕ್ಕೆ ಅಡಿಯಿಡುವ ವೇಳೆಗೆ ಅವರು ಪ್ರೇಮಿಗಳಾಗಿ ಬದಲಾಗಿದ್ದರು. ಉದ್ಯಮಿಯಾಗಿದ್ದ ಅಮೃತ ವರ್ಷಿಣಿ ತಂದೆ ಮಾರುತಿರಾವ್ ಅವರಿಗೆ ಮಗಳು ದುರ್ಬಲ ಜಾತಿಯ ಯುವಕನನ್ನು ಮದುವೆಯಾಗಿದ್ದನ್ನು ಅರಗಿಸಿಕೊಳ್ಳಲಾಗದೇ, ಸುಪಾರಿ ಹಂತಕರ ನೆರವಿನಿಂದ 2018ರ ಸೆ.14ರಂದು ಪ್ರಣಯ್‌ನನ್ನು ಕೊಲೆ ಮಾಡಿಸಿದರು. ಪ್ರಕರಣದ ಸಂಬಂಧ ಪೊಲೀಸರು 2019ರ ಜೂನ್‌ನಲ್ಲಿ ಎಂಟು ಮಂದಿ ವಿರುದ್ಧ ಆರೋಪಪಟ್ಟಿ ಸಲ್ಲಿಸಿದ್ದರು.

ಪ್ರಕರಣ ವಿಚಾರಣೆಯ ಹಂತದಲ್ಲಿದ್ದಾಗಲೇ, ಮೊದಲ ಆರೋಪಿ ಮಾರುತಿರಾವ್ ಶಿಕ್ಷೆಯಾಗಬಹುದು ಎನ್ನುವ ಭಯದಿಂದ 2020ರಲ್ಲಿ ಆತ್ಮಹತ್ಯೆ ಮಾಡಿಕೊಂಡರು. 78 ಸಾಕ್ಷಿಗಳು ಇದ್ದ ಪ್ರಕರಣದ ಬಗ್ಗೆ ಕೋರ್ಟ್ 250 ವಿಚಾರಣೆಗಳನ್ನು ನಡೆಸಿ ಆದೇಶ ನೀಡಿತು. ಸುಪಾರಿ ಹಂತಕನಾಗಿದ್ದ ಆರೋಪಿ (ಎ2) ಸುಭಾಷ್‌ಕುಮಾರ್ ಶರ್ಮಗೆ ಮರಣ ದಂಡನೆ ವಿಧಿಸಿ, ಉಳಿದ ಆರು ಮಂದಿಗೆ ಜೀವಾವಧಿ ಶಿಕ್ಷೆ ಘೋಷಿಸಿದೆ.



ಬೆಳಕಿಗೆ ಬರುವುದು ಕಡಿಮೆ

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ (ಎನ್‌ಸಿಆರ್‌ಬಿ) ವೆಬ್‌ತಾಣದಲ್ಲಿ 2022ರವರೆಗಿನ ಅಂಕಿ ಅಂಶಗಳು ಲಭ್ಯವಿವೆ. ಅದರ ಪ್ರಕಾರ, 2017ರಿಂದೀಚೆಗೆ ಕರ್ನಾಟಕದಲ್ಲಿ 2021ರಲ್ಲಿ ಮಾತ್ರ ಒಂದು ಮರ್ಯಾದೆಗೇಡು ಪ್ರಕರಣ ನಡೆದಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮರ್ಯಾದೆಗೇಡು ಹತ್ಯೆ ಪ್ರಕರಣಗಳು ನಡೆಯುತ್ತಲೇ ಇರುತ್ತವೆ. ಬಹುತೇಕ ಸಂದರ್ಭಗಳಲ್ಲಿ ಅವು ಹೊರಗೆ ಬರುವುದಿಲ್ಲ. ಜಾತಿಪೀಡಿತ ಸಮಾಜವಾದ್ದರಿಂದ ಅನೇಕ ಪ್ರಕರಣಗಳು ಪೊಲೀಸ್, ನ್ಯಾಯಾಲಯದಲ್ಲಿ ದಾಖಲಾಗುವುದೇ ಇಲ್ಲ. ಒಂದು ವೇಳೆ ಪ್ರಕರಣ ದಾಖಲಾದರೂ ನ್ಯಾಯಬದ್ಧ ರೀತಿಯಲ್ಲಿ ಪ್ರಕ್ರಿಯೆಗಳು ನಡೆದು, ಸೂಕ್ತ ಸಾಕ್ಷ್ಯಗಳು ಸಿಕ್ಕಿ, ಆರೋಪ ಸಾಬೀತಾಗಬೇಕು. ಈ ಬಗ್ಗೆ ಅಧಿಕೃತ ಅಂಕಿಸಂಖ್ಯೆ ಲಭ್ಯವಿಲ್ಲವಾದರೂ ಮರ್ಯಾದೆಗೇಡು ಹತ್ಯೆಗಳ ಸಂಬಂಧ ತಪ್ಪಿತಸ್ಥರಿಗೆ ಶಿಕ್ಷೆ ಆಗುತ್ತಿರುವ ಪ್ರಮಾಣ ಕಡಿಮೆ ಇದ್ದು, ಈ ನಿಟ್ಟಿನಲ್ಲಿ ವಿಶೇಷ ಕಾನೂನು ಜಾರಿ ಮಾಡಬೇಕು ಎನ್ನುವ ಒತ್ತಾಯ ಹಲವು ವರ್ಷಗಳಿಂದ ಕೇಳಿಬರುತ್ತಲೇ ಇದೆ.

ಈ ಹಿಂದೆ ರಾಜ್ಯದ ಮಂಡ್ಯ, ಕೋಲಾರ, ತುಮಕೂರು, ವಿಜಯಪುರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಮರ್ಯಾದೆಗೇಡು ಹತ್ಯೆ ಪ್ರಕರಣಗಳು ವರದಿಯಾಗಿವೆ.

- 2023ರಲ್ಲಿ ಕೋಲಾರ ಜಿಲ್ಲೆಯೊಂದರಲ್ಲೇ ಮೂರು ಮರ್ಯಾದೆಗೇಡು ಹತ್ಯೆ ಪ್ರಕರಣಗಳು ವರದಿಯಾಗಿದ್ದವು. ಅದೇ ವರ್ಷ ರಾಜಧಾನಿ ಬೆಂಗಳೂರಿನಲ್ಲೂ ಒಂದು ಪ್ರಕರಣ ವರದಿಯಾಗಿತ್ತು. ಕಳೆದ ತಿಂಗಳು ಬೆಂಗಳೂರು ಸಮೀಪದ ಆನೇಕಲ್‌ನಲ್ಲಿ ಶಂಕಿತ ಮರ್ಯಾದೆಗೇಡು ಹತ್ಯೆ ಪ್ರಕರಣ ವರದಿಯಾಗಿದೆ
- 2017ರಲ್ಲಿ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಅಂತರಧರ್ಮೀಯ ಮದುವೆಯಾಗಿದ್ದಕ್ಕೆ ಗರ್ಭಿಣಿಯನ್ನು ಆಕೆಯ ಕುಟುಂಬಸ್ಥರು ಕೊಂದಿದ್ದರು. ವಿಜಯಪುರದ ನ್ಯಾಯಾಲಯವು ಹತ್ಯೆ ಮಾಡಿದ್ದ ಇಬ್ಬರಿಗೆ ಗಲ್ಲು ಶಿಕ್ಷೆ ಹಾಗೂ ಇತರ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ ಕಳೆದ ವರ್ಷದ ಮೇ ತಿಂಗಳಲ್ಲಿ ಆದೇಶ ಹೊರಡಿಸಿತ್ತು
- 2019ರಲ್ಲಿ ಗದಗ ಜಿಲ್ಲೆಯ ಗಜೇಂದ್ರಗಡ ತಾಲ್ಲೂಕಿನಲ್ಲಿ, ಕುಟುಂಬಸ್ಥರ ವಿರೋಧದ ನಡುವೆ ಪ್ರೀತಿಸಿ ಮದುವೆಯಾಗಿದ್ದ ಜೋಡಿಯನ್ನು ಕೊಲೆ ಮಾಡಲಾಗಿತ್ತು. ಕೊಲೆಯಾಗಿದ್ದ ಮಹಿಳೆಯ ನಾಲ್ವರು ಸಂಬಂಧಿಕರಿಗೆ ಈ ವರ್ಷದ ಜನವರಿ 29ರಂದು ಗದಗದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಮರಣದಂಡನೆ ವಿಧಿಸಿ ಆದೇಶಿಸಿದೆ

ಸಿನಿ ಬಿಟ್ಸ್

ಹೊರಬಂತು ‘ಠಾಣೆ’ಯ ಹಾಡು



ಹರಿಣಾಕ್ಷಿ

ಎಸ್.ಭಗತ್ ರಾಜ್ ನಿರ್ದೇಶನದ ‘ಠಾಣೆ’ ಚಿತ್ರದ ಹಾಡುಗಳು ಬಿಡುಗಡೆಗೊಂಡಿವೆ. ಕ್ರೈಂ, ಥ್ರಿಲ್ಲರ್ ಕಥೆಯನ್ನು ಹೊಂದಿರುವ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ.

‘20 ವರ್ಷಗಳ ಹಿಂದೆ ಮಾಧ್ಯಮ ಮತ್ತು ಪೊಲೀಸ್ ಠಾಣೆಗಳ ಪ್ರಮಾಣ ಕಡಿಮೆ ಇದ್ದ ಕಾರಣ ಜನರೇ ನ್ಯಾಯಕ್ಕಾಗಿ ಹೋರಾಡಿ ಗಮನ ಸೆಳೆಯುತ್ತಿದ್ದರು. ಆ ಕಾಲದಲ್ಲಿ ಚಿತ್ರದ ನಾಯಕ ಕಾಳಿ ನ್ಯಾಯಕ್ಕಾಗಿ ಯಾವ ರೀತಿಯ ಹೋರಾಟ ಮಾಡಿದ ಎನ್ನುವುದೇ ಚಿತ್ರದ ಕಥೆ. ಹಳೆಯ ಕಟ್ಟಡಗಳು, ಸ್ಥಳಗಳನ್ನು ಹುಡುಕಿ ಚಿತ್ರೀಕರಣ ಮಾಡಲಾಗಿದೆ’ ಎಂದರು ನಿರ್ದೇಶಕರು.

ಹಾಡುಗಳಿಗೆ ಮಾನಸ ಹೊಳ್ಳ ಸಂಗೀತ ಸಂಯೋಜಿಸಿದ್ದಾರೆ. ‘ಒಗಟುಗಳನ್ನು ಬಳಸಿಕೊಂಡು ಒಂದು ಹಾಡು ಸಿದ್ಧಪಡಿಸಿದ್ದೇವೆ. ‘ಮಜಾ ಟಾಕೀಸ್’ ಖ್ಯಾತಿಯ ರೇಮೊ ಇದಕ್ಕೆ ಸಾಹಿತ್ಯ ಬರೆದಿದ್ದಾರೆ. ರಾಜೇಶ್ ಕೃಷ್ಣ, ರೇಮೊ ಮತ್ತು ರಿಯಾಲಿಟಿ ಶೋಗಳಲ್ಲಿ ಹಾಡಿರುವ ಕೆಲ ಮಕ್ಕಳು ಹಾಡುಗಳಿಗೆ ಧ್ವನಿಯಾಗಿದ್ದಾರೆ’ ಎಂದರು ಮಾನಸ ಹೊಳ್ಳ.

ರಂಗಭೂಮಿ ಕಲಾವಿದ ಪ್ರವೀಣ್‌ಗೆ ವಿದುಷಿ ಹರಿಣಾಕ್ಷಿ ಜೋಡಿಯಾಗಿದ್ದಾರೆ. ಗಾಯತ್ರಿ ಎಂ ಬಂಡವಾಳ ಹೂಡಿದ್ದು, ಬಿ.ವಿ. ರಾಜಾರಾಂ, ಬಲ ರಾಜವಾಡಿ, ಪಿ.ಡಿ.ಸತೀಶ್ ಚಂದ್ರ ಮುಂತಾದವರು ಚಿತ್ರದಲ್ಲಿದ್ದಾರೆ. ಪ್ರಶಾಂತ್ ಸಾಗರ್ ಛಾಯಾಚಿತ್ರಗ್ರಹಣ, ಸುರೇಶ್ ಅರಸ್ ಸಂಕಲನವಿದೆ.

‘ವನ್ಯ’ ಸಿನಿಮಾ ಶೀರ್ಷಿಕೆ ಬಿಡುಗಡೆ



ಶೀರ್ಷಿಕೆ ಅನಾವರಣಗೊಳಿಸಿದ ಅಶ್ವಿನಿ ಪುನೀತ್ ರಾಜ್‌ಕುಮಾರ್

ಬಡಿಗೇರ್ ದೇವೇಂದ್ರ ನಿರ್ದೇಶನದ ಹೊಸ ಸಿನಿಮಾದ ಶೀರ್ಷಿಕೆಯನ್ನು ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಇತ್ತೀಚೆಗೆ ಅನಾವರಣಗೊಳಿಸಿದರು.

ಬಡಿಗೇರ್ ದೇವೇಂದ್ರ ಈ ಹಿಂದೆ ‘ರುದ್ರಿ’ ಮತ್ತು ‘ಇನ್’ ಚಿತ್ರಗಳನ್ನು ನಿರ್ದೇಶಿಸಿದ್ದರು. ‘ವನ್ಯ’ ಸಿನಿಮಾಕ್ಕೆ ಚಿತ್ರಕಥೆಯನ್ನೂ ಅವರೇ ಬರೆದಿದ್ದಾರೆ. ಐಡಿಯಾ ವರ್ಕ್ಸ್ ಮೋಷನ್ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಪಲ್ಲವಿ ಅನಂತ್ ಹಾಗೂ ಪೂಮಗಾಮೆ ಜಂಟಿಯಾಗಿ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ.

2010ರಲ್ಲಿ ಇಂಗ್ಲಿಷ್ ಮ್ಯಾಗಜಿನ್ ಒಂದರಲ್ಲಿ ಪ್ರಕಟವಾದ ಲೇಖನದ ಎಳೆಯನ್ನು ತೆಗೆದುಕೊಂಡು, ಅದಕ್ಕೆ ಕಾಲ್ಪನಿಕ ಸ್ಪರ್ಶ ನೀಡಿ ಸಿನಿಮಾ ಮಾಡಿದ್ದಾರೆ. ‘ವನ್ಯ’ ಎಂದರೆ ಹೆಣ್ಣಿನ ಹೆಸರು, ಕಾಡು ಎಂಬ ಅರ್ಥದಲ್ಲೂ ಹೇಳಬಹುದು. ಚಿತ್ರದಲ್ಲಿ ತಂದೆ ಮಗಳ ಬಾಂಧವ್ಯ, ಅರಣ್ಯವನ್ನು ಉಳಿಸಲು ಮಾಡುವ ಹೋರಾಟದ ಕಥೆಯಿದೆ ಎನ್ನುತ್ತಾರೆ ಬಡಿಗೇರ್ ದೇವೇಂದ್ರ. ಬಿರಾದಾರ್, ಮೇಘನ ಬೆಳವಾಡಿ ಮುಖ್ಯಭೂಮಿಕೆಯಲ್ಲಿದ್ದಾರೆ. ಪ್ರಕಾಶ್ ಬೆಳವಾಡಿ, ಶ್ರೀಕಾಂತ್, ಯಶವಂತ ಕುಚಬಾಳ, ಶಿವಮೊಗ್ಗ ರಾಮಣ್ಣ, ಅಶ್ವಿನ್ ಹಾಸನ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ರಾಮಚಂದ್ರ ಹಡಪದ ಸಂಗೀತ, ವಿಜಯ್ ರುಡಾಲ್ಫ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಬೆಂಗಳೂರು, ಮೈಸೂರು ಹಾಗೂ ನಾಗರಹೊಳೆ ದಟ್ಟ ಅರಣ್ಯದಲ್ಲಿ ಚಿತ್ರೀಕರಣ ನಡೆದಿದ್ದು, ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ತಂಡ ತೊಡಗಿಸಿಕೊಂಡಿದೆ. ಏಪ್ರಿಲ್‌ನಲ್ಲಿ ಸಿನಿಮಾ ತೆರೆಗೆ ಬರುವ ಸಾಧ್ಯತೆಯಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಮನಸ್ಸು ಸ್ವಚ್ಛ ಮಾಡಬೇಕು

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

151

ಮನಸ್ಸಿನ ಗುಣಧರ್ಮ ಏನು ಎಂದರೆ, ಒಳ್ಳೆಯದರ ಕಡೆ ಅದರ ಲಕ್ಷ್ಯ ಹರಿಯುವುದಿಲ್ಲ. ಕೆಟ್ಟದ್ದರ ಕಡೆಗೇ ಅದು ಹರಿಯುತ್ತಿರುತ್ತದೆ. ಈಗ ನಮ್ಮ ಬಾಯಲ್ಲಿ 32 ಹಲ್ಲುಗಳು ಇರುತ್ತವೆ. ಒಂದು ಹಲ್ಲು ಬಿದ್ದು ಹೋಯಿತು ಅಂದುಕೊಳ್ಳಿ. ನಾಲಿಗೆ 31 ಹಲ್ಲುಗಳ ಕಡೆ ನೋಡೋದಿಲ್ಲ. ಬಿದ್ದ ಹಲ್ಲಿನ ಜಾಗಕ್ಕೇ ಹೋಗುತ್ತಾ ಇರತ್ತೈತಿ. ನಮ್ಮ ತಲೆಯ ತುಂಬಾ ಕರೀ ಕೂದಲು ಇದ್ದರೂ ಲಕ್ಷ್ಯ ಹೋಗುವುದು ಒಂದೇ ಒಂದು ಬಿಳಿಕೂದಲಿನ ಮೇಲೆ. ಒಳ್ಳೆಯ ಮುಖ ಇದೆ. ಆದರೆ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವುದಿಲ್ಲ. ಮುಖದ ಮೇಲಿನ ಮೊಡವೆ ಮೇಲೆ ನಮ್ಮ ದೃಷ್ಟಿ ಇರುತ್ತದೆ. ಇದು ಮನುಷ್ಯನ ಗುಣ.

ಒಮ್ಮೆ ಬುದ್ಧ, ಶಿಷ್ಯ ಆನಂದನನ್ನು ಕರೆದುಕೊಂಡು ಒಂದು ಊರು ದಾಟುತ್ತಿದ್ದ. ಆಗ ಒಂದು ಸ್ಮಶಾನ ಸಿಕ್ಕಿತು. ಅಲ್ಲಿ ಒಂದು ಶವ ಹೂಳುತ್ತಾ ಇದ್ದರು. ಎಲ್ಲರೂ ಅಳುತ್ತಿದ್ದರು. ಆಗ ಆನಂದ ಬುದ್ಧನಿಗೆ ‘ಎಷ್ಟು ದುಃಖ ಇದೆ ಈ ಜಗತ್ತಿನಲ್ಲಿ. ಹುಟ್ಟುವಾಗ ಅಳು, ಸಾವಿನಲ್ಲಿ ಅಳು, ಏನಿದು ಜಗತ್ತು?’ ಎಂದು ಕೇಳಿದ. ಆಗ ಬುದ್ಧ ‘ನೀನು ಅಳುವವರನ್ನು ನೋಡುತ್ತಿದ್ದಿ. ಒಂದು ಸಮಾಧಿಯ ಬಳಿ ಅವರು ಅಳುತ್ತಿದ್ದಾರೆ. ಅದರ ಬದಿಗೆ ಇರುವ ಇನ್ನೊಂದು ಸಮಾಧಿಯ ಬಳಿ ಒಂದು ಹೂವು ಅರಳಿನಿಂತಿದೆ. ಅದನ್ನು ನೋಡು. ಅಳುವವರ ಮಧ್ಯೆಯೂ ಹೂವು ಅರಳುವುದನ್ನು ನೋಡಬೇಕು ಮನುಷ್ಯ’ ಎಂದು ಹೇಳಿದ.

ನರಳುವವರ ಮಧ್ಯೆ ನಗುವ, ಅಳುವವರ ಮಧ್ಯೆ ಅರಳುವ ಹೂವನ್ನು ನೋಡಿ ಕಲಿಯಬೇಕು ಮನುಷ್ಯ. ಗುಣಗ್ರಾಹಿ ಆಗಬೇಕು, ದೋಷಗ್ರಾಹಿ ಆಗಬಾರದು. ಹೂವು ಮುಳ್ಳುಗಳ ನಡುವೆ ಎಷ್ಟು ಚೆನ್ನಾಗಿ ಅರಳಿದೆ. ಶಿವನ ಮೇಲೆ ಏರಿಸಿದ್ದಾರೆ ಎಂದು ಹೂವು ಸಂತೋಷಪಟ್ಟಿಲ್ಲ. ಹೆಣಕ್ಕೆ ಹಾಕಿದ್ದಾರೆ ಎಂದು ದುಃಖವನ್ನು ಮಾಡಿಕೊಂಡಿಲ್ಲ. ಶಿವ ಶವ ಎರಡೂ ಒಂದೇ, ಅದಕ್ಕೆ ಭೇದವಿಲ್ಲ. ಮುಳ್ಳಿನ ಕರುಳಿನಲ್ಲಿ ಒಂದು ಹೂವು ಬಂದಿದೆ. ಮುಳ್ಳಿನ ತಾಯ್ತನ ಅದು. ಕೆಟ್ಟದ್ದು ಕಾಣುತ್ತದೆ ಎಂದು ಕಣ್ಣು ಮುಚ್ಚಿಕೊಂಡು, ಕೆಟ್ಟದ್ದು ಕೇಳುತ್ತದೆ ಎಂದು ಕಿವಿ ಮುಚ್ಚಿಕೊಂಡು, ನಾಲಿಗೆ ಹಿಡಿದುಕೊಂಡು ಬದುಕಲು ಆಗದು. ಹಾಗಾದರೆ ಏನು ಮಾಡಬೇಕು? ಈಗ ಮನೆ ಇದೆ. ಮನೆಯ ಕಿಟಕಿ ಬಾಗಿಲು ತೆಗೆದರೆ ಹೊರಗಿನ ಹೊಲಸು ಒಳಕ್ಕೆ ಬರುತ್ತದೆ. ಹೊಲಸು ಬೀಳುತ್ತದೆ ಎಂದು ಮುಚ್ಚಿದರೆ ಬದುಕಲು ಆಗುವುದಿಲ್ಲ. ಕಿಟಕಿ ತೆಗೆಯಬೇಕು, ಹೊಲಸು ಬರುತ್ತಿರಬೇಕು. ಬಂದ ಹೊಲಸನ್ನು ಸ್ವಚ್ಛ ಮಾಡುತ್ತಿರಬೇಕು. ಇದು ಜೀವನ.

ನಮ್ಮ ದೇಹ ಅನ್ನೋದು ಒಂದು ಮನೆ. ಕಿವಿ, ಕಣ್ಣು, ನಾಲಿಗೆ ಮುಂತಾದ ಇಂದ್ರಿಯಗಳಿದ್ದಾವಲ್ಲ ಅವು ಕಿಟಕಿ, ಬಾಗಿಲುಗಳಿದ್ದ ಹಾಗೆ. ಬೇಡವಾದ ಹೊಲಸು ನಮ್ಮ ಮನಸ್ಸಿನಲ್ಲಿ ಬಿದ್ದಿರುತ್ತವೆ. ಬಿದ್ದಿದ್ದನ್ನು ಸ್ವಚ್ಛ ಮಾಡುತ್ತಿರಬೇಕು. ಮನಸ್ಸಿನ ಹೊಲಸನ್ನು ಸ್ವಚ್ಛ ಮಾಡಿಕೊಳ್ಳುವವರೇ ಸಂತರು. ಮನುಷ್ಯ ಶುಚಿಯಾಗಿರಬೇಕು. ನಮ್ಮ ಜೀವನ ಶುರುವಾಗುವುದೇ ಸ್ವಚ್ಛತೆಯಿಂದ. ಬೆಳಿಗ್ಗೆ ಎದ್ದ ತಕ್ಷಣ ಮುಖ ತೊಳೆಯುತ್ತೇವೆ, ಬಾಯಿ ತೊಳೆಯುತ್ತೇವೆ, ಕಾಲು ತೊಳೆಯುತ್ತೇವೆ, ಮೈ ತೊಳೆಯುತ್ತೇವೆ. ಹೀಗೆ ನಮ್ಮ ಬದುಕು ಆರಂಭವಾಗುವುದೇ ಸ್ವಚ್ಛತೆಯಿಂದ. ಮಹಿಳೆಯರೂ ಹಾಗೆಯೆ; ಬೆಳಿಗ್ಗೆ ಎದ್ದು ಮನೆಯನ್ನು ಸ್ವಚ್ಛ ಮಾಡುತ್ತಾರೆ. ಹಾಗೆಯೇ ನಾವು ಮನವನ್ನೂ ಸ್ವಚ್ಛ ಮಾಡಿಕೊಳ್ಳಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಮಾರ್ಚ್ 13, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಚತುರ್ದಶಿ ಗಂ. 10-36 ನಕ್ಷತ್ರ: ಪೂರ್ವಫಲ್ಗುನಿ ಅಹೋರಾತ್ರ ಯೋಗ: ಧೃತಿ ಗಂ. 13-03 ಕರಣ: ವಣಿಜ ಗಂ. 10-36, ಕುಂಭ ಮಾಸದ 29 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 3.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-42 **ಸೂರ್ಯಾಸ್ತ :** 06-37

ಮುಸ್ಲಿಂ ದಿನಾಂಕ : 12 ರಂಜಾನ್

ದಿನ ವಿಶೇಷ : ಕಾಮನ ದಹನ, ಅದೃಷ್ಟ ಸಂಖ್ಯೆ : 3, 11

ಮೇಷ: ಉದ್ಯೋಗಿಗಳಿಗೆ ವೃತ್ತಿಯು ತಾತ್ಕಾಲಿಕ ಸಮಾಧಾನ ತಂದರೂ ಬದಲಾವಣೆಗೆ ಅವಕಾಶ ಇರುತ್ತದೆ. ವಕೀಲರಿಗೆ ಜಯ ದೊರೆತು ಹಣ ಬರಲಿದೆ. ಸಂಬಂಧಿಕರೆಲ್ಲ ಹತ್ತಿರದವರಾಗುತ್ತಾರೆ.

ವೃಷಭ: ನಷ್ಟವಾಗುವ ಸೂಚನೆಗಳು ಇರುವುದರಿಂದ ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಯಾವುದೇ ಕೆಲಸವನ್ನು ಒಪ್ಪಿಕೊಳ್ಳಬೇಡಿ. ವೈದ್ಯ ವೃತ್ತಿಯವರಿಗೆ ಆಸ್ಪತ್ರೆಯ ಸೌಲಭ್ಯಗಳು ಹೆಚ್ಚಲಿವೆ.

ಮಿಥುನ: ಸಹೋದ್ಯೋಗಿಗಳಲ್ಲಿ ಪ್ರೀತಿಯಿಂದ ವರ್ತಿಸುವುದರಿಂದ ಕೆಲಸ ಸರಾಗವಾಗಿ ಸಾಗಲಿದೆ. ನಿಮ್ಮಿಚ್ಛೆಯ ಭೂಮಿಯನ್ನೇ ಖರೀದಿಸುವ ಭಾಗ್ಯ ನಿಮ್ಮದಾಗಲಿದೆ. ಸಾಲವನ್ನು ತೀರಿಸಿದ ಸಂತೃಪ್ತಿ ಸಿಗಲಿದೆ.

ಕರ್ಕಾಟಕ: ನೀವು ತೋರಿದ ತಾಳ್ಮೆಗೆ ಪ್ರತಿಯಾಗಿ ನಿಜವಾದ ಕಾರ್ಯಗಳಿಗೆ ಕಾಲ ಕೂಡಿಬರಲಿದೆ. ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಸ್ವಲ್ಪ ಮಟ್ಟಿನ ಹಿನ್ನಡೆ ಉಂಟಾಗಬಹುದು.

ಸಿಂಹ: ಹಣಕಾಸಿನ ಲೆಕ್ಕಾಚಾರವನ್ನು ನೋಡುವವರು ಜಾಗರೂಕತೆಯಿಂದ ಕಾರ್ಯನಿರ್ವಹಿಸಿ. ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು, ನವ ಉಲ್ಲಾಸ ಕಾಣಲಿದ್ದೀರಿ. ಉಡುಪು ವಿನ್ಯಾಸಗಾರರಿಗೆ ಹೇರಳ ಅವಕಾಶಗಳು ಲಭ್ಯ.

ಕನ್ಯಾ: ನಿರೀಕ್ಷೆಗೆ ಅಥವಾ ಪ್ರಯತ್ನಕ್ಕೆ ನಿಲುಕದ ವ್ಯಕ್ತಿಗಾಗಲಿ ಅಥವಾ ವಸ್ತುವಿಗಾಗಲೀ ಕಾಲಹರಣ ಮಾಡದಿರಿ. ಬರಬೇಕಾದದು ಅರಸಿ ಬಂದೇ ಬರುವುದು. ವ್ಯವಹಾರಿಕ ಒತ್ತಡಗಳು ಕಡಿಮೆಯಾಗಲಿವೆ.

ತುಲಾ: ಮನೆಯ ಜವಾಬ್ದಾರಿಯನ್ನು ಮಗನಿಗೆ ವಹಿಸುವ ಆಲೋಚನೆಗಳು ಬರಲಿವೆ. ಆದರೆ, ಈ ತಕ್ಷಣ ಯಾವುದೇ ತರಹದ ತೀರ್ಮಾನ ತೆಗೆದುಕೊಳ್ಳ ಬೇಡಿ. ಮನೆಯವರ ಮಾತಿನಂತೆ ಕೆಲಸ ಕೈಗೊಳ್ಳುವುದು ಉತ್ತಮ.

ವೃಶ್ಚಿಕ: ಕಾರ್ಯಕ್ಷೇತ್ರದಲ್ಲಿ ಆಗಾಗ ಪ್ರಯತ್ನಬಲಕ್ಕೆ ಅಡ್ಡಿ ಆತಂಕಗಳಿದ್ದರೂ ಕಾರ್ಯಸಾಧನೆಯಲ್ಲಿ ಜಯ ಕಾಣುವುದರ ಬಗ್ಗೆ ಸಂದೇಹವಿಲ್ಲ. ಹಣಕಾಸಿನ ಪರಿಸ್ಥಿತಿ ಸುಧಾರಿಸಲಿದೆ. ಬಿಳಿ ಬಣ್ಣದ ಉಡುಗೆ ಶುಭ ತರುವುದು.

ಧನು: ವ್ಯವಹಾರದಲ್ಲಿ ಹೆಚ್ಚಿನ ಸಮಯ ವ್ಯಯಿಸುವುದರಿಂದ ಕಾರ್ಯಗಳನ್ನು ಸುಸ್ಥಿತಿಗೆ ತರಬಹುದು. ಸಹಾಯ ಮನೋಭಾವ ಮಿಕ್ಕವರೆಲ್ಲರಿಗಿಂತ ವಿಭಿನ್ನ ಸ್ಥಾನದಲ್ಲಿ ನಿಲ್ಲಿಸಲಿದೆ.

ಮಕರ: ಮನಸ್ಸಿಗೆ ಅಸಮಾಧಾನ ಆಗುವಂಥ ಹಲವು ಘಟನೆಯು ಬಾಳಲ್ಲಿ ನಡೆಯಲಿದೆ. ಜೀವನಸಂಗಾತಿಯ ಆಯ್ಕೆ ವಿಚಾರದಲ್ಲಿ ಹಿರಿಯರ ಮಾತಿನತ್ತ ಗಮನ ಕೊಡಿ. ಬಂಧು ಮಿತ್ರರು ಮನೆಗೆ ಬರಲಿದ್ದಾರೆ.

ಕುಂಭ: ಅನವಶ್ಯಕ ಚಿಂತೆ, ದೂರ ಪ್ರವಾಸದಿಂದ ಅನವಶ್ಯಕ ಖರ್ಚು ಹಾಗೂ ಹಾಳು ವ್ಯಸನಗಳು ಕಡಿಮೆಯಾಗಲಿವೆ. ವಿದ್ಯಾರ್ಥಿವರ್ಗಕ್ಕೆ ತಮ್ಮ ಅಭ್ಯಾಸದಲ್ಲಿ ಹೆಚ್ಚಿನ ಸಾಧನೆ ಮಾಡಲು ಅವಕಾಶ ಸಿಗಲಿದೆ.

ಮೀನ: ಹೊಸ ಕಾರ್ಯದ ಸಂಪೂರ್ಣ ಜವಾಬ್ದಾರಿ ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ನಿಮ್ಮದಾಗಲಿದೆ. ಆಪ್ತರ ಸಹಾಯದಿಂದ ಉತ್ತಮ ಉದ್ಯೋಗ ಲಭಿಸಲಿದೆ. ಆಹಾರದಲ್ಲಿ ಪಥ್ಯ, ಶುಚಿತ್ವವನ್ನು ಕಾಪಾಡಿಕೊಳ್ಳಿರಿ.

ಪದಬಂಧ 5980

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಪ್ರಕೃತಿಗೆ ಸಂಬಂಧಿಸಿದ್ದು (4)
3.ಅಪ್ಪನ ಈ ರೂಪ ಬಲು ವಿರಳ! (4)
5.ನಡುವಿನಿಂದ ಶುರುವಾದ ಕಂಪನ (3)
8.ಮಿಥ್ಯವಲ್ಲ!ಇದು ಜೋಡಿ! (3)
9.ಪ್ರಮಾಣ ಪತ್ರವನ್ನು ಹೀಗೂ ಹೇಳುವರು (5)
10. ತಲೆಯಲ್ಲಿರುವ ಅನ್ನದ ಪಾತ್ರೆ (3)
12.ಎಲೆ ಅಡಿಕೆ ಚೀಲ (3)
15.ಖಾಲಿಯಾದ ಕೈ! (4)
16.ಆಸೆ ಅಥವಾ ಬಯಕೆ (4)

ಮೇಲಿಂದ ಕೆಳಕ್ಕೆ

1.ಚೀನದಲ್ಲಿ ಕಂಡದ್ದೆಲ್ಲಾ ಹಳೆಯದು ಬಿಡಿ! (3)
2.ಕತ್ತೆತ್ತಿದಾಗ ಕಾಣಿಸಿದ ಗಾರ್ದಭ (2)
3.ಇರುವುದನ್ನು ಹೆಚ್ಚು ಮಾಡಿ ಹೇಳುವುದು (3)
4.ಇದು ಬೇರೆಯವರ ಹಣ (4)
6.ಕಲೆಯಲ್ಲಿರುವ ಆಹ್ವಾನ! (4)
7.ತಾಪದ ಹೊತ್ತಿನಲ್ಲಿ ವ್ಯಕ್ತವಾದ ಅತೀ ದುಃಖ (3)
8.ಗೆಳೆಯನಿಂದ ಆಗಿರುವ ವಂಚನೆ (4)
10.ತರತರದ ಕಾಯಿಪಲ್ಲೆ (4)
11.ಪ್ರಸ್ತದಲ್ಲಿ ಶ್ರೇಷ್ಠವಾದುದು! (3)
13.ಜಾತ್ರೆಯಲ್ಲಿ ಕೂಡಿದ ಜನ ಸಂದಣಿ (3)
14.ಹಿರಿಯ ಸಹೋದರನಿಲ್ಲಿ ಉಲ್ಟಾ ನಿಂತಿದ್ದಾನೆ (2)

1			2	■	3			4
	■	■		■		■	■	
5		6	■	■		■	■	
■	■		■	7	■	8		
■	■	9					■	■
10			■		■		■	■
	■	■	11	■	■	12		13
	■	■		■	14	■	■	
15				■	16			

5979ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕರ್ಕಶ 3.ಸಂಧಾನ
5.ತಲೆತಿರುಕ 6.ಲೆಅ
8.ಸಂತ 9.ಕರು
10.ಷರಾ 14.ಧರ್ಮಬಾಹಿರ
15.ತವಕ 16.ಕಲ್ಯಾಣ

ಮೇಲಿಂದ ಕೆಳಕ್ಕೆ
1.ಕರೆಯೋಲೆ 2.ಶತಕ
3.ಸಂಕಟ 4.ನವಜಾತ
7.ಅತ್ತರು 8.ಸಂತೋಷ
9.ಕರಜಾತ 11.ರಾಮಾಯಣ
12.ಗಂಧಕ 13.ಚರಕ

ಸುಡೊಕು 6365

		5	8				1	
2								
		4			2	8		6
3		6				5		9
	7			2			8	
8		1				3		7
4			6		1		9	
	3			9	5	7		8
6		8	2				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6364 ಸುಡೊಕು


3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಅಡಿಕೆ ಧಾರಣೆ (₹ಗಳಲ್ಲಿ)

ಕಾರ್ಕಳ	
ಹೊಸತು	25000-40000
ಹಳತು	30000-43500
ಕುಮಟ	
ಬೆಟ್ಟೆ	30000-31119
ಚಾಲಿ	36089-37098
ಚಿಪ್ಪು	17699-26509
ಕೋಕ	7019-15899
ಫ್ಯಾಕ್ಟರಿ	6089-24649
ಹೊಸಚಾಲಿ	32100-37199
ಸಿದ್ದಾಪುರ	
ಬಿಳಿಗೋಟು	21519-26599
ಚಾಲಿ	32009-37099
ಕೋಕ	13699-24299
ಹೊಸಚಾಲಿ	28099-35529
ಕೆಂಪುಗೋಟು	20599-27009
ರಾಶಿ	41099-48899
ತಟ್ಟಿಬೆಟ್ಟೆ	28709-40699
ಶಿರಸಿ	
ಬೆಟ್ಟೆ	25110-37399
ಬಿಳಿಗೋಟು	17899-29218
ಚಾಲಿ	32218-37831
ಕೆಂಪುಗೋಟು	16299-23821
ರಾಶಿ	40889-46409

ಷೇರುಪೇಟೆ ವಹಿವಾಟು

72



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,497
ಇಂದಿನ ಅಂತ್ಯ	22,470
▼	27
ದಿನದ ಕನಿಷ್ಠ	22,329

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹430

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹300-663

ದ್ವಿತಳಿ (ಬಿ.ವಿ) ₹80-830

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹191.50

ಆರ್‌ಎಸ್‌ಎಸ್-5 ₹186.50

ಗುಡ್ ಲಾಟ್ ₹180

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹27000
ಎಸಿ	₹16100
ಆರ್‌ಪಿ	₹23000
ಆರ್‌ಸಿ	₹12420

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1410 (1410)
ಸೋಯಾ (ರಿಫೈನ್ಡ್)	₹1325 (1320)
ಸೂರ್ಯಕಾಂತಿ (ರಿಫೈನ್ಡ್)	₹1420 (1420)
ಪಾಮೋಲಿನ್	₹1365 (1360)

ಬೆಳ್ಳಿ ಧಾರಣೆ 3 ವಾರದ ಗರಿಷ್ಠ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ ಮತ್ತು ಬೆಳ್ಳಿ ಬೆಲೆಯು ಏರಿಕೆಯಾಗಿದೆ.

ಪ್ರತಿ ಕೆ.ಜಿ ಬೆಳ್ಳಿ ಧಾರಣೆಯು ₹1,300 ಏರಿಕೆಯಾಗಿದ್ದು, ಮೂರು ವಾರದ ಗರಿಷ್ಠ ಮಟ್ಟವಾದ ₹1.02 ಲಕ್ಷಕ್ಕೆ ತಲುಪಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹60 ಏರಿಕೆಯಾಗಿದ್ದು, ₹88,850 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಧಾರಣೆಯು ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿದ್ದು, ₹88,450 ಆಗಿದೆ.

‘ಆರ್ಥಿಕ ಅನಿಶ್ಚಿತ ಸ್ಥಿತಿ ಹಾಗೂ ಜಾಗತಿಕ ಬಿಕ್ಕಟ್ಟಿನಿಂದಾಗಿ ಅಮೆರಿಕದ ಡಾಲರ್ ಮೌಲ್ಯವು ಐದು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ನೀತಿಯಿಂದಾಗಿ ಡಾಲರ್ ಮೌಲ್ಯವು ಏರಿಳಿತ ಕಾಣುತ್ತಿದೆ. ಹಾಗಾಗಿ, ಹಳದಿ ಲೋಹದ ಬೆಲೆ ಸ್ಥಿರವಾಗಿದೆ’ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

‘ಸುಂಕ ನೀತಿ: ಉಕ್ಕು ವಲಯಕ್ಕೆ ತೊಂದರೆ ಇಲ್ಲ’



ನವದೆಹಲಿ (ಪಿಟಿಐ): ‘ಅಮೆರಿಕದ ಸುಂಕ ನೀತಿಯು ದೇಶೀಯ ಉಕ್ಕು ವಲಯದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ’ ಎಂದು ಕೇಂದ್ರ ಉಕ್ಕು ಸಚಿವಾಲಯದ ಕಾರ್ಯದರ್ಶಿ ಸಂದೀಪ್ ಪೌಂಡ್ರಿಕ್ ತಿಳಿಸಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತವು ಅಮೆರಿಕಕ್ಕೆ 1 ಲಕ್ಷ ಟನ್‌ಗಿಂತ ಕಡಿಮೆ ಪ್ರಮಾಣದಲ್ಲಿ ಉಕ್ಕು ರಫ್ತು ಮಾಡುತ್ತದೆ. ಹಾಗಾಗಿ, ಸುಂಕ ನೀತಿಯು ಈ ವಲಯದ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಉತ್ಪಾದನೆ ಆಧರಿತ ಉತ್ತೇಜನ (ಪಿಎಲ್‌ಐ) ಯೋಜನೆಯ ಎರಡನೇ ಹಂತದಲ್ಲಿ ಮಿಶ್ರಲೋಹದ ಉಕ್ಕು ತಯಾರಿಕೆಗೆ ಸಂಬಂಧಿಸಿದಂತೆ 73 ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದರು.

ಗುಣಮಟ್ಟದ ಮಿಶ್ರಲೋಹದ ಉಕ್ಕು ಉತ್ಪಾದನೆಯಲ್ಲಿ ದೇಶವು ಸ್ವಾವಲಂಬನೆ ಸಾಧಿಸಬೇಕು ಎಂಬುದು ಸರ್ಕಾರದ ಗುರಿಯಾಗಿದೆ. ಇದಕ್ಕೆ ಪೂರಕವಾಗಿ ಪಿಎಲ್‌ಐ ಯೋಜನೆ ರೂಪಿಸಲಾಗಿದೆ ಎಂದರು.

ಕಡಿಮೆ ಗುಣಮಟ್ಟದ ಉಕ್ಕು ಆಮದಿಗೆ ಸರ್ಕಾರ ಒತ್ತು ನೀಡುವುದಿಲ್ಲ. ದೇಶೀಯವಾಗಿ ತಯಾರಿಸುವ ಮತ್ತು ಆಮದು ಮಾಡಿಕೊಳ್ಳುವ ಉಕ್ಕಿನ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಅಗತ್ಯ ನಿಯಮಾವಳಿ ರೂಪಿಸಲಾಗಿದೆ. ದೇಶೀಯವಾಗಿ ಉತ್ತಮ ಗುಣಮಟ್ಟದ ಉಕ್ಕು ಮಾರಾಟಕ್ಕೆ ಒತ್ತು ನೀಡಲಾಗಿದೆ ಎಂದು ತಿಳಿಸಿದರು.


ಆರ್‌ಬಿಐ ಗುರಿಗಿಂತ ಕಡಿಮೆ ದಾಖಲು: ಮತ್ತೆ ರೆಪೊ ದರ ಕಡಿತ?

ತಗ್ಗಿದ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ): ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧರಿತ ಚಿಲ್ಲರೆ ಹಣದುಬ್ಬರವು ಫೆಬ್ರುವರಿಯಲ್ಲಿ ಏಳು ತಿಂಗಳ ಕನಿಷ್ಠ ಮಟ್ಟವಾದ ಶೇ 3.61ರಷ್ಟು ದಾಖಲಾಗಿದೆ. ಇದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿಪಡಿಸಿರುವ ಶೇ 4ರ ಗುರಿಗಿಂತಲೂ ಕಡಿಮೆಯಾಗಿದೆ.

ಕಳೆದ ತಿಂಗಳು ನಡೆದ ಆರ್‌ಬಿಐನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ರೆಪೊ ದರವನ್ನು ಶೇ 0.25ರಷ್ಟು ಕಡಿತಗೊಳಿಸಿತ್ತು. ಚಿಲ್ಲರೆ ಹಣದುಬ್ಬರವು ನಿಗದಿತ ಗುರಿಯೊಳಗೆ ದಾಖಲಾದರೆ ಮತ್ತೆ ಬಡ್ಡಿದರ ಇಳಿಕೆ ಮಾಡುವ ಬಗ್ಗೆ ಭರವಸೆ ನೀಡಿತ್ತು. ಸದ್ಯ ಹಣದುಬ್ಬರ ಇಳಿಕೆಯಾಗಿದೆ. ಹಾಗಾಗಿ, ಏಪ್ರಿಲ್ 7ರಿಂದ 9ರ ವರೆಗೆ ನಡೆಯುವ ಸಭೆಯಲ್ಲಿ ಮತ್ತೆ ರೆಪೊ ದರ ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ತರಕಾರಿಗಳು, ಮೊಟ್ಟೆ, ಮಾಂಸ, ಮೀನು, ದ್ವಿದಳ ಧಾನ್ಯ ಮತ್ತು ಸರಕುಗಳು, ಹಾಲು ಮತ್ತು ಹಾಲಿನ ಉತ್ಪನ್ನಗಳ ಬೆಲೆಯಲ್ಲಿ ಕಡಿಮೆಯಾಗಿರುವುದೇ ಹಣದುಬ್ಬರದ ಇಳಿಕೆಗೆ ಕಾರಣ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬುಧವಾರ ತಿಳಿಸಿದೆ.



ಜನವರಿಯಲ್ಲಿ ಚಿಲ್ಲರೆ ಹಣದುಬ್ಬರವು ಶೇ 4.26ರಷ್ಟು ದಾಖಲಾಗಿತ್ತು. ಕಳೆದ ವರ್ಷದ ಫೆಬ್ರುವರಿಯಲ್ಲಿ ಶೇ 5.09ರಷ್ಟಿತ್ತು. ಕಳೆದ ವರ್ಷದ ನವೆಂಬರ್‌ನಿಂದ ಆರ್‌ಬಿಐ ನಿಗದಿಪಡಿಸಿರುವ ಗುರಿಯಲ್ಲಿಯೇ ದಾಖಲಾಗುತ್ತಿದೆ ಎಂದು ವಿವರಿಸಿದೆ.

ಜನವರಿಗೆ ಹೋಲಿಸಿದರೆ ಫೆಬ್ರುವರಿಯಲ್ಲಿ ಹಣದುಬ್ಬರವು ಶೇ 0.65ರಷ್ಟು ಇಳಿಕೆಯಾಗಿದೆ. ಕಳೆದ ವರ್ಷದ ಜುಲೈ ನಂತರ ದಾಖಲಾಗಿರುವ ಕನಿಷ್ಠ ಮಟ್ಟ ಇದಾಗಿದೆ ಎಂದು ತಿಳಿಸಿದೆ.

ಆಹಾರ ಪದಾರ್ಥಗಳ ಬೆಲೆ ಇಳಿಕೆ: ಜನವರಿಗೆ ಹೋಲಿಸಿದರೆ ಫೆಬ್ರುವರಿಯಲ್ಲಿ ಆಹಾರ ಹಣದುಬ್ಬರದಲ್ಲಿ ಶೇ 2.22ರಷ್ಟು ಇಳಿಕೆಯಾಗಿದೆ. ಜನವರಿಯಲ್ಲಿ ಆಹಾರ ಪದಾರ್ಥಗಳ ಬೆಲೆಯು ಶೇ 5.97ರಷ್ಟಿತ್ತು. ಫೆಬ್ರುವರಿಯಲ್ಲಿ ಶೇ 3.75ಕ್ಕೆ ತಗ್ಗಿದೆ. ಎರಡು ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ.

ಜನವರಿಯಲ್ಲಿ ನಗರ ಪ್ರದೇಶದಲ್ಲಿ ಶೇ 3.87ರಷ್ಟಿದ್ದ ಹಣದುಬ್ಬರವು ಫೆಬ್ರುವರಿಯಲ್ಲಿ ಶೇ 3.32ಕ್ಕೆ ತಗ್ಗಿದೆ. ಆಹಾರ ಪದಾರ್ಥಗಳ ಬೆಲೆಯು ಶೇ 5.53ರಿಂದ ಶೇ 3.20ಕ್ಕೆ ಇಳಿದಿದೆ.

ಗ್ರಾಮೀಣ ಪ್ರದೇಶದಲ್ಲಿ ಆಹಾರ ಪದಾರ್ಥಗಳ ಬೆಲೆಯು ಶೇ 4.59ರಿಂದ ಶೇ 3.79ಕ್ಕೆ ಇಳಿದಿದೆ.

ರಾಜ್ಯವಾರು ಪಟ್ಟಿಯಲ್ಲಿ ತೆಲಂಗಾಣದಲ್ಲಿ (ಶೇ 1.31ರಷ್ಟು) ಕಡಿಮೆ ಹಣದುಬ್ಬರ ದಾಖಲಾಗಿದ್ದರೆ, ಕೇರಳದಲ್ಲಿ (ಶೇ 7.31ರಷ್ಟು) ಅತಿಹೆಚ್ಚು ದಾಖಲಾಗಿದೆ.

ಕೈಗಾರಿಕಾ ಉತ್ಪಾದನೆ ಸದೃಢ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನಾ ಬೆಳವಣಿಗೆಯು ಜನವರಿ ತಿಂಗಳಲ್ಲಿ ಶೇ 5ರಷ್ಟು ಆಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ ತಿಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಉತ್ಪಾದನೆಯು ಶೇ 4.2ರಷ್ಟು ದಾಖಲಾಗಿತ್ತು. ತಯಾರಿಕಾ ವಲಯದ ಚಟುವಟಿಕೆಯು ಏರಿಕೆ ಆಗಿರು ವುದರಿಂದ ಒಟ್ಟಾರೆ ಕೈಗಾರಿಕಾ ಉತ್ಪಾದನೆ ಚಟುವಟಿಕೆಯು ಸದೃಢಗೊಂಡಿದೆ ಎಂದು ತಿಳಿಸಿದೆ.

ಕೈಗಾರಿಕಾ ಉತ್ಪಾದನಾ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಬೆಳವಣಿಗೆಯನ್ನು ಲೆಕ್ಕ ಹಾಕಲಾಗುತ್ತದೆ.

ಕಳೆದ ವರ್ಷದ ಜನವರಿಯಲ್ಲಿ ಗಣಿಗಾರಿಕೆ ಮತ್ತು ವಿದ್ಯುತ್ ವಲಯದ ಉತ್ಪಾದನೆಯು ಕ್ರಮವಾಗಿ ಶೇ 6 ಮತ್ತು ಶೇ 5.6ರಷ್ಟಿತ್ತು. ಪ್ರಸಕ್ತ ವರ್ಷದ ಜನವರಿಯಲ್ಲಿ ಶೇ 4.4 ಮತ್ತು ಶೇ 2.4ಕ್ಕೆ ಇಳಿದಿದೆ. ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜನವರಿವರೆಗೆ ಐಐಪಿ ಬೆಳವಣಿಗೆಯು ಶೇ 4.2ರಷ್ಟಾಗಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಶೇ 6ರಷ್ಟಿತ್ತು ಎಂದು ತಿಳಿಸಿದೆ.

ಟೊಮೆಟೊ ದರ ಕುಸಿತ ಬೆಳೆಗಾರರು ಕಂಗಾಲು

ಪ್ರಜಾವಾಣಿ ವಾರ್ತೆ

ಯಳಂದೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನಲ್ಲಿ ಟೊಮೆಟೊ ಹೆಚ್ಚಿನ ಇಳುವರಿ ಬಂದಿದ್ದರೂ, ಬೇಡಿಕೆ ಕುಸಿದಿರುವುದು ರೈತರನ್ನು ಕಂಗೆಡಿಸಿದೆ. ಮತ್ತೊಂದೆಡೆ ರೋಗಕ್ಕೆ ತುತ್ತಾದ ಹಣ್ಣುಗಳನ್ನು ರೈತರು ರಸ್ತೆಗೆ ಸುರಿಯುತ್ತಿದ್ದಾರೆ.



ತಾಲ್ಲೂಕಿನಲ್ಲಿ ನೂರಾರು ರೈತರು ಟೊಮೆಟೊ ಬೆಳೆಯುತ್ತಾರೆ. ಇಲ್ಲಿಂದ ತಮಿಳುನಾಡು, ಕೇರಳಕ್ಕೆ ಸಾಗಣೆಯಾಗುತ್ತಿದ್ದ ಟೊಮೆಟೊ ಪ್ರಮಾಣ ತಗ್ಗಿರುವುದೇ, ದರ ಕುಸಿಯಲು ಕಾರಣ ಎಂದು ಹೇಳಲಾಗಿದೆ. ಬೆಳೆ ಕೊಯ್ಲಿನ ಖರ್ಚು ಹೆಚ್ಚಾಗಿದ್ದು, ಹಣ್ಣು ತಾಕಿನಲ್ಲೇ ಉಳಿಯುತ್ತಿದೆ.

ಪ್ರಸ್ತುತ ಪ್ರತಿ ಕೆ.ಜಿ ಟೊಮೆಟೊ ದರ ₹5ಕ್ಕೆ ಕುಸಿದಿದೆ.

‘20ರಿಂದ 25 ಕೆ.ಜಿಯ ಒಂದು ಬಾಕ್ಸ್ ಟೊಮೆಟೊ ದರ ₹100 ರಿಂದ ₹125 ಇದೆ. ಪಟ್ಟಣದಲ್ಲಿ ಭಾನುವಾರದ ಸಂತೆ ಮತ್ತು ಮಂಗಳವಾರ ನಡೆಯುವ ಸಂತೇಮರಹಳ್ಳಿ ಸಂತೆಯಲ್ಲಿ ಕೆ.ಜಿಗೆ ₹5ರಂತೆ ಮಾರಾಟವಾಗಿದೆ’ ಎಂದು ಕೃಷಿಕ ಕಾವುದವಾಡಿ ರಾಜೇಶ್ ತಿಳಿಸಿದರು.

ಹೂಜಿ ನೊಣದ ಕಾಟ: ‘ಬೆಲೆ ಕುಸಿತದ ನಡುವೆಯೇ ಟೊಮೆಟೊಗೆ ಹೂಜಿ ನೊಣದ ಕಾಟ ಹೆಚ್ಚಿದೆ. ಇದು ಹಣ್ಣಿನ ಗುಣಮಟ್ಟವನ್ನು ತಗ್ಗಿಸಿದೆ. 1 ಟನ್ ಟೊಮೆಟೊ ಕೊಯ್ಲು ಮಾಡಿದರೆ 50 ರಿಂದ 100 ಕೆ.ಜಿಗೂ ಹೆಚ್ಚಿನ ಹಣ್ಣು ಕೊಳೆಯುತ್ತದೆ. ಅದನ್ನು ಪ್ರತ್ಯೇಕಿಸಿಯೇ ದರ ನಿರ್ಧರಿಸಲಾಗುತ್ತದೆ’ ಎಂದು ಚಾಮರಾಜನಗರ ವ್ಯಾಪಾರಿ ಸೈಯದ್ ಹೇಳುತ್ತಾರೆ.

7 ಲಕ್ಷ ಟನ್ ಕಾಫಿ ಉತ್ಪಾದನೆ ಗುರಿ

ಪ್ರಜಾವಾಣಿ ವಾರ್ತೆ

ಬಾಳೆಹೊನ್ನೂರು (ಚಿಕ್ಕಮಗಳೂರು ಜಿಲ್ಲೆ): ‘ದೇಶದಲ್ಲಿ ಮುಂದಿನ 10 ವರ್ಷಗಳಲ್ಲಿ 7 ಲಕ್ಷ ಟನ್ ಕಾಫಿ ಉತ್ಪಾದನೆಯ ಗುರಿ ಹೊಂದಲಾಗಿದೆ’ ಎಂದು ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ. ದಿನೇಶ್ ದೇವವೃಂದ ತಿಳಿಸಿದರು.



ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಕ್ಷೇತ್ರನಾಥ ವೀರಭದ್ರಸ್ವಾಮಿ ಮಹಾರಥೋತ್ಸವದ ಪ್ರಯುಕ್ತ ರಂಭಾಪುರಿ ಪೀಠದಲ್ಲಿ ನಡೆದ ಕೃಷಿ ಮೇಳದಲ್ಲಿ ‘ಕಾಫಿಯ ಕಣ, ಚಿಂತನ ಕಣಜ’ ಎಂಬ ವಿಷಯ ಕುರಿತು ಅವರು ಮಾತನಾಡಿದರು.

‘ಕಾಫಿ ತೋಟಗಳಲ್ಲಿ ಅನುಭವಿ ಮೇಲ್ವಿಚಾರಕರು ಮತ್ತು ನುರಿತ ವ್ಯವಸ್ಥಾಪಕರ ಕೊರತೆ ಕಂಡು ಬರುತ್ತಿದೆ. ಇದನ್ನು ಪರಿಹರಿಸುವುದಕ್ಕಾಗಿ ಕಾಫಿ ಸಂಶೋಧನಾ ಕೇಂದ್ರದಲ್ಲಿ ಎಸ್ಟೇಟ್ ಮ್ಯಾನೇಜ್‌ಮೆಂಟ್ ತರಬೇತಿ ಹಮ್ಮಿಕೊಳ್ಳಲಾಗಿದೆ’ ಎಂದರು.


‘ಇಂಡಿಕಾ’ ಬ್ರ್ಯಾಂಡ್‌ನಡಿ ಗುಣಮಟ್ಟದ ಕಾಫಿ ತಲುಪಿಸುವುದಕ್ಕೆ ಚಿಂತನೆ ನಡೆದಿದೆ. ಅದರ ಅಂಗವಾಗಿ ಕೆಫೆ ತೆರೆಯಲು ತರಬೇತಿ ನೀಡಲಾಗುತ್ತಿದೆ. ಡಿಸೆಂಬರ್ ಬಳಿಕ ಯೂರೋಪ್ ಒಕ್ಕೂಟ ನೆರಳು ರಹಿತ ಕಾಫಿ ಖರೀದಿಯನ್ನು ನಿಲ್ಲಿಸಲಿದ್ದು ನೆರಳಿನಡಿ ಕಾಫಿ ಬೆಳೆಯುವ ಭಾರತಕ್ಕೆ ಈ ನಿರ್ಧಾರ ವರವಾಗಲಿದೆ’ ಎಂದರು.

ಕುಸುಬೆ ಖರೀದಿ: ನೋಂದಣಿ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಶೀಘ್ರವೇ ಕುಸುಬೆ ಖರೀದಿ ಪ್ರಕ್ರಿಯೆ ಆರಂಭವಾಗಲಿದ್ದು, ರೈತರು ಹೆಸರು ನೋಂದಣಿ ಮಾಡಿಕೊಳ್ಳಬೇಕು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಕೋರಿದ್ದಾರೆ.

ಪ್ರತಿ ಕ್ವಿಂಟಲ್‌ಗೆ ₹5,940 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ಪ್ರತಿ ಎಕರೆಗೆ ಐದು ಕ್ವಿಂಟಲ್‌ನಂತೆ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಲ್ ಖರೀದಿ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.



ಶಿವಾನಂದ ಪಾಟೀಲ

ಬೀದರ್, ಧಾರವಾಡ, ದಾವಣಗೆರೆ, ಗದಗ, ವಿಜಯಪುರ, ಕಲಬುರಗಿ, ಚಿತ್ರದುರ್ಗ, ಕೊಪ್ಪಳ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಖರೀದಿ ಕೇಂದ್ರಗಳನ್ನು ಆರಂಭಿಸಲಾಗುವುದು ಎಂದು ಹೇಳಿದ್ದಾರೆ.

ಖರೀದಿ ಪ್ರಕ್ರಿಯೆಯ ನಂತರ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಜಮೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಮದ್ಯಕ್ಕೆ ಶೇ 150 ಸುಂಕ ಅಮೆರಿಕ ಮತ್ತೆ ತಗಾದೆ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಅಮೆರಿಕದ ಮದ್ಯ ಮತ್ತು ಕೃಷಿ ಉತ್ಪನ್ನಗಳ ಮೇಲಿನ ಸುಂಕವನ್ನು ಉಲ್ಲೇಖಿಸಿ, ಭಾರತವು ತನ್ನ ಸರಕುಗಳ ಮೇಲೆ ಅಧಿಕ ಸುಂಕ ವಿಧಿಸುತ್ತಿದೆ ಎಂದು ಅಮೆರಿಕ ಮತ್ತೊಮ್ಮೆ ಧ್ವನಿ ಎತ್ತಿದೆ.

ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೋಲಿನ್ ಲೆವಿಟ್ ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಕೆನಡಾದ ಕುರಿತ ಪ್ರಶ್ನೆಗೆ ಉತ್ತರಿಸುವಾಗ, ಭಾರತ ವಿಧಿಸುತ್ತಿರುವ ಹೆಚ್ಚಿನ ಸುಂಕದ ಬಗ್ಗೆಯೂ ಉಲ್ಲೇಖಿಸಿದ್ದಾರೆ.

‘ಅಮೆರಿಕದ ಮದ್ಯದ ಮೇಲೆ ಭಾರತ ಶೇ 150ರಷ್ಟು ಸುಂಕ ವಿಧಿಸುತ್ತಿದೆ. ಇದು ಕೆಂಟುಕಿ ಬರ್ಬನ್ ಅನ್ನು ಭಾರತಕ್ಕೆ ರಫ್ತು ಮಾಡಲು ನೆರವಾಗುತ್ತದೆಯೆ, ಖಂಡಿತವಾಗಿಯೂ ಇಲ್ಲ. ನಮ್ಮ ಕೃಷಿ ಉತ್ಪನ್ನದ ಮೇಲೂ ಭಾರತ ಶೇ 100ರಷ್ಟು ಸುಂಕ ವಿಧಿಸುತ್ತಿದೆ. ಜಪಾನ್ ಕೂಡ ಅಕ್ಕಿಗೆ ಶೇ 700ರಷ್ಟು ಸುಂಕ ವಿಧಿಸುತ್ತಿದೆ. ಅಮೆರಿಕದ ಚೀಸ್ ಮತ್ತು ಬೆಣ್ಣೆಗೆ ಕೆನಡಾವು ಶೇ 300ರಷ್ಟು ಸುಂಕ ವಿಧಿಸುತ್ತಿದೆ’ ಎಂದು ಲೆವಿಟ್ ಹೇಳಿದರು.



ಕರೋಲಿನ್ ಲೆವಿಟ್ ಅವರು ಸುಂಕಗಳ ವಿವರದ ಪಟ್ಟಿ ಪ್ರದರ್ಶಿಸಿದರು — ಪಿಟಿಐ ಚಿತ್ರ

ಭಾರತ, ಕೆನಡಾ ಮತ್ತು ಜಪಾನ್ ವಿಧಿಸುತ್ತಿರುವ ಸುಂಕಗಳ ವಿವರ ತೋರಿಸುವ ಪಟ್ಟಿಯನ್ನು ಅವರು ಪ್ರದರ್ಶಿಸಿದರು.

‘ಅಮೆರಿಕದ ವ್ಯಾಪಾರ ಮತ್ತು ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವ ಅಧ್ಯಕ್ಷರನ್ನು ನಾವು ಈಗ ಹೊಂದಿದ್ದೇವೆ. ಅಧ್ಯಕ್ಷ ಟ್ರಂಪ್ ಪರಸ್ಪರ ಸಂಬಂಧವನ್ನು ನಂಬುತ್ತಾರೆ. ಅವರು ಕೇಳುತ್ತಿರುವುದು ನ್ಯಾಯಯುತ ಮತ್ತು ಸಮತೋಲಿತ ವ್ಯಾಪಾರ ಪದ್ಧತಿಗಳನ್ನು. ದುರದೃಷ್ಟವಶಾತ್, ಈ ವಿಷಯದಲ್ಲಿ ಕೆನಡಾ ಕಳೆದ ಹಲವು ದಶಕಗಳಿಂದ ನಮ್ಮನ್ನು ನ್ಯಾಯಯುತವಾಗಿ ನಡೆಸಿಕೊಳ್ಳುತ್ತಿಲ್ಲ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸ್ಪೇಸ್‌ಎಕ್ಸ್ – ಜಿಯೊ ಒಪ್ಪಂದ

ನವದೆಹಲಿ (ಪಿಟಿಐ): ದೇಶದ ಗ್ರಾಹಕರಿಗೆ ಸ್ಟಾರ್‌ಲಿಂಕ್‌ನ ಉಪಗ್ರಹ ಆಧರಿತ ಇಂಟರ್‌ನೆಟ್ ಸೇವೆ ಒದಗಿಸುವ ಸಂಬಂಧ ಇಲಾನ್ ಮಸ್ಕ್ ಒಡೆತನದ ಸ್ಪೇಸ್‌ಎಕ್ಸ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ರಿಲಯನ್ಸ್ ಜಿಯೊ ಕಂಪನಿಯು ಬುಧವಾರ ತಿಳಿಸಿದೆ.

ಭಾರ್ತಿ ಏರ್‌ಟೆಲ್ ಕಂಪನಿಯು ಸ್ಪೇಸ್‌ಎಕ್ಸ್‌ನೊಂದಿಗೆ ಒಪ್ಪಂದ ಮಾಡಿಕೊಂಡ 12 ಗಂಟೆಯ ಒಳಗೆ ಜಿಯೊ ಸಹ ಒಪ್ಪಂದ ಮಾಡಿಕೊಂಡಿದೆ.

ಭಾರತದಲ್ಲಿ ಸ್ಪೇಸ್‌ಎಕ್ಸ್ ತನ್ನ ಸ್ಟಾರ್‌ಲಿಂಕ್ ಸೇವೆ ಆರಂಭಿಸಲು ಕೇಂದ್ರ ಸರ್ಕಾರದ ಅನುಮತಿ ಕೋರಿದೆ. ಆದರೆ, ಇನ್ನೂ ಅನುಮತಿ ನೀಡಿಲ್ಲ. ಒಪ್ಪಿಗೆ ನೀಡಿದ ನಂತರವಷ್ಟೇ ಈ ಸೇವೆ ಆರಂಭವಾಗಲಿದೆ.

ಸ್ಟಾರ್‌ಲಿಂಕ್‌ನ ಸೇವೆಗಳು ಜಿಯೊ ಗ್ರಾಹಕರಿಗೆ ಜಿಯೊ ಮಳಿಗೆಗಳು ಮತ್ತು ಆನ್‌ಲೈನ್‌ನಲ್ಲಿ ದೊರೆಯಲಿವೆ. ಸ್ಪೇಸ್‌ಎಕ್ಸ್ ಜೊತೆಗಿನ ಒಪ್ಪಂದವು ದೇಶದಾದ್ಯಂತ ಎಲ್ಲಾ ಉದ್ಯಮಗಳು, ಸಣ್ಣ ಮತ್ತು ಮಧ್ಯಮ ವ್ಯವಹಾರಗಳು ಮತ್ತು ಸಮುದಾಯಗಳಿಗೆ ಹೈಸ್ಪೀಡ್ ಇಂಟರ್‌ನೆಟ್ ಸೇವೆ ಒದಗಿಲಿಸಲು ನೆರವಾಗಲಿದೆ ಎಂದು ಕಂಪನಿ ತಿಳಿಸಿದೆ.

ಉಪಗ್ರಹ ತರಂಗಾಂತರ ಹಂಚಿಕೆ ಕುರಿತು ಮಸ್ಕ್ ಮತ್ತು ಮುಕೇಶ್ ಅಂಬಾನಿ ನಡುವೆ ತಿಕ್ಕಾಟ ನಡೆದಿತ್ತು. ಜೊತೆಗೆ, ಏರ್‌ಟೆಲ್ ಮತ್ತು ಜಿಯೊ ನಡುವೆಯೂ ತಿಕ್ಕಾಟ ಆಗಿತ್ತು.

21ನೇ ಅಂತರರಾಷ್ಟ್ರೀಯ ಪ್ರಶಸ್ತಿಗೆ ಭಾಜನ

ಮೋದಿಗೆ ಮಾರಿಷಸ್ ಅತ್ಯುನ್ನತ ಗೌರವ

ಪೋರ್ಟ್ ಲೂಯಿಸ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಾರಿಷಸ್ ರಾಷ್ಟ್ರಪತಿ ಧರಮ್ ಗೋಕೂಲ್ ಅವರು ದೇಶದ ಅತ್ಯುನ್ನತ ಗೌರವವಾದ ‘ದಿ ಗ್ರ್ಯಾಂಡ್ ಕಮಾಂಡರ್ ಆಫ್ ದಿ ಆರ್ಡರ್ ಆಫ್ ದಿ ಸ್ಟಾರ್ ಆ್ಯಂಡ್ ಕೀ ಆಫ್ ದಿ ಇಂಡಿಯನ್ ಓಷನ್’ಅನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೀಡಿ ಗೌರವಿಸಿದರು.

ಮಾರಿಷಸ್‌ನ ‘ಸ್ವಾತಂತ್ರ್ಯ ದಿನ’ದಂದು (ಮಾ.12) ಪ್ರಧಾನಿ ಮೋದಿ ಅವರಿಗೆ ಈ ಗೌರವ ನೀಡಲಾಯಿತು. ಪ್ರಧಾನಿ ಮೋದಿ ಅವರು ಮಾರಿಷಸ್‌ನ ಈ ಗೌರವವನ್ನು ಪಡೆದ ಮೊದಲ ಭಾರತೀಯರಾಗಿದ್ದಾರೆ. ಮಾರಿಷಸ್ ನಾಗರಿಕರನ್ನು ಹೊರತುಪಡಿಸಿ, ವಿದೇಶಿಗರಿಗೆ ಈ ಗೌರವ ನೀಡಿದ ಪಟ್ಟಿಯಲ್ಲಿ ಪ್ರಧಾನಿ ಮೋದಿ ಅವರು ಐದನೆಯವರಾಗಿದ್ದಾರೆ.

ಮೋದಿ ಅವರಿಗೆ ನೀಡಲಾದ 21ನೇ ಅಂತರರಾಷ್ಟ್ರೀಯ ಪ್ರಶಸ್ತಿ ಇದು. ಭಾರತ ಮತ್ತು ಮಾರಿಷಸ್‌ನ ದ್ವಿಪಕ್ಷೀಯ ಒಪ್ಪಂದಗಳನ್ನು ಬಲಪಡಿಸಿದ ಕಾರಣ, ಪ್ರಧಾನಿ ಮೋದಿ ಅವರಿಗೆ ಈ ಗೌರವ ನೀಡಲಾಗಿದೆ.



ಮಾರಿಷಸ್ ರಾಷ್ಟ್ರಪತಿ ಧರಮ್ ಗೋಕೂಲ್ ಅವರು ದೇಶದ ಅತ್ಯುನ್ನತ ಪ್ರಶಸ್ತಿಯನ್ನು ಪ್ರಧಾನಿ ಮೋದಿ ಅವರಿಗೆ ನೀಡಿ ಗೌರವಿಸಿದರು —ಪಿಟಿಐ ಚಿತ್ರ

ಮಾರಿಷಸ್‌ನ ಅತ್ಯುನ್ನತ ಗೌರವ ನೀಡಿದ್ದಕ್ಕಾಗಿ ಹೃದಯ ತುಂಬಿ ಧನ್ಯವಾದಗಳು. ಇದು ನನಗೆ ಸಂದ ಗೌರವ ಮಾತ್ರವಲ್ಲ. ಇದು 140 ಕೋಟಿ ಭಾರತೀಯರಿಗೆ ಸಂದ ಗೌರವ. ಉಭಯ ರಾಷ್ಟ್ರಗಳ ಐತಿಹಾಸಿಕ ಬಾಂಧವ್ಯಕ್ಕೆ ಸಂದ ಗೌರವವಾಗಿದೆ


ನರೇಂದ್ರ ಮೋದಿ, ಪ್ರಧಾನಿ

ಎಂಟು ಒಪ್ಪಂದಗಳಿಗೆ ಸಹಿ

ವ್ಯಾಪಾರ, ಕಡಲ್ಗಾವಲು ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿ 8 ಒಪ್ಪಂದಕ್ಕೆ ಭಾರತ ಮತ್ತು ಮಾರಿಷಸ್ ಸಹಿ ಹಾಕಿವೆ. ಪ್ರಧಾನಿ ಮೋದಿ ಅವರು ಜಗತ್ತಿನ ದಕ್ಷಿಣ ದೇಶಗಳ ಅಭಿವೃದ್ಧಿಗೆ ಮಹತ್ವಾಕಾಂಕ್ಷಿಯಾದ ದೂರದೃಷ್ಟಿಯ ‘ಮಹಾಸಾಗರ’ ಯೋಜನೆಯನ್ನು ಘೋಷಿಸಿದ್ದಾರೆ.

ಮಹಾಸಾಗರ ಎಂದರೆ ಎಂಎಎಚ್‌ಎಎಸ್‌ಎಜಿಎಆರ್– ಮ್ಯೂಚುವಲ್ ಆ್ಯಂಡ್ ಹೋಲಿಸ್ಟಿಕ್ ಅಡ್ವಾನ್ಸ್‌ಮೆಂಟ್ ಫಾರ್ ಸೆಕ್ಯುರಿಟಿ ಆ್ಯಂಡ್ ಗ್ರೋತ್ ಅಕ್ರಾಸ್ ರೀಜನ್ (ಪ್ರದೇಶದ ಭದ್ರತೆ ಮತ್ತು ಪ್ರಗತಿಗಾಗಿ ಪರಸ್ಪರ ಮತ್ತು ಸಮಗ್ರವಾದ ಸಹಕಾರ) ಎಂದರ್ಥ. 2015ರಲ್ಲಿ ಪ್ರಧಾನಿ ಮೋದಿ ಅವರು ಮಾರಿಷಸ್‌ಗೆ ಭೇಟಿ ನೀಡಿದ್ದಾಗ ‘ಸಾಗರ’ (ಎಸ್‌ಎಜಿಎಆರ್: ಸೆಕ್ಯುರಿಟಿ ಆ್ಯಂಡ್ ಗ್ರೋತ್ ಫಾರ್ ಆಲ್ ಇನ್ ದಿ ರೀಜನ್ ಪಾಲಿಸಿ (ಈ ಪ್ರದೇಶದ ಎಲ್ಲ ದೇಶಗಳ ಭದ್ರತೆ ಮತ್ತು ಪ್ರಗತಿಯ ನೀತಿ) ಎನ್ನುವ ದೂರದೃಷ್ಟಿಯ ಯೋಜನೆಯನ್ನು ಘೋಷಿಸಿದ್ದರು.





ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಮಿಶ್ರ ಡಬಲ್ಸ್‌ನಲ್ಲಿ ರೋಹನ್–ರುತ್ವಿಕಾ ಮುನ್ನಡೆ

ಮೊದಲ ಸುತ್ತಿನಲ್ಲೇ ಹೊರಬಿದ್ದ ಸಿಂಧು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ್ತಿ ಪಿ.ವಿ. ಸಿಂಧು, ಕೊರಿಯಾದ ಕಿಮ್ ಗಾ ಯುನ್ ವಿರುದ್ಧ ಮೊದಲ ಗೇಮ್ ಗೆದ್ದರೂ ನಂತರ ಕಳಾಹೀನರಾಗಿ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಮೊಣಕಾಲಿನ ಸ್ನಾಯುರಜ್ಜು ನೋವಿನಿಂದ ಚೇತರಿಸಿ ಕಣಕ್ಕೆ ಮರಳಿದ್ದ, ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಬುಧವಾರ ಸುಮಾರು ಒಂದು ಗಂಟೆ ನಡೆದ ಪಂದ್ಯದಲ್ಲಿ 21–19, 13–21, 13–21 ರಲ್ಲಿ ಕೊರಿಯಾದ ಆಟಗಾರ್ತಿಗೆ ಮಣಿದರು. ಕಿಮ್ ಗಾ ಅವರು ವಿಶ್ವ ಕ್ರಮಾಂಕದಲ್ಲಿ 21ನೇ ಸ್ಥಾನದಲ್ಲಿದ್ದಾರೆ.

29 ವರ್ಷ ವಯಸ್ಸಿನ ಸಿಂಧು, ಒಂದು ಹಂತದಲ್ಲಿ ಮೊದಲ ಗೇಮ್‌ನಲ್ಲಿ ಸ್ಪಷ್ಟ ಮೇಲುಗೈ ಸಾಧಿಸಿ 20–12ರಲ್ಲಿ ಮುಂದಿದ್ದರು. ಆದರೆ ಹಿಡಿತ ಕಳೆದುಕೊಂಡ ಅವರು ಕೊನೆಗೂ 21–19ರಲ್ಲಿ ಗೇಮ್ ಪಡೆದರು. ಆದರೆ ನಂತರ ಅವರ ಆಟದ ಮಟ್ಟ ಕುಸಿಯತೊಡಗಿತು. ವಿಶ್ವ ಕ್ರಮಾಂಕದಲ್ಲಿ 16ನೇ ಸ್ಥಾನದಲ್ಲಿರುವ ಅವರು ಒಂದೆಡೆ ಪರದಾಡಿದರೆ, ಇನ್ನೊಂದೆಡೆ ಕಿಮ್ ವಿಶ್ವಾಸ ಹೆಚ್ಚಿಸಿಕೊಂಡಿದ್ದು ಅವರ ಚಲನೆ, ಹೊಡೆತಗಳ ಆಯ್ಕೆಯಲ್ಲಿ ವ್ಯಕ್ತವಾಯಿತು.



ಪಿ.ವಿ.ಸಿಂಧು ಸಂಗ್ರಹ ಚಿತ್ರ

ಇದರೊಡನೆ ಸಿಂಧು ಅವರ ನಿರಾಶಾದಾಯಕ ಓಟ ಮುಂದುವರಿಯಿತು. ಜನವರಿಯಲ್ಲಿ ನಡೆದ ಇಂಡೊನೇಷ್ಯಾ ಮಾಸ್ಟರ್ಸ್ ಟೂರ್ನಿಯ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದ ಅವರು, ಇಂಡಿಯಾ ಓಪನ್ ಟೂರ್ನಿಯಲ್ಲಿ ಎಂಟರ ಘಟ್ಟದಲ್ಲಿ ಸೋತಿದ್ದರು.

ರೋಹನ್‌-ಶಿವಾನಿ ಮುನ್ನಡೆ: ಮಿಶ್ರ ಡಬಲ್ಸ್‌ನಲ್ಲಿ ರೋಹನ್ ಕಪೂರ್ ಮತ್ತು ರುತ್ವಿಕಾ ಶಿವಾನಿ ಗದ್ದೆ ಜೋಡಿ ಎರಡನೇ ಸುತ್ತಿಗೆ ಮುನ್ನಡೆಯಿತು. ಭಾರತದ ಜೋಡಿ 21–10, 17–21, 24–22 ರಲ್ಲಿ 41ನೇ ಕ್ರಮಾಂದಕ ಯೆ ಹಾಂಗ್ ವೀ- ನಿಕೋಲ್ ಗೊನ್ವಾಲೆಸ್ ಚಾನ್ (ಚೀನಾ ತೈಪಿ) ಜೋಡಿಯನ್ನು ಮಣಿಸಿತು.

ರೋಹನ್‌-ರುತ್ವಿಕಾ ಜೋಡಿ ಎರಡನೇ ಸುತ್ತಿನಲ್ಲಿ ಚೀನಾದ ಯಾನ್ ಝು ಫೆಂಗ್- ಯಾ ಷಿನ್ ವೀ ಜೋಡಿಯನ್ನು ಎದುರಿಸಲಿದೆ.

ಮಹಿಳಾ ಸಿಂಗಲ್ಸ್‌ನಲ್ಲಿ, 28ನೇ ಕ್ರಮಾಂಕದ ಮಾಳವಿಕಾ ಬನ್ಸೋಡ್ ಮಂಗಳವಾರ ರಾತ್ರಿ 21–13, 10–21, 21–17 ರಿಂದ 12ನೇ ಕ್ರಮಾಂಕದ ಇಯೊ ಜಿಯಾ ಮಿನ್ (ಸಿಂಗಪುರ) ಅವರನ್ನು ಹಿಮ್ಮೆಟ್ಟಿಸಿ ಎರಡನೇ ಸುತ್ತನ್ನು ಪ್ರವೇಶಿಸಿದ್ದರು. ಆದರೆ ಅವರು ಮುಂದಿನ ಸುತ್ತಿನಲ್ಲಿ ಪ್ರಬಲ ಎದುರಾಳಿ, ಮೂರನೇ ಶ್ರೇಯಾಂಕದ ಅಕಾನೆ ಯಮಾಗುಚಿ (ಜಪಾನ್) ಅವರನ್ನು ಎದುರಿಸಬೇಕಾಗಿದೆ.

ಟ್ರೀಸಾ–ಗಾಯತ್ರಿ ಜೋಡಿಗೆ ಜಯ: ಭಾರತದ ಟ್ರೀಸಾ ಜೋಲಿ-ಗಾಯತ್ರಿ ಗೋಪಿಚಂದ್ ಜೋಡಿ ಮಹಿಳೆಯರ ಡಬಲ್ಸ್‌ನಲ್ಲಿ ಪ್ರಿ-ಕ್ವಾರ್ಟರ್‌ಫೈನಲ್ ತಲುಪಿತು. ವಿಶ್ವ ಕ್ರಮಾಂಕದಲ್ಲಿ ಒಂಬತ್ತನೇ ಸ್ಥಾನದಲ್ಲಿರುವ ಈ ಜೋಡಿ ಮೊದಲ ಸುತ್ತಿನನಲ್ಲಿ ಚೀನಾ ತೈಪೆಯ ಶುವೊ ಯುನ್ ಸುಂಗ್- ಚೀನ್ ಹುಯಿ ಯು ಜೋಡಿಯನ್ನು 21–17, 21–13 ರಿಂದ ಸೋಲಿಸಿತು.

ಕರ್ನಾಟಕದ ಸಬೀರ್‌ಗೆ ಚಿನ್ನ

ರಾಷ್ಟ್ರೀಯ ಯೂತ್ ಅಥ್ಲೆಟಿಕ್ಸ್: ಹರ್ಷಿತಾಗೆ ಎರಡು ಕಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸೈಯದ್ ಸಬೀರ್ ಅವರು ಪಟ್ನಾದಲ್ಲಿ ನಡೆಯುತ್ತಿರುವ 20ನೇ ರಾಷ್ಟ್ರೀಯ ಯೂತ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿ-ಪ್‌ನಲ್ಲಿ ಚಿನ್ನದ ಪದಕ ಜಯಿಸಿದರು. ಕರ್ನಾಟಕದವರೇ ಆದ ಪಿ. ಹರ್ಷಿತಾ ಅವರು ಎರಡು ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡರು. ಇದರೊಂದಿಗೆ ಕರ್ನಾಟಕದ ಅಥ್ಲೀಟ್‌ಗಳು ಈ ಕೂಟದಲ್ಲಿ ತಮ್ಮ ಅಭಿಯಾನ ಮುಗಿಸಿದರು.

18 ವರ್ಷದೊಳಗಿನ ಪುರುಷರ ವಿಭಾಗದ 200 ಮೀ ಓಟದಲ್ಲಿ ಸಬೀರ್ ಅವರು 21.67 ಸೆಕೆಂಡುಗಳಲ್ಲಿ ಗುರಿ ಮುಟ್ಟಿ, ಪ್ರಥಮ ಸ್ಥಾನ ಗಳಿಸಿದರು. ಈ ಹಾದಿಯಲ್ಲಿ ಅವರು ಕೇರಳದ ಜೆ. ನಿವೇದ್ ಕೃಷ್ಣ ಮತ್ತು ಮಹಾರಾಷ್ಟ್ರದ



ಸಯ್ಯದ್ ಸಬೀರ್



ಹರ್ಷಿತಾ

ಆದಿತ್ಯ ಪಿಸಾಳ ಅವರನ್ನು ಹಿಂದಿಕ್ಕಿದರು.

ಪಾಟಲೀಪುತ್ರ ಕ್ರೀಡಾ ಸಂಕೀರ್ಣದಲ್ಲಿ ನಡೆದ ಈ ಕೂಟದಲ್ಲಿ ಕರ್ನಾಟಕಕ್ಕೆ ವೇಗದ ಓಟದ ವಿಭಾಗದಲ್ಲಿ ಒಲಿದ ಎರಡನೇ ಚಿನ್ನ ಇದು. ಎರಡು ದಿನಗಳ ಹಿಂದಷ್ಟೇ ರಾಜ್ಯದ ಪಿ. ಚಿರಂತ್ ಚಿನ್ನ ಗಳಿಸಿದ್ದರು.

ಮಹಿಳೆಯರ ವಿಭಾಗದಲ್ಲಿ ಪಿ. ಹರ್ಷಿತಾ ಅವರು ಹೈಜಂಪ್‌ನಲ್ಲಿ (ಎತ್ತರ: 1.60 ಮೀ) ಕಂಚು ಗಳಿಸಿದರು. ಹೆಪ್ಟಥ್ಲಾನ್‌ನಲ್ಲಿ 4128 ಅಂಕಗಳನ್ನು ಗಳಿಸಿ ಮೂರನೇ ಸ್ಥಾನ ಪಡೆದರು. ಇದರೊಂದಿಗೆ ಪದಕ ಡಬಲ್ ಸಂಭ್ರಮ ಆಚರಿಸಿದರು.

ಫಲಿತಾಂಶಗಳು

ಪುರುಷರು (18 ವರ್ಷದೊಳಗಿನವರು): 200 ಮೀ ಓಟ: ಸೈಯದ್ ಸಬೀರ್ (ಕರ್ನಾಟಕ; ಸಮಯ: 21.67ಸೆ)–1, ಜೆ. ನಿವೇದ್ ಕೃಷ್ಣ (ಕೇರಳ)–2, ಆದಿತ್ಯ ಪಿಸಾಳ (ಮಹಾರಾಷ್ಟ್ರ)–3

ಮಹಿಳೆಯರು (18ವರ್ಷದೊಳಗಿನವರು): ಆಂಚಲ್ ಪಾಟೀಲ (ಮಹಾರಾಷ್ಟ್ರ; 1.68ಮೀ)–1, ರಿಂಕು ಘೋಷ್ (ಪಶ್ಚಿಮ ಬಂಗಾಳ)–2, ಪಿ. ಹರ್ಷಿತಾ (ಕರ್ನಾಟಕ)–3

ಹೆಪ್ಟಥ್ಲಾನ್: ಅನಾಮಿಕಾ ಅಜೇಶ್ (ಕೇರಳ; 4270 ಪಾಯಿಂಟ್ಸ್)–1, ವೈಶಾಲಿ ಬದ್ದಿ (ತೆಲಂಗಾಣ; 4224)–2, ಪಿ. ಹರ್ಷಿತಾ (ಕರ್ನಾಟಕ; 4128) –3

ಏಕದಿನ ರ‍್ಯಾಂಕಿಂಗ್: ರೋಹಿತ್ ಶರ್ಮಾಗೆ ಬಡ್ತಿ

ಅಗ್ರಸ್ಥಾನದಲ್ಲಿ ಮುಂದುವರಿದ ಗಿಲ್: ಅಗ್ರ ಹತ್ತರಲ್ಲಿ ನಾಲ್ವರು ಭಾರತೀಯರು



ದುಬೈ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಬುಧವಾರ ಪ್ರಕಟವಾದ ಐಸಿಸಿ ಏಕದಿನ ರ‍್ಯಾಂಕಿಂಗ್‌ನಲ್ಲಿ ಎರಡು ಸ್ಥಾನ ಬಡ್ತಿ ಪಡೆದಿದ್ದು ಮೂರನೇ ಸ್ಥಾನದಲ್ಲಿದ್ದಾರೆ. ಶುಭಮನ್ ಗಿಲ್ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ.

ನ್ಯೂಜಿಲೆಂಡ್ ವಿರುದ್ಧ ಟೂರ್ನಿಯ ಫೈನಲ್‌ನಲ್ಲಿ ರೋಹಿತ್ 83 ಎಸೆತಗಳಲ್ಲಿ 76 ರನ್ ಹೊಡೆದು ಭಾರತದ ಗೆಲುವಿಗೆ ಬುನಾದಿ ಹಾಕಿಕೊಟ್ಟಿದ್ದರು.


ಭಾರತದ ಒಟ್ಟು ನಾಲ್ವರು ಬ್ಯಾಟರ್‌ಗಳು ಅಗ್ರ 10ರಲ್ಲಿ ಸ್ಥಾನ ಪಡೆದಿದ್ದಾರೆ. ವಿರಾಟ್ ಕೊಹ್ಲಿ ಒಂದು ಸ್ಥಾನ ಕೆಳಗಿಳಿದು ಐದನೇ ಸ್ಥಾನಕ್ಕೆ ಸರಿದಿದ್ದಾರೆ. ಕೊಹ್ಲಿ ದುಬೈನಲ್ಲಿ 218 ರನ್ ಗಳಿಸಿದ್ದರು. ಶ್ರೇಯಸ್ ಅಯ್ಯರ್ ಅವರ ರ‍್ಯಾಂಕಿಂಗ್ (ಎಂಟನೇ ಸ್ಥಾನ) ಬದಲಾಗಿಲ್ಲ.

ನ್ಯೂಜಿಲೆಂಡ್ ನಾಯಕ ಮಿಚೆಲ್ ಸ್ಯಾಂಟನರ್ ಅವರು ಏಕದಿನ ಬೌಲರ್‌ಗಳ ರ‍್ಯಾಂಕಿಂಗ್‌ನಲ್ಲಿ ಹೆಚ್ಚಿನ ಪ್ರಗತಿ ಕಂಡಿದ್ದಾರೆ. ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಫೈನಲ್‌ನಲ್ಲಿ ಎರಡು ವಿಕೆಟ್ ಸೇರಿದಂತೆ ಒಟ್ಟು 9 ವಿಕೆಟ್ ಪಡೆದಿದ್ದ ಎಡಗೈ ಸ್ಪಿನ್ನರ್ ಸ್ಯಾಂಟನರ್ ಆರು ಸ್ಥಾನಗಳಷ್ಟು ಬಡ್ತಿ ಪಡೆದು ಎರಡನೇ ಸ್ಥಾನಕ್ಕೇರಿದ್ದಾರೆ. ಶ್ರೀಲಂಕಾದ ಆಫ್ ಸ್ಪಿನ್ನರ್ ಮಹೀಶ ತೀಕ್ಷಣ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಸ್ಪಿನ್‌ದ್ವಯರಾದ ಕುಲದೀಪ್ ಯಾದವ್ ಮತ್ತು ರವೀಂದ್ರ ಜಡೇಜ ಸಹ ಬಡ್ತಿ ಕಂಡು ಅಗ್ರ 10ರೊಳಗೆ ಸ್ಥಾನ ಪಡೆದಿದ್ದಾರೆ. ಎಡಗೈ ಸ್ಪಿನ್ನರ್ ಕುಲದೀಪ್ ಮೂರನೇ ಸ್ಥಾನಕ್ಕೇರಿದರೆ, ಜಡೇಜಾ ಹತ್ತನೇ ಸ್ಥಾನಕ್ಕೆ ಏರಿದ್ದಾರೆ.

ಏಕದಿನ ಆಲ್‌ರೌಂಡರ್‌ಗಳ ವಿಭಾಗದಲ್ಲಿ ಅಫ್ಘಾನಿಸ್ತಾನದ ಅಜ್ಮತ್‌ವುಲ್ಲಾ ಒಮರ್‌ಝೈ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ನ್ಯೂಜಿಲೆಂಡ್‌ನ ಮೂವರು ಬಡ್ತಿ ಪಡೆದಿದ್ದಾರೆ. ಮಿಚೆಲ್ ಸ್ಯಾಂಟನರ್ ನಾಲ್ಕನೇ, ಮೈಕೆಲ್ ಬ್ರೇಸ್‌ವೆಲ್ ಏಳನೇ ಮತ್ತು ರಚಿನ್ ರವೀಂದ್ರ ಎಂಟನೇ ಸ್ಥಾನಕ್ಕೆ ಏರಿದ್ದಾರೆ.

ಐಸಿಸಿ ತಿಂಗಳ ಆಟಗಾರನಾಗಿ ಗಿಲ್

ದುಬೈ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಟೂರ್ನಿ ಸೇರಿದಂತೆ ಕಳೆದ ತಿಂಗಳು ಏಕದಿನ ಕ್ರಿಕೆಟ್‌ನಲ್ಲಿ ಉತ್ತಮ ಆಟದ ಪ್ರದರ್ಶನ ನೀಡಿದ ಭಾರತ ತಂಡದ ಆರಂಭ ಆಟಗಾರ ಶುಭಮನ್ ಗಿಲ್ ಅವರು ಫೆಬ್ರುವರಿಯ 'ಐಸಿಸಿ ತಿಂಗಳ ಆಟಗಾರ' ಪ್ರಶಸ್ತಿಗೆ ಬುಧವಾರ ಪಾತ್ರರಾಗಿದ್ದಾರೆ.



ಶುಭಮನ್ ಗಿಲ್

ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್ ಮತ್ತು ನ್ಯೂಜಿಲೆಂಡ್‌ನ ಗ್ಲೆನ್ ಫಿಲಿಪ್ಸ್ ಅವರ ಪೈಪೋಟಿಯನ್ನು ಎದುರಿಸಿ ಗಿಲ್ ಈ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದಾರೆ. ಕಳೆದ ತಿಂಗಳ ಅವಧಿಯಲ್ಲಿ ಆಡಿದ ಐದು ಏಕದಿನ ಪಂದ್ಯಗಳಲ್ಲಿ ಗಿಲ್ 101.50 ಸರಾಸರಿಯಲ್ಲಿ 406 ರನ್ ಗಳಿಸಿದ್ದಾರೆ. 94.19 ಸ್ಟ್ರೈಕ್‌ರೇಟ್‌ನಲ್ಲಿ ರನ್‌ಗಳನ್ನು ಗಳಿಸಿದ್ದಾರೆ.

ಭಾರತ ತವರಿನಲ್ಲಿ ಇಂಗ್ಲೆಂಡ್ ವಿರುದ್ಧ ಏಕದಿನ ಸರಣಿಯಲ್ಲಿ ಸಾಧಿಸಿದ 3–0 ಗೆಲುವಿನಲ್ಲಿ ಗಿಲ್ ಪ್ರಮುಖ ಪಾತ್ರ ವಹಿಸಿದ್ದು, ಎಲ್ಲ ಮೂರೂ ಪಂದ್ಯಗಳಲ್ಲಿ ಅವರು 50ಕ್ಕಿಂತ ಹೆಚ್ಚು ರನ್ ಗಳಿಸಿದ್ದರು. ಕ್ರಮವಾಗಿ 87, 60 ಮತ್ತು 112 ರನ್ ಬಾರಿಸಿದ್ದು ಸರಣಿಯ ಸರ್ವೋತ್ತಮ ಪುರಸ್ಕಾರಕ್ಕೆ ಪಾತ್ರರಾಗಿದ್ದರು.

ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಭಾರತ ಆಡಿದ ಮೊದಲ ಪಂದ್ಯದಲ್ಲಿ ಅವರು ಬಾಂಗ್ಲಾದೇಶ ವಿರುದ್ಧ ಅಜೇಯ 101 ರನ್ ಗಳಿಸಿದ್ದರು. ಪಾಕಿಸ್ತಾನ ವಿರುದ್ಧ 46 ರನ್ ಹೊಡೆದಿದ್ದರು.

ಐಸಿಸಿಯ ತಿಂಗಳ ಆಟಗಾರ ಗೌರವಕ್ಕೆ ಗಿಲ್ ಮೂರನೇ ಬಾರಿ ಪಾತ್ರರಾಗಿದ್ದಾರೆ. ಈ ಹಿಂದೆ 2023ರ ಜನವರಿ ಮತ್ತು ಸೆಪ್ಟೆಂಬರ್‌ನಲ್ಲಿ ಈ ಗೌರವ ಅವರ ಪಾಲಾಗಿತ್ತು.

ಡಬ್ಲ್ಯುಪಿಎಲ್ : ಮುಂಬೈ ಇಂಡಿಯನ್ಸ್‌ಗೆ ಗುಜರಾತ್ ಜೈಂಟ್ಸ್ ಸವಾಲು ಇಂದು

ತವರಿನಲ್ಲಿ ಎಲಿಮಿನೇಟರ್ ಜಯಿಸುವತ್ತ ಕೌರ್ ಚಿತ್ತ

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಜೈಂಟ್ಸ್ ತಂಡಗಳು ಗುರುವಾರ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಎಲಿಮಿನೇಟರ್‌ನಲ್ಲಿ ಮುಖಾಮುಖಿಯಾಗಲಿವೆ. ಈ ಪಂದ್ಯದಲ್ಲಿ ಜಯಿ ಸಿದವರು ಫೈನಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಆಡುವರು.

ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಮುಂಬೈ ತಂಡವು ತವರಿನ ಅಂಗಳದಲ್ಲಿ ಟ್ರೋಫಿಗೆ ಮುತ್ತಿಡುವ ಕಾತುರದಲ್ಲಿದೆ. 2023ರಲ್ಲಿ ನಡೆದಿದ್ದ ಚೊಚ್ಚಲ ಡಬ್ಲ್ಯುಪಿಎಲ್‌ನಲ್ಲಿ ಮುಂಬೈ ಚಾಂಪಿಯನ್ ಆಗಿತ್ತು. ಹೋದ ಸಲ ಪ್ರಶಸ್ತಿ ಗೆದ್ದಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಬಾರಿ ಲೀಗ್ ಹಂತದಲ್ಲಿಯೇ ನಿರ್ಗಮಿಸಿತು.

ಪಾಯಿಂಟ್ ಪಟ್ಟಿಯಲ್ಲಿ ಮುಂಬೈ 10 ಮತ್ತು ಗುಜರಾತ್ 8 ಅಂಕ ಗಳಿಸಿ ಎಲಿಮಿನೇಟರ್‌ಗೆ ಪ್ರವೇಶಿಸಿವೆ. ಗುಜರಾತ್ ತಂಡವು ಲೀಗ್ ಹಂತದ ಆರಂಭದಲ್ಲಿ ಸತತ ಸೋಲುಗಳಿಂದ ಹೊರಬೀಳುವ ಆತಂಕ ಎದುರಿಸಿತ್ತು. ಆದರೆ ಬೆಂಗಳೂರಿನಲ್ಲಿ ಆರ್‌ಸಿಬಿ ವಿರುದ್ಧ ಜಯಿಸುವ ಮೂಲಕ ಪುಟಿದೆದ್ದ ಗಾರ್ಡನರ್ ಬಳಗವು ಈಗ ಪ್ರಶಸ್ತಿ ಸನಿಹ ಬಂದು ನಿಂತಿದೆ.



ಮುಂಬೈ ಇಂಡಿಯನ್ಸ್ ನಾಯಕಿ ಹರ್ಮನ್‌ಪ್ರೀತ್ ಕೌರ್ –ಪಿಟಿಐ ಚಿತ್ರ



ಗುಜರಾತ್ ಜೈಂಟ್ಸ್ ತಂಡದ ಆಶ್ಲೆ ಗಾರ್ಡನರ್

ಬೆತ್ ಮೂನಿ, ಹರ್ಲೀನ್ ಡಿಯೊಲ್, ದಿಯಾಂದ್ರ ಡಾಟಿನ್, ಭಾರತಿ ಫೂಲ್‌ಮಾಲಿ, ಫೋಬಿ ಲಿಚ್‌ಫೀಲ್ಡ್ ಹಾಗೂ ಪ್ರಿಯಾ ಮಿಶ್ರಾ ಅವರು ತಂಡದ ಗೆಲುವುಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಆದರೆ ಮುಂಬೈ ತಂಡವನ್ನು ಕಟ್ಟಿಹಾಕುವುದು ಗುಜರಾತ್ ಬಳಗಕ್ಕೆ ಸುಲಭವಲ್ಲ. ನಾಯಕಿ ಹರ್ಮನ್‌ಪ್ರೀತ್, ಆಲ್‌ರೌಂಡರ್ ನ್ಯಾಟ್ ಶಿವರ್ ಬ್ರಂಟ್, ಹೆಯ್ಲಿ ಮ್ಯಾಥ್ಯೂಸ್, ಅಮೆಲಿಯಾ ಕೆರ್ ಅವರನ್ನು ನಿಯಂತ್ರಿಸುವುದು ಎದುರಾಳಿಗಳಿಗೆ ದೊಡ್ಡ ಸವಾಲಾಗಲಿದೆ.

ಮುಂಬೈ ತಂಡದ ಬೌಲಿಂಗ್ ವಿಭಾಗವೂ ಬಲಿಷ್ಠವಾಗಿದೆ. ಮಧ್ಯಮ ವೇಗಿ ಶಬ್ನಿಂ ಇಸ್ಮಾಯಿಲ್, ಅಮೆಲಿಯಾ ಹಾಗೂ ಬ್ರಂಟ್ ಉತ್ತಮ ಲಯದಲ್ಲಿದ್ದಾರೆ. ಜೊತೆಗೆ ತವರಿನ ಅಂಗಳದಲ್ಲಿ ಅಭಿಮಾನಿಗಳ ಬೆಂಬಲ ಕೂಡ ಲಭಿಸಿರುವುದು ತಂಡದ ಬಲ ಹೆಚ್ಚಿಸುವ ನಿರೀಕ್ಷೆ ಇದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮಾಜಿ ಆಲ್‌ರೌಂಡರ್ ಅಬಿದ್ ಅಲಿ ಇನ್ನಿಲ್ಲ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಲ್‌ರೌಂಡರ್ ಸೈಯದ್ ಅಬಿದ್ ಅಲಿ (83) ಅವರು ಬುಧವಾರ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ನಿಧನರಾದರು. ಬೌಲಿಂಗ್, ಬ್ಯಾಟಿಂಗ್ ಜೊತೆಗೆ ಫೀಲ್ಡಿಂಗ್ ಕೌಶಲದಿಂದಲೂ ಅವರು ಹೆಸರು ಮಾಡಿದ್ದರು.

ಅವರು ಹೈದರಾಬಾದ್‌ನ ಕ್ರಿಕೆಟ್ ತಾರೆಗಳಾದ ಎಂ.ಎ.ಕೆ.ಪಟೌಡಿ, ಎಂ.ಎಲ್.ಜೈಸಿಂಹ, ಅಬ್ಬಾಸ್ ಅಲಿ ಬೇಗ್ ಅವರ ಸಮಕಾಲೀನರು. ಅಬಿದ್ ಅಲಿ ನಿಧನ ಸುದ್ದಿಯನ್ನು ನಾರ್ತ್ ಅಮೆರಿಕನ್ ಕ್ರಿಕೆಟ್ ಲೀಗ್ ಜಾಲತಾಣದಲ್ಲಿ ಹಂಚಿಕೊಂಡಿದೆ.

ಅಬಿದ್ ಅಲಿ ಆಸ್ಟ್ರೇಲಿಯಾ ವಿರುದ್ಧ ಅಡಿಲೇಡ್‌ನಲ್ಲಿ 1967ರ ಡಿಸೆಂಬರ್‌ನಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಆ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 55 ರನ್ನಿಗೆ 6 ವಿಕೆಟ್ ಪಡೆದು ಜೀವನಶ್ರೇಷ್ಠ ಸಾಧನೆ ದಾಖಲಿಸಿದ್ದರು. ಅದೇ ಸರಣಿಯಲ್ಲಿ ಬ್ಯಾಟಿಂಗ್‌ನಲ್ಲೂ ತಾವು ಸಮರ್ಥರೆಂಬುದನ್ನು ಅವರು ಸಾಬೀತುಪಡಿಸಿದ್ದರು. ಸಿಡ್ನಿ ಟೆಸ್ಟ್‌ನಲ್ಲಿ 78 ಮತ್ತು 81 ರನ್ ಗಳಿಸಿದ್ದರು.



ಸೈಯದ್ ಅಬಿದ್ ಅಲಿ

1967 ರಿಂದ 1974ರ ಅವಧಿಯಲ್ಲಿ ಅವರು 29 ಟೆಸ್ಟ್ ಪಂದ್ಯಗಳನ್ನು ಆಡಿದ್ದು 1,018 ರನ್ ಗಳಿಸಿದ್ದಾರೆ. 47 ವಿಕೆಟ್‌ಗಳನ್ನು ಪಡೆದಿದ್ದಾರೆ. ರನ್ ಗಳಿಸುವಾಗ ಅತಿ ವೇಗವಾಗಿ ಓಡುತ್ತಿದ್ದ ಅವರು, ಆ ಕಾಲದಲ್ಲಿ ಅತ್ಯುತ್ತಮ ಫೀಲ್ಡರ್ ಆಗಿಯೂ ಗುರುತಿಸಿಕೊಂಡಿದ್ದರು.

ಅಲಿ ಅವರು ಅಪರೂಪದ ಸಾಧನೆಗೂ ಪಾತ್ರರಾಗಿದ್ದಾರೆ. ತಂಡದ ಇನಿಂಗ್ಸ್ ಆರಂಭಿಸುತ್ತಿದ್ದ ಅವರು ಬೌಲಿಂಗ್‌ನಲ್ಲೂ ಮೊದಲನೆಯವರಾಗಿ ದಾಳಿಗಿಳಿಯುತ್ತಿದ್ದ ಸಂದರ್ಭಗಳೂ ಇದ್ದವು.

ಅವರು ಐದು ಏಕದಿನ ಪಂದ್ಯಗಳನ್ನು ಆಡಿದ್ದರು. 1974ರಲ್ಲಿ ಅಜಿತ್ ವಾಡೇಕರ್ ನೇತೃತ್ವದಲ್ಲಿ ಮೊದಲ ಬಾರಿ ಏಕದಿನ ಪಂದ್ಯ ಆಡಿದ್ದ ಭಾರತ ತಂಡದಲ್ಲಿ ಅವರೂ ಕಣಕ್ಕಿಳಿದಿದ್ದರು. ಮೊದಲ ಏಕದಿನ ವಿಶ್ವಕಪ್‌ನಲ್ಲಿ ಮೂರು ಪಂದ್ಯಗಳನ್ನು ಆಡಿದ್ದರು.

ನ್ಯೂಜಿಲೆಂಡ್ ವಿರುದ್ಧ 98 ಎಸೆತಗಳಲ್ಲಿ ಗಳಿಸಿದ 70 ರನ್‌ಗಳು ಅವರ ಸರ್ವಾಧಿಕ ಮೊತ್ತ. ಇದರಲ್ಲಿ ಅಜೇಯ 173 ಅತ್ಯಧಿಕ. ಅವರು 397 ವಿಕೆಟ್‌ಗಳನ್ನು ಗಳಿಸಿದ್ದು, 23ಕ್ಕೆ6 ಅವರ ಶ್ರೇಷ್ಠ ಬೌಲಿಂಗ್ ಸಾಧನೆಯಾಗಿದೆ.

ದೇಶೀಯ ಕ್ರಿಕೆಟ್‌ನಲ್ಲಿ 212 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದು 8,372 ರನ್ ಕಲೆಹಾಕಿದ್ದಾರೆ. ಆಂಧ್ರ ತಂಡಕ್ಕೆ ಕೋಚ್ ಕೂಡ ಆಗಿದ್ದರು.

ಅವರ ನಿಧನಕ್ಕೆ ಭಾರತ ತಂಡದ ಮಾಜಿ ಆಲ್‌ರೌಂಡರ್ ಮದನ್ ಲಾಲ್, ಮಾಜಿ ವಿಕೆಟ್ ಕೀಪರ್ ಎಂ.ಎಸ್.ಕೆ. ಪ್ರಸಾದ್ ಸೇರಿದಂತೆ ಹಿರಿಯ ಆಟಗಾರರು ಕಂಬನಿ ಮಿಡಿದಿದ್ದಾರೆ.

ಜೈ ಭಾರತ್ ನಗರ ಎಫ್‌ಸಿಗೆ ಗೆಲುವು

ಬೆಂಗಳೂರು: ಜೈ ಭಾರತ್ ನಗರ ಎಫ್‌ಸಿ ತಂಡ ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಬುಧವಾರ ನಾಡಪ್ರಭು ಕೆಂಪೇಗೌಡ ಎಫ್‌ಸಿ ತಂಡವನ್ನು 2–0 ಗೋಲುಗಳಿಂದ ಮಣಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಜೈ ಭಾರತ್ ನಗರ ತಂಡದ ಕೆ.ಎಂ.ಮುಹಮ್ಮದ್ ಶಮೀಮ್ (8ನೇ ನಿ.), ಯದುಕೃಷ್ಣನ್ (54ನೇ ನಿ.) ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ತಿಲಕ್ ಮೆಮೋರಿಯಲ್ ಎಫ್‌ಸಿ ತಂಡ 2–1 ಗೋಲುಗಳಿಂದ ಬಾಗಲಗುಂಟೆ ಎಫ್‌ಸಿ ತಂಡವನ್ನು ಸೋಲಿಸಿತು. ತಿಲಕ್ ಮೆಮೋರಿಯಲ್ ಪರ ಮಧುರಾಜ್ ಜಿ. ಸಿದ್ದೇಶ್ (20ನೇ ನಿ.) ಚೆಂಡನ್ನು ಗುರಿ ಸೇರಿಸಿದರು. ಬಾಗಲಗುಂಟೆ ತಂಡದ ಅಂಕಿತ್ ಕುಮಾರ್ ಗೋಲು ಬಾರಿಸಿದರು.

ಐಎಂಎಲ್: ಸಿಮನ್ಸ್ ಶತಕ ಸೆಮಿಗೆ ವೆಸ್ಟ್‌ಇಂಡೀಸ್

ರಾಯಪುರ (ಪಿಟಿಐ): ಲೆಂಡ್ಲ್ ಸಿಮನ್ಸ್ ಅವರ ಮಿಂಚಿನ ಶತಕ ಮತ್ತು ರವಿ ರಾಂಪಾಲ್ (26ಕ್ಕೆ5) ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ವೆಸ್ಟ್ ಇಂಡೀಸ್ ತಂಡ, ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಕ್ರಿಕೆಟ್ ಲೀಗ್ ಪಂದ್ಯದಲ್ಲಿ ಮಂಗಳವಾರ ರಾತ್ರಿ 29 ರನ್‌ಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಸೆಮಿಫೈನಲ್ ತಲುಪಿತು.

ಶಾಹೀದ್ ವೀರ್ ನಾರಾಯಣ್ ಸಿಂಗ್ ಅಂತರರಾಷ್ಟ್ರೀಯ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಬ್ಯಾಟ್ ಮಾಡಲು ಕಳುಹಿಲಸ್ಪಟ್ಟ ವೆಸ್ಟ್ ಇಂಡೀಸ್ 5 ವಿಕೆಟ್ ನಷ್ಟಕ್ಕೆ 200 ರನ್‌ಗಳ ದೊಡ್ಡ ಮೊತ್ತ ಕಲೆಹಾಕಿತು.

ಡ್ವೇನ್ ಸ್ಮಿತ್ (5) ಮತ್ತು ವಿಲಿಯಂ ಪರ್ಕಿನ್ಸ್ (5) ಬೇಗ ನಿರ್ಗಮಿಸಿದರೂ, ಸಿಮನ್ಸ್ ಮತ್ತು ನಾಯಕ ಬ್ರಿಯಾನ್ ಲಾರಾ ಜೊತೆಗೂಡಿ ಮೂರನೇ ವಿಕೆಟ್‌ಗೆ 125 ರನ್ ಸೇರಿಸಿ ತಂಡ ದೊಡ್ಡ ಮೊತ್ತ ಸೇರಿಸಲು ನೆರವಾದರು.

ಸಿಮನ್ಸ್ 59 ಎಸೆತಗಳಲ್ಲಿ 13 ಬೌಂಡರಿ, ಐದು ಭರ್ಜರಿ ಸಿಕ್ಸರ್‌ಗಳಿದ್ದ 108 ರನ್ ಬಾರಿಸಿದರು. ಬೃಹತ್ ಮೊತ್ತ ಬೆನ್ನತ್ತಿದ ದಕ್ಷಿಣ ಆಫ್ರಿಕಾ ಮಾಸ್ಟರ್ಸ್ ತಂಡ ವೇಗಿ ರಾಂಪಾಲ್ ದಾಳಿಗೆ ತತ್ತರಿಸಿತು. ದಕ್ಷಿಣ ಆಫ್ರಿಕಾ ಮಾಸ್ಟರ್ಸ್ ತಂಡದ ರಿಚರ್ಡ್ ಲೆವಿ (44), ನಾಯಕ ಜ್ಯಾಕ್ ಕಾಲಿಸ್(45), ಜಾಕ್ವೆಸ್ ರುಡಾಲ್ಫ್ (39) ಮಾತ್ರ ಸ್ವಲ್ಪ ಹೋರಾಟ ತೋರಿದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರುಗಳಲ್ಲಿ 5ಕ್ಕೆ 200 (ಲೆಂಡ್ಲ್ ಸಿಮನ್ಸ್ 108, ಚಾಡ್ವಿಕ್ ವಾಲ್ಟನ್ ಔಟಾಗದೇ 38, ಬ್ರಯಾನ್ ಲಾರಾ 29, ಗಾರ್ನೆಟ್ ಕ್ರುಜರ್ 14ಕ್ಕೆ2, ಮಕಾಯ ಎಂಟಿನಿ 34ಕ್ಕೆ2);
ದಕ್ಷಿಣ ಆಫ್ರಿಕಾ: 20 ಓವರುಗಳಲ್ಲಿ 8 ವಿಕೆಟ್‌ಗೆ 171 (ಜ್ಯಾಕ್ ಕಾಲಿಸ್ 45, ರಿಚಡ್ ಲೆವಿ 44, ಜಾಕ್ವೆಸ್ ರುಡಾಲ್ಫ್ 39; ರವಿ ರಾಂಪಾಲ್ 26ಕ್ಕೆ5).

ಭಾರತವಿಲ್ಲದ ಡಬ್ಲ್ಯುಟಿಸಿ ಫೈನಲ್: ಲಾರ್ಡ್ಸ್‌ಗೆ ಆದಾಯ ನಷ್ಟ

ಲಂಡನ್ (ಪಿಟಿಐ): ಲಾರ್ಡ್ಸ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೆ ಭಾರತ ತಂಡವು ಅರ್ಹತೆ ಗಳಿಸಿಲ್ಲ. ಇದರಿಂದಾಗಿ ಆಯೋಜಕರಿಗೆ ಸುಮಾರು ₹ 45 ಕೋಟಿಗೂ ಹೆಚ್ಚು ನಷ್ಟವಾಗುವ ಸಾಧ್ಯತೆ ಇದೆ.

ಜೂನ್ ತಿಂಗಳಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಮುಖಾಮುಖಿಯಾಗಲಿವೆ. ಡಬ್ಲ್ಯುಟಿಸಿಯ ಮೊದಲ ಎರಡೂ ಆವೃತ್ತಿಗಳ ಫೈನಲ್‌ನಲ್ಲಿ ಭಾರತ ತಂಡವು ರನ್ನರ್ಸ್ ಅಪ್ ಆಗಿತ್ತು. ಆದರೆ ಈ ಬಾರಿ ಫೈನಲ್ ಪ್ರವೇಶಿಸುವಲ್ಲಿ ವಿಫಲವಾಯಿತು.

'ಡಬ್ಲ್ಯುಟಿಸಿ ಫೈನಲ್‌ನಿಂದ ಲಾರ್ಡ್ಸ್‌ಗೆ ಬರುವ ಆದಾಯದಲ್ಲಿ ಈ ಬಾರಿ ₹45 ಕೋಟಿ ಕಡಿತವಾಗಲಿದೆ. ಭಾರತ ತಂಡವು ಈ ಪಂದ್ಯದಲ್ಲಿ ಆಡದಿರುವ ಕಾರಣ ಆದಾಯ ನಷ್ಟವಾಗುವ ಸಾಧ್ಯತೆಯನ್ನು ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಅಂದಾಜು ಮಾಡಿದೆ. ಜಾಗತಿಕ ಕ್ರಿಕೆಟ್‌ನಲ್ಲಿ ಭಾರತ



ಲಾರ್ಡ್ಸ್ ಮೈದಾನ

ತಂಡದ ಪ್ರಭಾವದ ಅಧ್ಯಯನದ ಮೂಲಕ ಈ ಅಂದಾಜು ಮಾಡಲಾಗಿದೆ' ಎಂದು 'ದ ಟೈಮ್ಸ್' ವರದಿ ಮಾಡಿದೆ.

'ಈ ಬಾರಿಯ ಟಿಕೆಟ್ ದರಗಳನ್ನೂ ಕಡಿಮೆ ಮಾಡಲಾಗಿದೆ. ₹4500 ರಿಂದ ₹ 10000 ವರೆಗೆ ನಿಗದಿಯಾಗಿದೆ. ಇದು ಕಳೆದೆರಡು ಬಾರಿಗಿಂತಲೂ ಸುಮಾರು ₹5500ರಷ್ಟು ದರ ಕಡಿತ ಮಾಡಲಾಗಿದೆ. ನಷ್ಟಕ್ಕೆ ಇದು ಪ್ರಮುಖ ಕಾರಣವಾಗಿದೆ' ಎಂದೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಪಾಕಿಸ್ತಾನ: ರೈಲಿನಲ್ಲಿದ್ದ 21 ಪ್ರಯಾಣಿಕರು, ನಾಲ್ಕು ಮಂದಿ ಭದ್ರತಾ ಸಿಬ್ಬಂದಿ ಹತ

ಒತ್ತೆಯಾಳುಗಳ ರಕ್ಷಣೆ, 33 ಉಗ್ರರ ಹತ್ಯೆ

ಕರಾಚಿ/ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದಲ್ಲಿ ರೈಲಿನ ಮೇಲೆ ದಾಳಿ ನಡೆಸಿದ್ದ ಉಗ್ರರು ಒಟ್ಟು 21 ಮಂದಿ ಪ್ರಯಾಣಿಕರನ್ನು ಹಾಗೂ ಅರೆಸೇನಾ ಪಡೆಯ ನಾಲ್ಕು ಮಂದಿಯನ್ನು ಹತ್ಯೆ ಮಾಡಿದ್ದಾರೆ.

ರೈಲು ಪ್ರಯಾಣಿಕರನ್ನು ರಕ್ಷಿಸುವ ಉದ್ದೇಶದಿಂದ ನಡೆಸಿದ ಸೇನಾ ಕಾರ್ಯಾಚರಣೆ ಪೂರ್ಣಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಥಳದಲ್ಲಿ ಇದ್ದ 33 ಮಂದಿ ಉಗ್ರರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ ಎಂದು ಪಾಕಿಸ್ತಾನ ಸೇನೆಯ ವಕ್ತಾರ ಲೆಫ್ಟಿನೆಂಟ್ ಜನರಲ್ ಅಹ್ಮದ್ ಶರೀಫ್ ಅವರು ಸುದ್ದಿವಾಹಿನಿಯೊಂದಕ್ಕೆ ತಿಳಿಸಿದ್ದಾರೆ.

'ರೈಲಿನಲ್ಲಿ ಒಟ್ಟು 440 ಮಂದಿ ಪ್ರಯಾಣಿಕರಿದ್ದರು. ರಕ್ಷಣಾ ಕಾರ್ಯಾಚರಣೆಯನ್ನು ಪಾಕಿಸ್ತಾನದ ಭದ್ರತಾ ಪಡೆಗಳು ಅಪಾರ ಕೌಶಲದೊಂದಿಗೆ ನಡೆಸಿವೆ' ಎಂದು ಪಾಕಿಸ್ತಾನದ ಸಚಿವ ಅತಾವುಲ್ಲಾ ತರಾರ್ ಹೇಳಿದ್ದಾರೆ.

'ಎಲ್ಲ ಉಗ್ರರನ್ನು ಹೊಡೆದುರುಳಿಸಿ, ಎಲ್ಲ ಪ್ರಯಾಣಿಕರನ್ನು ರಕ್ಷಿಸಿ ಸಶಸ್ತ್ರ ಪಡೆಗಳು ರಕ್ಷಣಾ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿವೆ' ಎಂದು ಶರೀಫ್ ಹೇಳಿದ್ದಾರೆ.

ಜಾಫರ್ ಎಕ್ಸ್‌ಪ್ರೆಸ್ ಹೆಸರಿನ ಈ ರೈಲು ಕ್ವೆಟ್ಟಾದಿಂದ ಪೆಶಾವರ ಕಡೆ ತೆರಳುತ್ತಿತ್ತು. ಆಗ ಸ್ಫೋಟಕ ಬಳಸಿ ಉಗ್ರರು ರೈಲಿನ ಹಳಿ ತಪ್ಪಿಸಿದರು. ನಂತರ ಅದನ್ನು ಅಪಹರಿಸಿದ್ದರು.



ಬಲೂಚಿ ಉಗ್ರರ ಒತ್ತೆಯಲ್ಲಿದ್ದ ರೈಲು ಪ್ರಯಾಣಿಕರನ್ನು ರಕ್ಷಿಸಲು ಪಾಕಿಸ್ತಾನದ ಭದ್ರತಾ ಪಡೆಗಳು ಘಟನಾ ಸ್ಥಳದ ಸಮೀಪದಲ್ಲಿರುವ ಮ್ಯಾಕ್ ರೈಲು ನಿಲ್ದಾಣದಲ್ಲಿ ಬುಧವಾರ ಕಾರ್ಯಾಚರಣೆ ನಡೆಸಿದವು –ಎಎಫ್‌ಪಿ ಚಿತ್ರ

ರೈಲಿನ ಮೇಲೆ ದಾಳಿ ನಡೆಸಿದ್ದು ತಾನು ಎಂದು ಬಲೂಚಿಸ್ತಾನ ಮುಕ್ತಿ ಸೇನೆ (ಬಿಎಲ್‌ಎ) ಹೇಳಿಕೊಂಡಿತ್ತು. ಉಗ್ರರು ಆರಂಭದಲ್ಲಿ ಒತ್ತೆಯಾಳುಗಳನ್ನು ಮಾನವ ಗುರಾಣಿ ರೀತಿಯಲ್ಲಿ ಬಳಸಿಕೊಂಡಿದ್ದರು.

ಸೇನಾ ಕಾರ್ಯಾಚರಣೆ ನಡೆಯುತ್ತಿದ್ದ ಸಂದರ್ಭದಲ್ಲಿ ಉಗ್ರರು ತಮಗೆ ಅಫ್ಗಾನಿಸ್ತಾನದಿಂದ ನೆರವು ಒದಗಿಸುವವರ ಜೊತೆ ಉಪಗ್ರಹ ದೂರವಾಣಿ ಮೂಲಕ ಸಂಪರ್ಕದಲ್ಲಿದ್ದರು. ಅಂದರೆ, ಅವರಿಗೆ ವಿದೇಶಿ ನೆರವು ಇತ್ತು ಎಂಬುದನ್ನು ಇದು ತೋರಿಸುತ್ತದೆ ಎಂದು ಶರೀಫ್ ವಿವರಿಸಿದ್ದಾರೆ.

ಒತ್ತೆಯಾಳುಗಳನ್ನು ಮಾನವ ಗುರಾಣಿಗಳಂತೆ ಉಗ್ರರು ಬಳಸಿದ ಕಾರಣದಿಂದಾಗಿ ರಕ್ಷಣಾ ಕಾರ್ಯಾಚರಣೆ ತುಸು ವಿಳಂಬ ಆಯಿತು ಎಂದು ಶರೀಫ್ ಹೇಳಿದ್ದಾರೆ. ರಕ್ಷಣಾ ಕಾರ್ಯಾಚರಣೆಯ ಸಂದರ್ಭದಲ್ಲಿ ಯಾವುದೇ ಪ್ರಯಾಣಿಕರಿಗೆ ಹಾನಿ ಆಗಿಲ್ಲ ಎಂದಿದ್ದಾರೆ.

ಉಗ್ರರು ಹಾಗೂ ಅವರಿಗೆ ನೆರವು ನೀಡಿದವರು ಎಲ್ಲಿಯೇ ಇದ್ದರೂ ಅವರನ್ನು ಹುಡುಕಿ ಕೊಲ್ಲಲಾಗುವುದು ಎಂದು ಶರೀಫ್ ಎಚ್ಚರಿಕೆ ನೀಡಿದ್ದಾರೆ.

ಭಾರತದ ಮಾಧ್ಯಮಗಳ ವಿರುದ್ಧ ಕಿಡಿ: ಮಾಹಿತಿ ಸಚಿವ ತರಾರ್ ಅವರು ಭಾರತದ ಮಾಧ್ಯಮಗಳ ವಿರುದ್ಧ ಕಿಡಿಕಾರಿದ್ದಾರೆ. ಭಾರತದ ಮಾಧ್ಯಮಗಳು ತಪ್ಪು ಮಾಹಿತಿಯ ಪ್ರಚಾರಾಂದೋಲನದಲ್ಲಿ ತೊಡಗಿವೆ ಎಂದು ಅವರು ದೂರಿದ್ದಾರೆ. 'ಕೆಲವು ರಾಜಕೀಯ ಶಕ್ತಿಗಳೂ ಈ ದುರಂತವನ್ನು ದುರ್ಬಳಕೆ ಮಾಡಿಕೊಳ್ಳಲು ಯತ್ನಿಸಿವೆ' ಎಂದು ಹೇಳಿದ್ದಾರೆ.

ಕರಾಳ ಘಟನೆ ಬಿಚ್ಚಿಟ್ಟ ಪ್ರಯಾಣಿಕರು

ಮ್ಯಾಕ್, ಸಿಬಿ (ಪಾಕಿಸ್ತಾನ) (ಎಎಫ್‌ಪಿ): ಪಾಕಿಸ್ತಾನ ಭದ್ರತಾ ಪಡೆಗಳು ರಕ್ಷಿಸಿರುವ 190 ಪ್ರಯಾಣಿಕರಲ್ಲಿ ಒಬ್ಬರಾದ ಮುಷ್ತಾಕ್ ಮುಹಮ್ಮದ್, ಜಾಫರ್ ಎಕ್ಸ್‌ಪ್ರೆಸ್ ಮೇಲಿನ ಉಗ್ರರ ದಾಳಿಯ ಕ್ಷಣವನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದು, 'ಅಲ್ಲಿ ಭಾರಿ ಸ್ಫೋಟ ಮತ್ತು ಗುಂಡಿನ ದಾಳಿ ನಡೆದಿದೆ. ಅದು ಎಂದಿಗೂ ಮರೆಯಲಾಗದ ದೃಶ್ಯ' ಎಂದು ಹೇಳಿದರು.

ಈ ರೈಲಿನ ಮೂರನೇ ಬೋಗಿಯಲ್ಲಿದ್ದ ಮುಷ್ತಾಕ್, 'ಮೊದಲು ಭಾರಿ ಸ್ಫೋಟ, ನಂತರ ಒಂದು ಗಂಟೆ ಗುಂಡಿನ ಮೊರೆತ ಕೇಳಿಸಿತು. ನಂತರ ಶಸ್ತ್ರಧಾರಿಗಳು ಬೋಗಿಗಳನ್ನು ಪ್ರವೇಶಿಸಿದರು. ಮೂವರು ಉಗ್ರರು ನಮ್ಮ ಬೋಗಿಯ ಬಾಗಿಲಿಗೆ ಕಾವಲಿದ್ದರು. ನಾಗರಿಕರು, ಮಹಿಳೆಯರು, ವೃದ್ಧರು ಮತ್ತು ಬಲೂಚ್ ಜನರಿಗೆ ಏನೂ ಮಾಡುವುದಿಲ್ಲವೆಂದು ಅವರು ಅಭಯ ನೀಡಿದರು' ಎಂದು ಮುಸ್ತಾಕ್ ತಿಳಿಸಿದ್ದಾಗಿ 'ಬಿಬಿಸಿ ಉರ್ದು' ಮಾಧ್ಯಮ ವರದಿ ಮಾಡಿದೆ.

ತನ್ನ ಇಬ್ಬರು ಮಕ್ಕಳು ಮತ್ತು ಪತ್ನಿ ಸಮೇತ ಪಾರಾಗಿ ಬಂದಿರುವ ಐಶಾಕ್ ನೂರ್ ಹೇಳುವ ಪ್ರಕಾರ, 'ಸ್ಫೋಟ ಎಷ್ಟು ತೀವ್ರವಾಗಿತ್ತೆಂದರೆ ರೈಲಿನ ಕಿಟಕಿಗಳು ಮತ್ತು ಬಾಗಿಲುಗಳು ನಡುಗಿವೆ. ಅವರ ಬಳಿ ಕುಳಿತಿದ್ದ ಮಕ್ಕಳಲ್ಲಿ ಒಬ್ಬ ಕೆಳಗೆ ಬಿದ್ದಿದ್ದಾನೆ'. 'ಬೋಗಿಗಳಿಗೆ ಗುಂಡಿನ ಏಟುಗಳು ಬೀಳುತ್ತಿರುವುದನ್ನು ನೋಡಿದ ಮೇಲೆ, ಗುಂಡು ನಮಗೆ ತಗುಲಿದರೂ ಮಕ್ಕಳು ಬದುಕುಳಿಯಲಿ ಎಂದು ಒಂದೊಂದು ಮಗುವನ್ನು ಅವುಚಿ ಕುಳಿತೆವು' ಎಂದು ತಿಳಿಸಿದ್ದಾರೆ.

'ಉಗ್ರರು ನಮ್ಮ ಬೋಗಿಯಿಂದ 11 ಪ್ರಯಾಣಿಕರನ್ನು ಕೆಳಗಿಳಿಸಿದರು. ಅವರು ಭದ್ರತಾ ಸಿಬ್ಬಂದಿ ಇರಬಹುದು. ಅವರಲ್ಲಿ ಒಬ್ಬ ಪ್ರತಿರೋಧ ತೋರಿದ್ದಕ್ಕೆ ಆತನಿಗೆ ಚಿತ್ರಹಿಂಸೆ ನೀಡಿ, ಕೆಳಗಿಳಿಸಿದರು. ನಂತರ ಗುಂಡಿನ ಸದ್ದು ಕೇಳಿಸಿತು. ಆ ನಂತರ, ನಮ್ಮ ಬೋಗಿಯಲ್ಲಿದ್ದವರೆಲ್ಲರೂ ಅವರ ಸೂಚನೆ ಪಾಲಿಸಿದೆವು. ಸಂಜೆ ವೇಳೆಗೆ ಬಲೂಚಿಗರು, ಮಹಿಳೆಯರು, ಮಕ್ಕಳು ಮತ್ತು ವೃದ್ಧ ಪ್ರಯಾಣಿಕರನ್ನು ಅವರು ಬಿಡುಗಡೆ ಮಾಡಿದರು' ಎಂದು ಐಸಾಕ್ ತಿಳಿಸಿದರು.

ಮತ್ತೊಬ್ಬ ಪ್ರಯಾಣಿಕ ಮುಹಮ್ಮದ್ ಅಶ್ರಫ್, 'ನನ್ನ ಅಂದಾಜಿನ ಪ್ರಕಾರ, ಅವರು (ಉಗ್ರಗಾಮಿಗಳು) ಸುಮಾರು 250 ಪ್ರಯಾಣಿಕರನ್ನು ತಮ್ಮೊಂದಿಗೆ ಕರೆದೊಯ್ದಿದ್ದಾರೆ. ದಾಳಿಕೋರರು ಸುಮಾರು 1,100 ಮಂದಿ ಇದ್ದರು' ಎಂದು ತಿಳಿಸಿದ್ದಾರೆ.

'ಉಕ್ರೇನ್ ಕದನ ವಿರಾಮ: ನಿರ್ಧಾರ ಈಗ ರಷ್ಯಾ ಅಂಗಳದಲ್ಲಿ'

ಕೀವ್ (ಎಎಫ್‌ಪಿ): ಮೂರು ವರ್ಷಗಳಿಂದ ನಡೆಯುತ್ತಿರುವ ಯುದ್ಧವನ್ನು ಕೊನೆಗಾಣಿಸಲು ಉಕ್ರೇನ್ ಮೊದಲ ಹೆಜ್ಜೆ ಇರಿಸಿದೆ. 30 ದಿನಗಳ ಕದನ ವಿರಾಮಕ್ಕೆ ಉಕ್ರೇನ್ ಒಪ್ಪಿಗೆ ನೀಡಿದೆ.

ಕದನ ವಿರಾಮಕ್ಕೆ ರಷ್ಯಾದ ಪ್ರತಿಕ್ರಿಯೆ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಈ ಒಪ್ಪಂದಕ್ಕೆ ರಷ್ಯಾ ಒಪ್ಪಿಕೊಳ್ಳಬೇಕು ಎಂದು ಅಮೆರಿಕವೂ ಸೇರಿ ಐರೋಪ್ಯ ಒಕ್ಕೂಟದ ಹಲವು ದೇಶಗಳು ಒತ್ತಡ ಹೇರುತ್ತಿವೆ. 'ಸೌದಿ ಅರೇಬಿಯಾದಲ್ಲಿ ನಡೆದ ಉಕ್ರೇನ್ ಮತ್ತು ಅಮೆರಿಕದ ಅಧಿಕಾರಿಗಳ ಸಭೆಯ ಬಗ್ಗೆ ಅಮೆರಿಕದ ವಿವರಣೆಯನ್ನು ಕಾಯುತ್ತಿದ್ದೇವೆ' ಎಂದು ರಷ್ಯಾ ಹೇಳಿದೆ. ಉಕ್ರೇನ್‌ಗೆ ನೀಡುತ್ತಿದ್ದ ಸೇನಾ ನೆರವನ್ನು ಕೆಲವು ದಿನಗಳ ಹಿಂದೆ ಅಮೆರಿಕ ಸ್ಥಗಿತಗೊಳಿಸಿತ್ತು. ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸುತ್ತಿದ್ದಂತೆಯೇ ಅಮೆರಿಕವು ಈ ನಿರ್ಧಾರ ಹಿಂಪಡೆದಿದೆ.

ಉಕ್ರೇನ್‌ನ ನಿರ್ಧಾರವನ್ನು ಸ್ವಾಗತಿಸಿರುವ ಬ್ರಿಟನ್, ಫ್ರಾನ್ಸ್, ಇಟಲಿ ಸೇರಿ ಐರೋಪ್ಯ ಒಕ್ಕೂಟ, 'ಶಾಂತಿ ಬೇಕೋ ಬೇಡವೋ ಎಂಬುದು ಈಗ ರಷ್ಯಾಗೆ ಬಿಟ್ಟಿದ್ದು' ಎಂದು ಪ್ರತಿಕ್ರಿಯಿಸಿವೆ.

'ರಷ್ಯಾ ಒಪ್ಪಿಗೆ ನೀಡುತ್ತದೆಂಬ ನಂಬಿಕೆ ಇದೆ'

ಕದನ ವಿರಾಮಕ್ಕೆ ಉಕ್ರೇನ್ ಒಪ್ಪಿಗೆ ಸೂಚಿಸಿದೆ. ಈಗ ರಷ್ಯಾವು ತನ್ನ ನಿರ್ಧಾರ ಪ್ರಕಟಿಸುವ ಬಾರಿ. ರಷ್ಯಾ ಅಧ್ಯಕ್ಷ ಪುಟಿನ್ ಅವರು ಇದಕ್ಕೆ ಒಪ್ಪಿಗೆ ನೀಡುತ್ತಾರೆ ಎಂಬ ನಂಬಿಕೆ ಇದೆ. ರಷ್ಯಾ ಒಪ್ಪಿದರೆ, ಅದು ಖುಷಿಯ ವಿಚಾರ. ಒಂದು ವೇಳೆ, ನಮ್ಮ ಈ ಪ್ರಯತ್ನಕ್ಕೆ ರಷ್ಯಾ ಒಪ್ಪಿಗೆ ನೀಡದೇ ಇದ್ದರೆ, ನಾವು ಪ್ರಯತ್ನವನ್ನು ಮುಂದುವರಿಸುತ್ತಲೇ ಇರುತ್ತೇವೆ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿದ್ದಾರೆ.

ಅಲ್ಪೈನ್ ಎಫ್1 ತಂಡಕ್ಕೆ ಕುಶ್ ಮೈನಿ

ಕುಶ್ ಮೈನಿ

ಲಂಡನ್ (ಪಿಟಿಐ): ಬೆಂಗಳೂರಿನ ಕುಶ್ ಮೈನಿ ಅವರು ಅಲ್ಪೈನ್ ಫಾರ್ಮುಲಾ ಒನ್ ತಂಡದ ರಿಸರ್ವ್ ಡ್ರೈವರ್ ಆಗಿ ಬಡ್ತಿ ಪಡೆದಿದ್ದಾರೆ.

ಇದೇ 16ರಂದು ಮೆಲ್ಬರ್ನ್‌ನಲ್ಲಿ ಋತುವಿನ ಮೊದಲ ಹಂತ ಆರಂಭವಾಗಲಿದೆ. ಅದರಲ್ಲಿ ತಂಡವು ಭಾಗವಹಿಸಲಿದೆ.

ಮೈನಿ ಫಾರ್ಮುಲಾ 2ರ ಹಂತವನ್ನು ಪೂರ್ಣಗೊಳಿಸಿದರು. 24 ವರ್ಷದ ಮೈನಿ 2023ರ ಅಕ್ಟೋಬರ್‌ನಲ್ಲಿ ಅಲ್ಪೈನ್ ಜೂನಿಯರ್ ಡ್ರೈವರ್ ಕಾರ್ಯಕ್ರಮದಡಿಯಲ್ಲಿ ಸೇರಿಕೊಂಡರು. ಇದೀಗ ಅವರು ಫ್ರಾಂಕೊ ಕೊಲಾಪಿಂಟೊ, ಪಾಲ್ ಆ್ಯರನ್ ಮತ್ತು ರಿಯೊ ಹಿರಾಕಾವಾ ಅವರೂ ಈ ರಿಸರ್ವ್ ಡ್ರೈವರ್ಸ್ ಬಳಗದಲ್ಲಿದ್ದಾರೆ.

ಫಾರ್ಮುಲಾ ಒನ್ ಬಳಗಕ್ಕೆ ಸೇರಿದ ಭಾರತದ ಮೂರನೇ ಡ್ರೈವರ್ ಎಂಬ ಹೆಗ್ಗಳಿಕೆಗೆ ಮೈನಿ ಪಾತ್ರರಾಗಿದ್ದಾರೆ. ಈ ಮೊದಲು ನಾರಾಯಣ್ ಕಾರ್ತಿಕೆಯನ್ ಮತ್ತು ಕರುಣ್ ಚಾಂದೋಕ್ ಅವರು ಈ ಸಾಧನೆ ಮಾಡಿದ್ದರು.

ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್: 15ಕ್ಕೆ ಟ್ರಯಲ್ಸ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಫೆಡರೇಷನ್ ಎಂಬ ಮಾನ್ಯತೆ ಮರಳಿ ಪಡೆದಿರುವ ಭಾರತ ಕುಸ್ತಿ ಫೆಡರೇಷನ್ ಈಗ ಕ್ರಿಯಾಶೀಲವಾಗಿದ್ದು, ಮುಂಬರುವ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಭಾಗ ವಹಿಸುವ ತಂಡದ ಆಯ್ಕೆಗೆ ಇದೇ 15ರಂದು ಇಲ್ಲಿನ ಇಂದಿರಾ ಗಾಂಧಿ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ಟ್ರಯಲ್ಸ್ ನಡೆಸಲಿದೆ.

2023ರ ಡಿಸೆಂಬರ್‌ನಲ್ಲಿ ಫೆಡರೇಷನ್‌ನ ಹೊಸ ಸಮಿತಿ ಆಯ್ಕೆಯಾದ ನಂತರ ಅದು ನಡೆಸುತ್ತಿರುವ ಮೊದಲ ಟ್ರಯಲ್ಸ್ ಇದಾಗಿದೆ. ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್ ಜೋರ್ಡಾನ್‌ನ ಅಮ್ಮಾನ್‌ನಲ್ಲಿ ಮಾರ್ಚ್ 25 ರಿಂದ 30ರವರೆಗೆ ನಡೆಯಲಿದೆ.

ಟ್ರಯಲ್ಸ್ ದಿನವೇ ಮಹಿಳೆಯರ ವಿಭಾಗ, ಪುರುಷರ ವಿಭಾಗದ ಫ್ರೀಸ್ಟೈಲ್ ಮತ್ತು ಗ್ರೀಕೊ ರೋಮನ್ ಸ್ಪರ್ಧೆಗಳ ತೂಕ ಅಳೆಯಲಾಗುವುದು. ಎಲ್ಲಾ ಸ್ಪರ್ಧೆಗಳಿಗೆ ಎರಡು ಕೆ.ಜಿ. ವರೆಗೆ ರಿಯಾಯಿತಿ ನೀಡಲಾಗುವುದು ಎಂದು ಭಾರತ ಕುಸ್ತಿ ಫೆಡರೇಷನ್‌ನ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಅಮಾನತಿನಲ್ಲಿದ್ದ ಸಂದರ್ಭದಲ್ಲಿ ಡಬ್ಲ್ಯುಎಫ್‌ಐ ರಾಷ್ಟ್ರೀಯ ತಂಡಗಳನ್ನು ಆಯ್ಕೆ ಮಾಡುವ ಅಧಿಕಾರ ಹೊಂದಿರಲಿಲ್ಲ. ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಪ್ರಮುಖ ಕುಸ್ತಿಪಟುಗಳು ಅಮಾನತಿನಲ್ಲಿರುವ ಫೆಡರೇಷನ್ ಅಧಿಕಾರ ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿದ್ದರು.

ಕ್ರೀಡಾ ಸಚಿವಾಲಯ, ಸೋಮವಾರ ಭಾರತ ಕುಸ್ತಿ ಫೆಡರೇಷನ್ ಮೇಲಿನ ಅಮಾನತು ಹಿಂಪಡೆದಿತ್ತು.

ಸೆಮಿಫೈನಲ್‌ಗೆ ಮಾನವ್ ಜೈನ್

ಬೆಂಗಳೂರು: ಆತಿಥೇಯ ಕರ್ನಾಟಕದ ಮಾನವ್ ಜೈನ್ ಇಲ್ಲಿ ನಡೆಯುತ್ತಿರುವ ಸಿಆರ್‌ಎಸ್ ಎಐಟಿಎ ಟೆನಿಸ್ ಟೂರ್ನಿಯಲ್ಲಿ ಬುಧವಾರ ಸೆಮಿಫೈನಲ್ ತಲುಪಿದರು.

ಟೆನಿಸ್ ಅಡ್ವಾಂಟೇಜ್ ಅಂಕಣದಲ್ಲಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕದ ಮಾನವ್ ಅವರು ರಾಜ್ಯದವರೇ ಆದ ದೀಪಕ್ ಅವರನ್ನು 7–6 (12), 6–4 ಸೆಟ್‌ಗಳಿಂದ ಮಣಿಸಿದರು.

ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕದ ಎಸ್. ಚಂದನ್ 6–7(3),6–3, 6–2 ಸೆಟ್‌ಗಳಿಂದ ಜಿ. ಯಶವಂತ್ ಅವರನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿದರು. ಅನಿಕೇತ್ ವೆಂಕಟರಾಮನ್ 6–1,6–2 ಸೆಟ್‌ಗಳಿಂದ ನೈಶಿಕ್ ರೆಡ್ಡಿ ಅವರನ್ನು ಪರಾಭವಗೊಳಿಸಿದರು.

ಡಬಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಆರ್. ನೈಶಿಕ್ ಹಾಗೂ ಡಿ. ಪ್ರಣವ್ ಜೋಡಿ 1–6, 6–4, 11–9ರಿಂದ ವಿ. ತರುಣ್ ಹಾಗೂ ದೇವ್ ಸಿನ್ಹಾ ಜೋಡಿಯನ್ನು ಮಣಿಸಿದರು.